# ಅಧ್ಯಾಯ 12

# ನಂಬಿಕೆಯ ಅತಿಶಯವಾದ ಶಕ್ತಿ

ಹಳೆಯ ಒಡಂಬಡಿಕೆಯ ಕಾಲಗಳಲ್ಲಿನ ಮಹಾನ್ ಸೇವಕರ ಬಗ್ಗೆ ಪರಿಗಣಿಸಿದ ಬಳಿಕ (ಅಧ್ಯಾಯ 11), ಲೇಖಕನು ಮುಂದೆ ಇಬ್ರಿಯರು ಈಗ ಪ್ರಸ್ತುತಕಾಲದಲ್ಲಿ ಅನುಸರಿಸುತ್ತಿದ್ದ ದಾರಿಯ ಕಡೆಗೆ ಗಮನವನ್ನು ತಿರುಗಿಸುತ್ತಾನೆ. ನಂಬಿಕೆಯಿಂದ ಜಯ, ಅಗ್ನಿ, ಮತ್ತು ಬಾಧೆಗಳ ಮೂಲಕ ಹಾಯ್ದು ಹೋಗಿರುವವರಿಂದ ಅವರು ಧೈರ್ಯವನ್ನು ತಂದುಕೊಳ್ಳಬಲ್ಲವರಾಗಿದ್ದರು. ಕ್ರೈಸ್ತೀಯ ಜೀವಿತವು ಸಹ ಒಂದು ನಂಬಿಕೆಯ ನಡಿಗೆ ಆಗಿರುತ್ತದೆ, ಆದರೆ ಇಲ್ಲಿ ಅದು ಓಡಬೇಕಾಗಿರುವ ಓಟವೆಂದು ಚಿತ್ರಿಸಲ್ಪಟ್ಟಿದೆ. ಗತಕಾಲದಲ್ಲಿದ್ದ ಆ ನಂಬಿಕೆಯ ವೀರರು ಮತ್ತು ವೀರ ಸ್ತ್ರೀಯರಲ್ಲಿ ಸ್ಥಿರವಾಗಿದ್ದ ನಂಬಿಕೆಯು ವೈಶಿಷ್ಠವಾಗಿತ್ತು, ಮತ್ತು ಕ್ರೈಸ್ತ ಯುಗದಲ್ಲಿ ನಂಬಿಗಸ್ತರಿಂದ ಅದೇ ಗುಣಸ್ವಭಾವವು ತೋರ್ಪಡಿಸಲ್ಪಟ್ಟಿದೆ. ನಮ್ಮ ಮುಖ್ಯ ಗಮನವು ಕ್ರಿಸ್ತನು ಹಾಗೂ ಆತನು ಸಾಧಿಸಿರುವ ಕಾರ್ಯದ ಮೇಲಾಗಿರುತ್ತದೆ.

## ಕ್ರಿಸ್ತನು, ನಮ್ಮ ನಂಬಿಕೆಯನ್ನು ಪರಿಪೂರ್ಣಗೊಳಿಸುವವನು (12:1-3)

**[1]ಆದಕಾರಣ ಇಷ್ಟು ಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು [2]ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯನ್ನಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. [3]ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು.**

**ವಚನ 1.** ನಿತ್ಯವಾದ ಪರಿಣಾಮಗಳನ್ನು ಹೊಂದಿರುವ ಈ ಓಟದಲ್ಲಿ, ನಮಗೆ ಅಭ್ಯಂತರವುಂಟು ಮಾಡುವದಕ್ಕೆ ಯಾವದಕ್ಕೂ ಅವಕಾಶವನ್ನು ಕೊಡಬಾರದು. ನಂಬಿಕೆಯ ಓಟವು ಭಾವನಾತ್ಮಕತೆಗಿಂತಲೂ ಅಥವಾ ಯಾವದೋ "ಅನುಭವ"ದ ಕಾರಣದಿಂದ ನಾವು ರಕ್ಷಿಸಲ್ಪಟ್ಟಿದ್ದೇವೆ ಎಂದು ಯೋಚಿಸುವದಕ್ಕಿಂತಲೂ ಎಷ್ಟೋ ಅಧಿಕವಾದದ್ದು. ಅದು ಕೆಲಸದ ಒಂದು ಜೀವಿತವಾಗಿದ್ದು, ಇಲ್ಲಿ ಅದು ಅತ್ಯುತ್ಸಾಹದ ಓಡುವಿಕೆ[1] ಎಂದು ಚಿತ್ರಿಸಲ್ಪಟ್ಟಿದೆ. ಕ್ರೈಸ್ತ ಓಟವು ಅದ್ಭುತವಾದದ್ದಾದರೂ, ಅದರಲ್ಲಿ ಅಚಲವಾಗಿ ಮುನ್ನಡೆಯಬೇಕಾದರೆ ಕೆಲವು ಸಾರಿ ಅದು ಕಷ್ಟಕರವಾಗಿರುತ್ತದೆ.

1ನೇ ವಚನದಲ್ಲಿ **ಆದಕಾರಣ** (τοιγαροῦν, *toigaroun*) ಎಂಬುದು ಈ ಮುಂಚೆ ಚರ್ಚೆ

ಮಾಡಿದ ಅನೇಕ ನಂಬಿಗಸ್ತ ವ್ಯಕ್ತಿಗಳ ಉದಾಹರಣೆಗಳನ್ನಾಧರಿಸಿ ಈ ವಿಭಾಗವು ಒಂದು ಮುಕ್ತಾಯಕ್ಕೆ ಬರುತ್ತದೆಂಬುದನ್ನು ತೋರಿಸುತ್ತದೆ.

**ಸಾಕ್ಷಿಯವರು** ಎಂಬ ಪದವು μάρτυς (*martus*) ಎಂಬದರಿಂದ ಬಂದದ್ದಾಗಿದ್ದು, ಅದು ಆಂಗ್ಲದಲ್ಲಿ "martyr" (ರಕ್ತಸಾಕ್ಷಿ) ಎಂದಾಯಿತು. ಹೊಸ ಒಡಂಬಡಿಕೆಯಲ್ಲಿ *martus* ಎಂಬುದರ ಅರ್ಥವು ನಂಬಿಕೆಗೋಸ್ಕರ ಸತ್ತವನು ಎಂಬದಾಗಿರುವದಿಲ್ಲ; ಹೇಗೂ, ಅದು ಇಲ್ಲಿ ಆ ದಿಕ್ಕಿನಲ್ಲಿ ಅಭಿವೃದ್ಧಿಗೊಳ್ಳುವದನ್ನು ಆರಂಭಿಸಿತು, ಮತ್ತು ಅಂಥ ಅರ್ಥವು ಮೂರನೆಯ ಶತಮಾನದ ಹೊತ್ತಿಗೆ ಸರ್ವಸಾಧಾರಣವಾಗಿತ್ತು ಎಂದು ಕೆಲವರು ಯೋಚಿಸುತ್ತಾರೆ.[2] ರಕ್ತಸಾಕ್ಷಿಯಾಗಿ ಮರಣಿಸುವಿಕೆಯ ಯೋಚನೆಯನ್ನು ತನ್ನ ನಂಬಿಕೆಗೋಸ್ಕರ ಮರಣಿಸಿ ಪ್ರಥಮ ಶಿಷ್ಯನ ಪ್ರಸ್ತಾಪ ಮಾಡುವದರಿಂದ ಸುಲಭವಾಗಿ ಅರ್ಥೈಸಿಕೊಳ್ಳಬಹುದಾಗಿದೆ: ಅಪೊಸ್ತಲರ ಕೃತ್ಯಗಳು 22:20ನೇ ವಚನವು "ನಿನ್ನ *ಸಾಕ್ಷಿಯಾದ* [*martus*] ಸ್ತೇಫನನ ರಕ್ತವು ಚೆಲ್ಲಿಸಲ್ಪಟ್ಟಾಗ" ಎಂದು ಜ್ಞಾಪಿಸುತ್ತದೆ (ಒತ್ತಿ ಹೇಳಿದ್ದು ನನ್ನದು). ಅಂತಿಪನು ಸಹ ಪ್ರಕಟನೆ 2:13ರಲ್ಲಿ "ನಂಬಿಗಸ್ತನೂ *ಸಾಕ್ಷಿಯೂ* (*martus*) ಆದ ಅಂತಿಪನು ಕೊಲ್ಲಲ್ಪಟ್ಟ ದಿನಗಳಲ್ಲಿ" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ (ಒತ್ತಿ ಹೇಳಲ್ಪಟ್ಟಿದ್ದು ನನ್ನದು). "ಸಾಕ್ಷಿ" ಎಂಬುದು ಈಗಾಗಲೇ ರಕ್ತಸಾಕ್ಷಿಯ ಯೋಚನೆಯನ್ನು ಹೊಂದಿದ್ದಲ್ಲಿ ಈ ಪದರಚನೆಯು ಶಬ್ದಾಧಿಕ್ಯವಾಗಿರುತ್ತದೆ. ಪ್ರಕಟನೆ 17:6ರಲ್ಲಿ, "ಯೇಸುವಿಗೋಸ್ಕರ *ಸಾಕ್ಷಿಕೊಟ್ಟು* ಹತರಾದವರ ರಕ್ತ" (ಒತ್ತಿ ಹೇಳಿದ್ದು ನನ್ನದು) ಎಂಬ ಪದಗುಚ್ಛವು *martus*ನ್ನು ಬಳಸುತ್ತದೆ. KJVಯು ಇದನ್ನು "ರಕ್ತಸಾಕ್ಷಿಗಳು" ಎಂದು ಅನುವಾದಿಸುತ್ತದೆ, ಅನಂತರದ ಅರ್ಥವನ್ನು ಪದಕ್ಕೆ ಸಮರ್ಪಕವಾಗಿ ಅನ್ವಯಿಸುವಂಥದ್ದಾಗಿದೆ.

*Martus* ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಎಂದಿಗೂ "ಪ್ರೇಕ್ಷಕ" ಎಂಬ ಅರ್ಥದಲ್ಲಿ ಬಳಸಲ್ಪಟ್ಟಿರುವದಿಲ್ಲ,[3] ಆದರೆ "ಪ್ರಾಚೀನ ರೋಮನ್ ಕ್ರೀಡಾರಂಗದಲ್ಲಿ ಈ ಯೋಚನೆಯನ್ನು ಹೊರಗಿಡುವದು ಅಸಾಧ್ಯವಾಗಿರುತ್ತದೆ."[4] 11ನೇ ಅಧ್ಯಾಯದಲ್ಲಿ ವ್ಯಕ್ತಿಗಳನ್ನು ಪ್ರೇಕ್ಷಕರೆಂದು ನೋಡುವದು ಓಟದಲ್ಲಿ ಓಡುವವರಿಗೆ ಪ್ರೋತ್ಸಾಹಗೊಳಿಸಲು ಕೂಗುವದು ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ, ಆದರೆ ಒಂದು ವೈಯಕ್ತಿಕ ರೀತಿಯಲ್ಲಿ ಗಟ್ಟಿಯಾಗಿ ಬಾಯ್ಬಿಟ್ಟು ಹೇಳುವದನ್ನು ಈ ವಾಕ್ಯಭಾಗದಲ್ಲಿ ಉದ್ದೇಶಿಸಲಾಗಿರುವದಿಲ್ಲ. ಪ್ರೇಕ್ಷಕರ ಸಾಲುಗಳಿಂದ ಯಾವದೇ ಕೂಗುಗಳು ಇರಲಿಲ್ಲ; ಬದಲಾಗಿ, ನಂಬಿಕೆಯ ಆ ಮಾದರಿ ವ್ಯಕ್ತಿಗಳ ಸಾಕ್ಷಿಯು ಶಾಸ್ತ್ರಗಳಲ್ಲಿ ಮುಂದಿಡಲ್ಪಟ್ಟಿದೆ. ಅವರ ಜೀವಿತಗಳು ಸಾಕ್ಷಿ ಹೇಳುತ್ತವೆ ಯಾಕೆಂದರೆ ಅವರು "ನಂಬಿಕೆಯನ್ನು ಹಿಮ್ಮೆಟ್ಟದೆ ಅರಿಕೆ ಮಾಡುವವರಾಗಿದ್ದರು ಮತ್ತು ತಮ್ಮ ಸಾಕ್ಷಿಯ ವಾಕ್ಯದಿಂದ ಜಯಿಸಿದರು (ನೋಡಿರಿ ಪ್ರಕಟನೆ 12:11)."[5] ಹೇಬೆಲನಂತಹ ಸಾಕ್ಷಿಯವರು – ಯಾತನಿಗೆ ದೇವರು "ಸಾಕ್ಷಿ" (μαρτυρέω, *martureō*) ಆಗಿದ್ದನೋ – ಅಂತ್ಯದ ವರೆಗೂ ನಂಬಿಗಸ್ತರಾಗಿರುವ ಸಾಧ್ಯತೆಗಾಗಿ ಪ್ರೋತ್ಸಾಹವನ್ನು ಮತ್ತು ಸಾಕ್ಷಿಯನ್ನು ಒದಗಿಸುವರು.

ನಾವು **ಇಷ್ಟು ಸಾಕ್ಷಿಯವರ**[ನ್ನು] **ಮೇಘದೋಪಾದಿಯಲ್ಲಿ** ನಮ್ಮ "ಸುತ್ತಲು ಹೊಂದಿರುವದು," ವರ್ತಮಾನ ಕಾಲರೂಪದಲ್ಲಿ ವ್ಯಕ್ತಪಡಿಸಲ್ಪಟ್ಟಿದ್ದು, 11ನೇ ಅಧ್ಯಾಯದಲ್ಲಿ ಹೆಸರಿಸಲ್ಪಟ್ಟಿರುವವರು ಪ್ರೇಕ್ಷಕರಾಗಿರುವವರು ಮಾತ್ರವಲ್ಲದೆ ಪ್ರೋತ್ಸಾಹಗೊಳಿಸುವವರು ಸಹ ಆಗಿದ್ದಾರೆಂಬ ಸೂಚ್ಯಾರ್ಥವನ್ನು ನೀಡುವಂತೆ ತೋರುತ್ತದೆ. ಹೇಗೂ, ಈ ಸನ್ನಿವೇಶದಲ್ಲಿ ವಾಚಕರು ಗತಕಾಲದಲ್ಲಿನ ನಂಬಿಗಸ್ತ ಜನರ ಶ್ರೋತೃಗಳಾಗಿದ್ದರು, ಅವರ ನಂಬಿಕೆಯನ್ನು ಶಾಸ್ತ್ರಗಳ ಮುಖಾಂತರವಾಗಿ ನೋಡುವವರಾಗಿದ್ದರು. ಬಲಹೀನತೆಯ ಹೊರತಾಗಿಯೂ ಅವರು ಗಳಿಸಿ ಜಯಗಳು ಕ್ರೈಸ್ತರು ಅನುಸರಿಸುವದಕ್ಕೆ ಹೋರಾಟಕ್ಕಾಗಿ ಅದ್ಭುತವಾದ ಉದಾಹರಣೆಗಳನ್ನು ಒದಗಿಸಿದ್ದವು.

ಪೌಲನು ಅನೇಕ ಸಾರಿ ಕ್ರೈಸ್ತ ನಂಬಿಕೆಯನ್ನು ಒಬ್ಬನು ನಿಮಯಗಳಿಗೆ ಅನುಗುಣವಾಗಿ ಓಡಬೇಕಾದ ಒಂದು ಓಟವಾಗಿ ಚಿತ್ರಿಸಿದನು (ನೋಡಿರಿ 1 ಕೊರಿಂಥ 9:24; 2 ತಿಮೊಥೆ 2:5). ಇಬ್ರಿಯರಿಗೆ ಪತ್ರಿಕೆಯ ಲೇಖಕನು ವಾಚಕರನ್ನು ರೂಪಕಾರ್ಥದಲ್ಲಿ ಕ್ರೀಡೆಗಳ ರಂಗಕ್ಕೆ ಕರೆದೊಯ್ಯುತ್ತಾನೆ, ಅಲ್ಲಿ ತನ್ನನ್ನು ಒಬ್ಬ ಯುವಕನಾಗಿ ಸಮಯವನ್ನು ಕಳೆಯುವವನಾಗಿ ಊಹಿಸಿಕೊಳ್ಳಬಲ್ಲವನಾಗಿದ್ದನು. ಆತನು 10:36ರಲ್ಲಿ ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರಬಹುದಾಗಿದೆ, ಅಲ್ಲಿ **ತಾಳ್ಮೆ** (ὑπομονή, *hupomonē*) ಎಂಬುದು ಓಟಗಾರನು ಅಂತ್ಯದ ವರೆಗೂ ಸ್ಥಿರವಾದ ಪ್ರಯಾಸ ಪಡುವಿಕೆಯನ್ನು ಸೂಚಿಸುತ್ತದೆ. ಯೂದಾಯದಲ್ಲಿ ಸಹ ವಿವಿಧ ಕ್ರೀಡೆಗಳು ಸರ್ವಸಾಧಾರಣವಾಗಿದ್ದವು, ಅವುಗಳು ಅಲ್ಲಿ ಗ್ರೀಕ್‌ರು ಪ್ರಾಬಲ್ಯತೆಯಲ್ಲಿರುವ ವೇಳೆ ಪರಿಚಯಿಸಲ್ಪಟ್ಟಿದ್ದವು. ಬಹುಪಾಲು ಗ್ರೀಕ್ ಕ್ರೀಡೆಗಳು ಸ್ಪರ್ಧೆಗಳಾಗಿರುತ್ತಿದ್ದು ಅವುಗಳಲ್ಲಿ ತಾಳ್ಮೆಯು ಬಹುಮುಖ್ಯವಾಗಿ ಅಗತ್ಯವಿರುತ್ತಿತ್ತು.[6] "ಓಟ" ಎಂಬುದಕ್ಕೆ ಗ್ರೀಕ್ ಪದವು (ἀγών, *agōn*), ಅದು ಆಂಗ್ಲದಲ್ಲಿ "agonize" (ಸಂಕಟಪಡು) ಎಂದು ಮಾರ್ಪಟ್ಟಿದ್ದು, ಒಂದು ನಿರಂತರವಾದ ಹೋರಾಟವನ್ನು ಸೂಚಿಸುತ್ತದೆ. ಖಂಡಿತವಾಗಿಯೂ, ಕ್ರೈಸ್ತೀಯ ಓಟದಲ್ಲಿ ಹೋರಾಟವು ಪಾಪದ ವಿರುದ್ಧವಾಗಿರುತ್ತದೆ.

**ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು . . . ತೆಗೆದಿಟ್ಟು** ಎಂಬುದು ಓಟಗಾರನು ತನ್ನ ತರಬೇತಿಯ ವೇಳೆಯಲ್ಲಿ ಭಾರವನ್ನು ಹೊತ್ತುಕೊಂಡಿರುವದಾಗಿ ಚಿತ್ರಿಸುತ್ತದೆ. ಆತನು ಸ್ವತಃ ಓಟಕ್ಕಾಗಿ ಎಲ್ಲಾ ಹೆಚ್ಚಿನ ಭಾರವನ್ನು ನಿರ್ಮೂಲಗೊಳಿಸುವನು. "ಹೊರೆ [ಭಾರ]" (ὄγκος, *ogkos*) ಎನ್ನುವಂಥದ್ದು ಒಬ್ಬ ಓಟಗಾರನಿಗೆ ಅಭ್ಯಂತರ ಮಾಡುವ ಯಾವದಿದ್ದರೂ ಅದೆಲ್ಲವನ್ನೂ ಒಳಗೊಂಡಿರುತ್ತದೆ. **ಹತ್ತಿಕೊಳ್ಳುವ** ಎಂಬುದು ಸರಾಗವಾಗಿ ಅರ್ಥವನ್ನು ವ್ಯಕ್ತಪಡಿಸುತ್ತದೆ. ಇದು ಮೋಶೆಯಂತಹ ವ್ಯಕ್ತಿಯನ್ನು ಚಿತ್ರಿಸುತ್ತದೆ, ಆತನು ದೇವರು ಹೆಚ್ಚಾದ ಮಹಿಮೆಗೋಸ್ಕರವಾಗಿ ಇಹಲೋಕದ ಐಶ್ವರ್ಯ ಮತ್ತು ಮಹಿಮೆಯನ್ನು ತೆಗೆದಿಟ್ಟನು (11:24-26). ನಾವು ಆತನ ಮಾದರಿಯನ್ನು ಅನುಸರಿಸಬೇಕು.

"ಹೊರೆ" ("ಭಾರ"; KJV) ಮತ್ತು "ಪಾಪ" (ἁμαρτία, *hamartia*) ಯಾವವು? "ಹೊರೆ"ಯು ನಮ್ಮ ನಿಜವಾದ ಮುಖ್ಯ ಗಮನದಿಂದ ನಮ್ಮನ್ನು ಪಕ್ಕಕ್ಕೆ ಸೆಳೆಯುವ ಯಾವದೇ ಕಾರ್ಯವಾಗಿರುತ್ತದೆ; "ಪಾಪ"ವು ದೇವರ ವಿರುದ್ಧ ಮುಕ್ತವಾದ ಬಂಡಾಯ ಆಗಿರಬಹುದು.[7] ಈ ಪದಗಳು ಪಾಪ, ಭೋಗಾಪೇಕ್ಷೆ, ಗರ್ವ ಇವುಗಳು ಸೇರಿದಂತೆ ಪಾಪದ ಯಾವದೇ ಭಾರ, ಅಥವಾ ಒಬ್ಬ ಕ್ರೈಸ್ತ ಓಟಗಾರನಿಗೆ ಅಡೆತಡೆಯಾಗುವ ಬೇರೆ ಯಾವದೇ ಕಾರ್ಯವಾದರೂ ಆಗಿರಬಹುದಾಗಿದೆ. Bruce ಹೇಳಿದ್ದೇನೆಂದರೆ, "ನಮ್ಮ ಲೇಖಕನು ಪದದ ಸಾಮಾನ್ಯ ಬಳಕೆಯಲ್ಲಿ, ಅಷ್ಟಾಗಿ ಯಾವದೋ 'ಸದಾ ಕಾಡುವ ಪಾಪ'ವನ್ನು ಕುರಿತು ಸೂಚಿಸುತ್ತಿಲ್ಲ, ಆದರೆ ಸ್ವತಃ ಪಾಪವನ್ನೇ ಸೂಚಿಸುತ್ತಿದ್ದಾನೆ, ಅದು ಮುಂದೆ ಅನಿವಾರ್ಯವಾಗಿ ಓಟಗಾರನ ಪಾದಗಳಿಗೆ ಹೊರೆಯಾಗುವಂಥದ್ದು . . ."[8] ಎಚ್ಚರಿಕೆಯ ಮಾತು ನಮ್ಮ ಜೀವನದಲ್ಲಿ ಸಕ್ರಿಯವಾದ ನಂಬಿಕೆಯನ್ನು ನಷ್ಟಗೊಳಿಸುವ ಯಾವದೇ ಪಾಪಕ್ಕೂ ಅನ್ವಯವಾಗುತ್ತದೆ. ನಾವು ಬೇರೆಯವರ ಪಾಪವು ಮಾತ್ರವೇ ಹೇಸಿಗೆಕರವೆಂದು ಯೋಚಿಸುವವರಾಗಿ, ನಮ್ಮ ಜೀವಿತದಲ್ಲಿನ ಪಾಪವನ್ನು ಮನ್ನಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ. ದೇವರಿಗೆ ಪ್ರತಿಯೊಂದು ಪಾಪವೂ ಘೋರವಾಗಿರುತ್ತದೆ; ಆತನ ದೃಷ್ಟಿಯಲ್ಲಿ ಯಾವ ಪಾಪ ಸಹ ಕ್ಷುಲ್ಲಕವಾಗಿರುವದಿಲ್ಲ.

ಇಬ್ರಿಯರಿಗೆ ಪತ್ರಿಕೆಯಲ್ಲಿ ಅಪನಂಬಿಕೆಯ ಪಾಪವು ಪ್ರಮುಖ ಕಳಕಳಿಯಾಗಿರುತ್ತದೆಂದು ಒಬ್ಬ ಲೇಖಕನು ಅಭಿಪ್ರಾಯ ಪಟ್ಟನು.[9] ಅಪನಂಬಿಕೆಯು ದೇವರ ವಾಗ್ದಾನಗಳಲ್ಲಿ ವಿಶ್ವಾಸದ ಕೊರತೆಯೇ ಆಗಿರುತ್ತದೆ. ಅಪನಂಬಿಕೆಯು ಸಂಪೂರ್ಣ ಮತಭ್ರಷ್ಟತೆಗೆ ನಡಿಸಬಲ್ಲದು, ಅದು

ಇಬ್ರಿಯರಿಗೆ ಪತ್ರಿಕೆಯ ಪ್ರಥಮ ವಾಚಕರಿಗೆ ಒಂದು ನಿಜವಾದ ಅಪಾಯವಾಗಿತ್ತು (ನೋಡಿರಿ 6:4-6; 10:26-29). ಇದು ಎಷ್ಟೊಂದು ನಿರಂತರವಾಗಿರುವ ಶೋಧನೆಯೆಂದರೆ ಒಬ್ಬನು ಶಿಲುಬೆಯ ಮೇಲೆ ಕ್ರಿಸ್ತನು ಸಹಿಸಿಕೊಂಡ ನಿಂದನೆಯಲ್ಲಿ ಪಾಲುಗಾರನಾಗುವ ಮೂಲಕ ಅದರಿಂದ ದೂರವಿರುವದಕ್ಕೆ ಪ್ರಯತ್ನಿಸಬೇಕು (ವ. 2).

**ಸ್ಥಿರಚಿತ್ತದಿಂದ ಓಡೋಣ** ಎಂಬುದು ತಾಳ್ಮೆ ಮತ್ತು ಏಕನಿಷ್ಠೆಯಿಂದ ಮುಂದುವರೆಯುವದಕ್ಕೆ ನೀಡಲಾಗಿರುವ ಒಂದು ಕರೆ ಆಗಿರುತ್ತದೆ. ಒಬ್ಬ ಓಟಗಾರನು ಓಟವನ್ನು ಪೂರ್ತಿಗೊಳಿಸಲಿಲ್ಲವಾದರೆ, ಆತನು ಏನನ್ನೂ ಗೆದ್ದುಕೊಳ್ಳುತ್ತಿರಲಿಲ್ಲ. ಕ್ರೈಸ್ತೀಯ ಜೀವಿತದ ವಿಷಯದಲ್ಲಿಯೂ ಹಾಗೆಯೇ ಆಗಿರುತ್ತದೆ. ನಾವು ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಂಡಿರುವಾಗ (ಗಲಾತ್ಯ 6:9) ಮತ್ತು ನಮ್ಮ ಕ್ರೈಸ್ತೀಯ ಓಟದ ಅಂತ್ಯಕ್ಕೆ ಮುಂಚೆಯೇ ನಿಲ್ಲಿಸಿ ಬಿಟ್ಟಿರುವದಾದರೆ ನಿತ್ಯವಾದ ಪ್ರಭಾವವನ್ನು ನಿರೀಕ್ಷಿಸುವದಕ್ಕೆ ಸಾಧ್ಯವಿಲ್ಲ. ನಾವು ಮಹಿಮೆಯೆಡೆಗೆ ಸಾಗಲು ಒಂದು ಚಿಕ್ಕದಾದ ಕ್ಷಿಪ್ರ ಓಟ ಇರುವದಿಲ್ಲ, ಆದರೆ ಅಂತ್ಯದ ವರೆಗೂ ಓಡುವದಕ್ಕೆ ಸಮಯ ಹಾಗೂ ಪ್ರಯಾಸವನ್ನು ತೆಗೆದುಕೊಳ್ಳುವಂತಹ ಓಟವಿರುತ್ತದೆಂಬುದನ್ನು ನಾವು ನೆನಪಿಟ್ಟುಕೊಳ್ಳತಕ್ಕದ್ದು. ಶಾರೀರಿಕವಾಗಿ ಚಟುವಟಿಕೆಯಿಂದ ಇರುವದಕ್ಕಾಗದ ಅನೇಕರು ಈಗಲೂ ಹೃದಯದಲ್ಲಿ ಓಟವನ್ನು ಓಡುತ್ತಿದ್ದಾರೆ. ಬಳಲಿರುವಂಥ ಅಥವಾ ಬಲಹೀನಗೊಂಡಿರುವಂಥ ವೃದ್ಧರಾದ ದೇವಜನರು ತಾವು ಹಿಂದೊಮ್ಮೆ ಮಾಡಿದ ಸೇವೆಯ ಕಾರ್ಯಗಳನ್ನು ಮಾಡಬೇಕೆಂದು ಹಂಬಲಿಸುತ್ತಾರೆ ಆದರೆ ಅವರಿಗೆ ಸಾಧ್ಯವಾಗುವದಿಲ್ಲ. ಕ್ರೈಸ್ತರಿಗೆ ದೈಹೀಕ ಶೌರ್ಯವು ಆಶಾಭಂಗವನ್ನುಂಟು ಮಾಡುವಾಗ, ದೇವರು ಆಗಲೂ ಅವರ ಹೃದಯಗಳಲ್ಲಿರುವದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾನೆ. (1 ಅರಸು 8:18ನ್ನು ಹೋಲಿಸಿರಿ.)

**ವಚನ 2.** ಯೇಸುವನ್ನು ದೃಷ್ಟಿಸುವದರಿಂದ ಎಲ್ಲಕ್ಕಿಂತ ಹೆಚ್ಚಿನ ಪ್ರೋತ್ಸಾಹವು ಬರುತ್ತದೆ, ಆತನು **ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವನು.**[10] ಕ್ರಿಸ್ತನು ನಮ್ಮ ಧನ್ಯನಾದ ವಿಮೋಚಕನಾಗಿರುವದಕ್ಕಾಗಿ ಪಾಪ ಮಾಡುವದಕ್ಕಿದ್ದ ಎಲ್ಲಾ ಭಾರವನ್ನು ಮತ್ತು ಶೋಧನೆಯನ್ನು ತೆಗೆದಿಟ್ಟನು. ನಾವು ನಿರಂತರವಾಗಿ ಆತನನ್ನು ದೃಷ್ಟಿಸತಕ್ಕದ್ದಾಗಿರುತ್ತದೆ, **ಆತನ ಮೇಲೆ** [ನಮ್ಮ] **ನಮ್ಮ ದೃಷ್ಟಿಯಿಟ್ಟು** ಇರಬೇಕು. “ಇಟ್ಟು” (ἀφοράω, *aphoraō* ಎಂಬದರಿಂದ ಬಂದದ್ದು) ಎಂಬ ಪದದಲ್ಲಿರುವ ಯೋಚನೆಯು “ಸ್ಥಿರ ಅಥವಾ ಅಚಲಗೊಳಿಸುವದು” ಎಂದಾಗಿರುತ್ತದೆ. ನಾವು “ಬೇರೆ ಕಾರ್ಯಗಳ ಕಡೆಯಿಂದ ನಮ್ಮ ದೃಷ್ಟಿಯನ್ನು ತಿರುಗಿಸಿ ಯಾವದೋ ಒಂದರ ಮೇಲೆ ನೇಡುವವರಾಗಿರಬೇಕು” – ಒಂದು ಜೀವಾಳವಾದದ್ದರ ಮೇಲೆ, ನಮ್ಮ ಕರ್ತನಾದ ಕ್ರಿಸ್ತನ ಮೇಲೆ ನೇಡಬೇಕು.[11] ನಮ್ಮ ಜೀವಿತಗಳಿಗೆ ಅನುಸರಿಸುವದಕ್ಕಾಗಿ ದೇವರು ಕ್ರಿಸ್ತನ ಉದಾಹರಣೆಯನ್ನು ಒದಗಿಸಿದ್ದಾನೆ, ಯಾಕೆಂದರೆ ಆತನ ಜೀವನ ಮತ್ತು ಉಪದೇಶಗಳು ಪರಿಪೂರ್ಣವಾಗಿವೆ. ನಮಗೆ ಆತನ ಉದಾಹರಣೆಯ ಮೂಲಕ ಬಲಗೊಳ್ಳುವ ಮೂಲಾಧಾರವನ್ನು ಹೊಂದಿದ್ದೇವೆ, ಅದು ಆತನ ಬರೋಣಕ್ಕೆ ಮುಂಚೆ ಅಸ್ತಿತ್ವದಲ್ಲಿರಲಿಲ್ಲ. ಆತನ ಬಾಧೆಯು ಬೇರೆ ರಕ್ತಸಾಕ್ಷಿಗಳ ಬಾಧೆಯನ್ನು ಮೀರಿ ಬಹಳಷ್ಟು ದೂರಕ್ಕೆ ಸಾಗಿದ್ದಾಗಿತ್ತು; ಆದದರಿಂದ, ವಾಚಕರು ತಮ್ಮ ಭಾರಗಳು ಹೊತ್ತುಕೊಳ್ಳಲಿಕ್ಕಾಗದ ವುಗಳೆಂದು ಅನ್ನಿಸಿದರೆ ಆತನನ್ನು ದೃಷ್ಟಿಸಲು ಸಾಧ್ಯವಿತ್ತು. “ಅವರು ಅಪಹಾಸ್ಯಕ್ಕೊಳಗಾಗಬಹುದು, ಹೊಡೆಯಲ್ಪಡಬಹುದು, ಕೊರಡೆಗಳಿಂದ ಹೊಡೆಯಲ್ಪಡಬಹುದು, ಕೈಬಿಡಲ್ಪಡಬಹುದು, ಮಾಹಿತಿದಾರರಿಂದ ಹಿಡಿದು ಕೊಡಲ್ಪಡಬಹುದು, ಸೆರೆಮನೆಗೆ ಹಾಕಲ್ಪಡಬಹುದು, ಸುಳ್ಳು ಆರೋಪಗಳನ್ನು ಹೊರಿಸಲ್ಪಡಬಹುದು ಮತ್ತು ಹತರಾಗಲೂ ಬಹುದು – ಆದರೆ ಆತನು ಅದೆಲ್ಲವನ್ನು ಅನುಭವಿಸಿದನು.”[12]

ನಾವು ಎಡಕ್ಕಾಗಲಿ ಬಲಕ್ಕಾಗಲಿ ನೋಡಬಾರದು, ಮತ್ತು ಖಂಡಿತವಾಗಿಯೂ ಹಿಂದಕ್ಕಂತೂ ನೋಡಲೇ ಬಾರದು (ಲೂಕ 9:62), ಆದರೆ ಮುಂದಕ್ಕೆ ಯೇಸುವಿನ ಕಡೆಗೆ ದೃಷ್ಟಿಸಬೇಕು. ಆತನು ನಮ್ಮ ನಂಬಿಕೆಯ "ಪ್ರವರ್ತಕ" ಆಗಿದ್ದು[13] ಒಂದು "ಜೀವವುಳ್ಳ ಹೊಸ ದಾರಿಯನ್ನು" ತೆರೆದನು (ಇಬ್ರಿಯ 10:20). ಆತನು "ಪೂರೈಸುವವನು" (ಪರಿಪೂರ್ಣಕನು) ಆಗಿದ್ದಾನೆ, ಅದರರ್ಥವು ಹಳೆಯ ಒಡಂಬಡಿಕೆಯಲ್ಲಿ ಕೇವಲ ಎದುರು ನೋಡಲ್ಪಡುತ್ತಿದ್ದ ನಂಬಿಕೆಯ ಮೂಲಕವಾದ ರಕ್ಷಣೆಯನ್ನು ಆತನು ಸಂಪೂರ್ಣತೆಗೆ ತಂದನು ಎಂದಾಗಿರುತ್ತದೆ. ಆದದರಿಂದ ಆತನು ನಮ್ಮನ್ನು "ಪರಿಪೂರ್ಣತೆ"ಗೆ ತರುವವನಾಗಿದ್ದು, ಅದನ್ನು ಹಳೆಯ ಒಡಂಬಡಿಕೆಯು ಮಾಡುವದಕ್ಕೆ ಸಾಧ್ಯವಾಗಲಿಲ್ಲ (10:1). ಕೆಲವರು ಇದನ್ನು ನಮಗೆ ಯೇಸು ನಮ್ಮ ನಂಬಿಕೆಯನ್ನು ಕೊಡುತ್ತಾನೆ ಮತ್ತು ಅದನ್ನು ಪರಿಪೂರ್ಣಗೊಳಿಸುತ್ತಾನೆಂಬ ಅರ್ಥ ಬರುವ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. ಹೇಗೂ, ವೈಯಕ್ತಿಕ ನಂಬಿಕೆಯು ದೇವರಿಂದ ಕೊಡಲ್ಪಡುವಂಥದ್ದಲ್ಲ. ಬದಲಾಗಿ, ಅಂಥ ನಂಬಿಕೆಯು ದೇವರ ವಾಕ್ಯವನ್ನು ಕೇಳುವದರಿಂಧ ಬರುತ್ತದೆಂಬನ್ನು ಬೈಬಲ್ ಸೂಚಿಸುತ್ತದೆ. ನಂಬಿಕೆಯು ಕ್ರಿಸ್ತನಲ್ಲಿ ಮಾತ್ರವೇ ಪರಿಪೂರ್ಣತೆಯನ್ನು ತಲುಪುತ್ತದೆ; ಆತನು ನಂಬಿಕೆಗೆ ಸರ್ವೋಚ್ಚ ಪ್ರೇರಣೆಯಾಗಿರುತ್ತಾನೆ.[14] ಆತನು ನಮ್ಮ ನಂಬಿಕೆಯ ನಡೆಯಲ್ಲಿ ಅನುಸರಿಸುವದಕ್ಕಾಗಿ ನಮಗೆ ಪರಿಪೂರ್ಣ ಮಾದರಿಯಾಗಿರುತ್ತಾನೆ.

ಗ್ರೀಕ್ ವಾಕ್ಯದಲ್ಲಿ "ನಂಬಿಕೆ" ಎಂಬ ಪದಕ್ಕೆ ಮುಂಚೆ "the" ಗುಣವಾಚಿಯು ನಂಬಿಕೆ ಉಗಮ ಸ್ಥಾನವನ್ನು ಸೂಚಿಸುತ್ತಿರಬಹುದಾಗಿದೆ. ನಾವು "ನಂಬಿಕೆ"ಯ ಒಂದು ವಸ್ತುನಿಷ್ಠ ವ್ಯವಸ್ಥೆಯನ್ನು ಹೊಂದಿದ್ದೇವೆ; ಒಬ್ಬನು ವೈಯಕ್ತಿಕವಾಗಿ, ವ್ಯಕ್ತಿನಿಷ್ಠವಾಗಿ ಏನೇ ನಂಬಿದರೂ ಅದನ್ನೆಲ್ಲಾ ಕ್ರೈಸ್ತರು ಸುಮ್ಮನೆ ಅಂಗೀಕರಿಸಿಕೊಳ್ಳಲು ಸಾಧ್ಯವಿಲ್ಲ. ಯೂದನು 3ನೇ ವಚನವು ಹೀಗೆ ಹೇಳುತ್ತದೆ "*ನಂಬಿಕೆಯನ್ನು* ಕಾಪಾಡಿಕೊಳ್ಳುವದಕ್ಕೆ ಹೋರಾಡಿರಿ," ಅಂದರೆ, "ದೇವಜನರಿಗೆ . . . ಒಂದೇ ಸಾರಿ ಒಪ್ಪಿಸಲ್ಪಟ್ಟ *ನಂಬಿಕೆ*" (KJV; ಒತ್ತಿ ಹೇಳಿದ್ದು ನನ್ನದು). ಹಾಗಾದರೆ, "ನಂಬಿಕೆ" ಎಂಬುದು ಇಲ್ಲಿ ಕ್ರೈಸ್ತೀಯ ಸಿದ್ಧಾಂತವನ್ನು, ಎಫೆಸ 4:5ರ "ಒಂದೇ ನಂಬಿಕೆ"ಯನ್ನು ಸೂಚಿಸುತ್ತದೆ.

Bruce ಹೀಗೆ ಬರೆಯುತ್ತಾನೆ, "ಯಾವದೇ ಗೋಚರವಾದ ಅಥವಾ ಸ್ಪರ್ಶಿಸತಕ್ಕಂಥ ಪುರಾವೆಯ ಬೆಂಬಲವಿಲ್ಲದೆ ದೇವರಲ್ಲಿಟ್ಟಿದ್ದ ನಂಬಿಕೆ ಮಾತ್ರವೇ, ಕುಚೋದ್ಯ, ಕೊರಡೆ ಏಟುಗಳು, ಶಿಲುಬೆಗೇರಿಸಲ್ಪಡುವಿಕೆ, ಮತ್ತು ತಿರಸ್ಕಾರ, ಕೈಬಿಡಲ್ಪಡುವಿಕೆ ಮತ್ತು ಸಮಾಜದಿಂದ ಪರಿತ್ಯಜಿಸಲ್ಪಡುವಿಕೆಗಳ ಇನ್ನೂ ಅಧಿಕವಾದ ಕಹಿ ವೇದನೆ ಇವುಗಳ ನಡುವೆ [ಕ್ರಿಸ್ತನನ್ನು] ಮುನ್ನಡೆಸಿತು."[15] ಜನರು ದೇವರಲ್ಲಿ ಆತನಿಟ್ಟಿದ್ದ ವಿಶ್ವಾಸದ ಬಗ್ಗೆ ಅಪಹಾಸ್ಯ ಮಾಡಿದಾಗ **ಆತನು ಅವಮಾನವನ್ನು ಅಲಕ್ಷ್ಯ ಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡನು** (ನೋಡಿರಿ ಮತ್ತಾಯ 27:43).[16] ಆತನು ಇಡೀ ಜೀವನವು ತಂದೆಯಲ್ಲಿ ಆತನಿಟ್ಟಿದ್ದ ವಿಶ್ವಾಸದಲ್ಲಿ ಕೇಂದ್ರಿಕೃತವಾಗಿತ್ತು. ಆತನು ಗೆತ್ಸೇಮನೆ ತೋಟದಲ್ಲಿರುವ ವೇಳೆ ತನ್ನನ್ನು ಸಂಪೂರ್ಣವಾಗಿ ದೇವರಿಗೆ ಒಪ್ಪಿಸಿಕೊಂಡನು (ಮಾರ್ಕ 14:36).

ಅಂದಿನಿಂದ ಶಿಲುಬೆಯ ಕುರಿತಾಗಿದ್ದ ಸಾಮಾನ್ಯವಾದ ಅಭಿಪ್ರಾಯವು ತೀವ್ರವಾಗಿ ಬದಲಾಗಿರುತ್ತದೆ; ಒರಟೊರಟಾದ ಮರದ ತುಂಡಿನ ಮೇಲೆ ಬಾಧೆಯನ್ನನುಭವಿಸಿ ಮರಣಿಸುವದರಲ್ಲಿದ್ದ ನಾಚಿಕೆ, ಮತ್ತು ಅದು ಎಲ್ಲಾ ವರ್ಗದ ಜನರಲ್ಲಿ ಉಂಟು ಮಾಡುತ್ತಿದ್ದ ಅವಮಾನವನ್ನು ನಾವು ಊಹಿಸಿಕೊಳ್ಳುವದಕ್ಕೆ ಆಗುವದೇ ಇಲ್ಲ. ಅದಕ್ಕೆ ಗಲ್ಲಿಗೆ ಏರಿಸಲ್ಪಡುವದಕ್ಕಿಂತ, ವಿದ್ಯುತ್ ಕುರ್ಚಿ, ತಲೆ ಕಡಿಯುವ ಯಂತ್ರ, ಅಥವಾ ಮರಣಾಂತಿಕ ಚುಚ್ಚುಮದ್ದು ಇವುಗಳಿಗಿಂತಲೂ ಎಷ್ಟೋ ಹೆಚ್ಚಾದ ಪ್ರಮಾಣದಲ್ಲಿ ಅಪಕೀರ್ತಿಯಿತ್ತು. ಅದು

ಅತ್ಯಂಥ ಕೆಟ್ಟ ಅಪರಾಧಿಗಳಿಗೋಸ್ಕರ ಮೀಸಲಾಗಿದ್ದ ಶಿಕ್ಷೆಯಾಗಿತ್ತು. ಅಂಥ ಒಬ್ಬ ವ್ಯಕ್ತಿಯು "ಶಾಪಗ್ರಸ್ಥ" ಎಂದು ಪರಿಗಣಿಸಲ್ಪಟ್ಟಿದ್ದನು (ಧರ್ಮೋಪದೇಶಕಾಂಡ 21:22, 23; ನೋಡಿರಿ ಗಲಾತ್ಯ 3:13). ಕ್ರಿಸ್ತನನ್ನು ಒಬ್ಬ ಅಪರಾಧಿಯಂತೆ ಮರಣ ದಂಡನೆಗೆ ಗುರಿಪಡಿಸಲಾಗಿತ್ತು, ಅದು ಒಂದು ಮರದ ಮೇಲೆ ಸಾಯುವದಕ್ಕೆ "ಶಾಪ"ವನ್ನು ಕೂಡಿಸಿ ಕೊಟ್ಟಿರಬಹುದಾಗಿದೆ. ಗುಂಡಿಟ್ಟು ಕೊಲ್ಲಲ್ಪಡಲಿರುವವನ ಅಥವಾ ಗಲ್ಲು ಹಾಕಲ್ಪಡಲಿರುವವನ ಮುಖಕ್ಕೆ ಮುಸುಕನ್ನು (ಕುಂಚಿಗೆಯನ್ನು) ಹಾಕುವದು ಬಹುಕಾಲದದಿಂದ ಬಂದಿರುವ ವಾಡಿಕೆಯಾಗಿರುತ್ತದೆ, ಆದರೆ ಯೇಸುವಿನ ಮುಖವು ಇಡೀ ಜಗತ್ತಿಗೆ ತೋರಿಸಲ್ಪಟ್ಟಿತು. ಅಂದಿನ ಸಾಮಾನ್ಯವಾದ ಭಯೋತ್ಪಾದಕರು, ಇಬ್ಬರು ಕಳ್ಳರು (ಮತ್ತಾಯ 27:38) ಅಥವಾ "ದುಷ್ಕರ್ಮಿಗಳು" (ಲೂಕ 23:32 [KJV; ASV], ಅಂದರೆ "ಕೆಟ್ಟದ್ದನ್ನು ಮಾಡುವವರು," ಅಥವಾ "ದುಷ್ಟರು") ಸಹ ಆತನಿಗೆ ವಿರುದ್ಧವಾಗಿ ಮಾತಾಡಿದರು. ಆತನು ಅನುಭವಿಸಿದ್ದು ವಾಸ್ತವದಲ್ಲಿ "ತನ್ನ ವಿರುದ್ಧವಾಗಿದ್ದ ಹಗೆತನವನ್ನು" (RSV) ಆಗಿತ್ತು; ಯಾಕೆಂದರೆ ಯೇಸು, "ಅವಮಾನವನ್ನು ಅಲಕ್ಷ್ಯಮಾಡಿ," ತನಗೆ ಜನರ ಗುಂಪು ಹೇಳಿದ ಮಾತುಗಳ ಬಗ್ಗೆ ಚಿಂತೆಯನ್ನು ಮಾಡಲಿಲ್ಲ. ತಾನು ತಂದೆಯನ್ನು ಮೆಚ್ಚಿಸುತ್ತಿದ್ದೇನೆಂಬುದನ್ನು ಆತನು ಬಲ್ಲವನಾಗಿದ್ದನು. ಈಗ ಆತನು ಎಲ್ಲಾ ಘನತೆಗಳಿಗಿಂತಲೂ ಹೆಚ್ಚು ಉದಾತ್ತವಾದ ಘನತೆಯನ್ನು ಹೊಂದಿದ್ದಾನೆ, ಯಾಕೆಂದರೆ ಆತನು **ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ**.

ಇಬ್ರಿಯರಿಗೆ ಪತ್ರಿಕೆಯ ಮೂಲ ವಾಚಕರು ಸಹ ಹಗೆತನದ ಪರಿಣಾಮವನ್ನು ಎದುರಿಸುತ್ತಿದ್ದರು ಮತ್ತು ಸಹಿಸಿಕೊಳ್ಳುವದನ್ನು ಮುಂದುವರೆಸುವ ಅಗತ್ಯದಲ್ಲಿದ್ದರು. ಕ್ರಿಸ್ತನು ಅವರ ಮತ್ತು ನಮ್ಮ, ಮತ್ತು, ವಾಸ್ತವದಲ್ಲಿ, ಎಲ್ಲಾ ಮಾನವರ ಆತ್ಮಗಳನ್ನು ರಕ್ಷಿಸುವದಕ್ಕಾಗಿ ಅತ್ಯಧಿಕವಾದ ಬಾಧೆಯನ್ನು "ಸಹಿಸಿಕೊಂಡನು." ಈ ಕೃತ್ಯವು ಆತನಿಗೆ ಮಹಾ **ಸಂತೋಷ**ವನ್ನು ತಂದಿತು.

**ವಚನ 3.** ಈ ಕ್ರೈಸ್ತರು **ಮನಗುಂದಿದವರಾಗಿ ಬೇಸರಗೊಳ್ಳದಂತೆ** ಇದೆಲ್ಲವನ್ನೂ ಸಹಿಸಿಕೊಂಡ **ಆತನನ್ನು ಆಲೋಚಿಸ**ಬೇಕಾಗಿತ್ತು ಮತ್ತು ಆತನಂತೆ ಆಗಬೇಕಾಗಿತ್ತು. "ಆಲೋಚಿಸಿರಿ" (ἀναλογίζομαι, *analogizomai* ಎಂಬದರಿಂದ ಬಂದದ್ದು)[17] ಎಂಬ ಪದವು ಪ್ರಾಥಮಿಕವಾಗಿ "ಒಂದು ಹೋಲಿಕೆ ಮಾಡು" ಎಂಬ ಅರ್ಥವನ್ನು ಕೊಡಬಲ್ಲದು. ಅಪಹಾಸ್ಯ ಮತ್ತು ಅವಮಾನಗಳ ನಡುವೆ ಹೇಗೆ ಸ್ಥಿರವಾಗಿ ಉಳಿಯಬೇಕೆಂಬುದನ್ನು ಕಲಿಯುವದಕ್ಕಾಗಿ ಯೇಸುವಿನ ಬಾಧೆಯನ್ನು ನಮ್ಮ ಬಾಧೆಯೊಂದಿಗೆ ಹೋಲಿಕೆ ಮಾಡಿಕೊಳ್ಳಬಹುದು. "ಅವಮಾನವನ್ನು ಅಲಕ್ಷ್ಯಮಾಡಿ" ಮತ್ತು ಬಾಧೆಯನ್ನು ಅಲಕ್ಷ್ಯ ಮಾಡಿದಾಗ್ಯೂ, ಕ್ರಿಸ್ತನು ಶಿಲುಬೆಯ ಮೇಲೆ ತಾನು ಸಾಧಿಸಿದ ಕಾರ್ಯದಲ್ಲಿನ ಶ್ರೇಷ್ಠ ಸಂತೋಷದ ಮೇಲೆ ಮುಖ್ಯ ಗಮನವನ್ನು ಇಟ್ಟಿದ್ದನು. ನಾವು ಜೊತೆಯ ಮಾನವರಿಂದ ಬರಬಹುದಾದ ತಾತ್ಕಾಲಿಕ ಅವಮಾನಕ್ಕಿಂತಲೂ ಅಧಿಕವಾಗಿ ಶಿಲುಬೆಯಿಂದ ಬರುವಂಥ ಪ್ರಯೋಜನಗಳ ಕುರಿತು ಯೋಚಿಸಬೇಕು.

ಅನೇಕ ಸಾರಿ ನಂಬಿಕೆಯನ್ನು ತ್ಯಜಿಸಿ ಬಿಡುವದರ ಕಡೆಗೆ ಮೊದಲ ಹೆಜ್ಜೆಯು ಅದನ್ನು ಬೆನ್ನತ್ತುವದರಲ್ಲಿ ಮನಗುಂದುವಿಕೆ ಅಥವಾ ಬಳಲಿ ಹೋಗುವಿಕೆಯೇ ಆಗಿರುತ್ತದೆ.[18] ಯೇಸು ನಿದ್ದೆಯಿಲ್ಲದೆ ರಾತ್ರಿಯನ್ನು ಕಳೆದ ನಂತರ ಎಷ್ಟೊಂದು ಬಳಲಿದವನಾಗಿದ್ದನು! ಆತನ ಸಂಕಷ್ಟಗಳ (ಅಥವಾ ಕನಿಷ್ಠ ಆರು ನ್ಯಾಯವಿಚಾರಣೆಗಳು), ಆತನ ಬೆನ್ನಿನ ಮೇಲಾಗಿದ್ದ ಸೀಳಿದ ಗಾಯಗಳು, ಮುಳ್ಳಿನ ಕಿರೀಟದ ಎಡೆಬಿಡದ ನೋವು, ತಾನು ಮಾಡುತ್ತಿರುವದನ್ನು ಅರ್ಥಮಾಡಿಕೊಳ್ಳದವರ ಕಡೆಗಿದ್ದ ಆತನ ಮರುಕ ಮತ್ತು ದುಃಖ ಇವುಗಳನ್ನು ಊಹಿಸಿಕೊಳ್ಳಿರಿ.

ಇದೆಲ್ಲವೂ ಆತನನ್ನು ಹೆಚ್ಚುಕಡಿಮೆ ಕುಂದಿಸಿ ಬಿಟ್ಟಿತ್ತು. ಹಾಗಿದ್ದರೂ, ಆತನ ತನ್ನ ಮುಂದೆ ನಿರೀಕ್ಷೆಯ ಸಂತೋಷವನ್ನು ಇಟ್ಟುಕೊಂಡಿದ್ದನು, ನಾವೂ ಹಾಗೆಯೇ ಮಾಡುತ್ತೇವೆ. ನಾವು ಅಂತಿಮವಾಗಿ ಸಿಕ್ಕುವ ಲಾಭದ ಮೇಲಿನ ನಿರೀಕ್ಷೆಯನ್ನು ಕಳಕೊಳ್ಳುವಾಗ, ನಾವು ಶೀಘ್ರವೇ ಅದರ ಬೆನ್ನುತ್ತುವದನ್ನು ಬಿಟ್ಟು ಬಿಡುತ್ತೇವೆ. ನಾವು "ಮುಂದೇ ಇಟ್ಟಿರುವ ಬಿರುದನ್ನು ಗುರಿಮಾಡಿಕೊಂಡು ಓಡುತ್ತಾ ಇರಬೇಕು" (ಫಿಲಿಪ್ಪಿ 3:14).

ಕ್ರಿಸ್ತನ ಬಹುಮಾನವು ಆತನ ತಂದೆಯ ಸಾಮಿಪ್ಯಕ್ಕೆ ಹಿಂದಿರುಗುವದಾಗಿತ್ತು, ಆತನ ಬಲಗಡೆಯಲ್ಲಿ ಕುಳಿತುಕೊಳ್ಳುವದಾಗಿತ್ತು, ಅದು ಸಾಧ್ಯವಿರುವ ಅತ್ಯಂಥ ಮಹಾನ್ ಗೌರವದ ಸ್ಥಾನವಾಗಿರುತ್ತದೆ. ಇಲ್ಲಿ ಬಳಸಲಾಗಿರುವ ಗ್ರೀಕ್ ಕ್ರಿಯಾಪದದ ಸಂಪೂರ್ಣವಾಚಿ ಕಾಲರೂಪವು ಆತನು ಗತಕಾಲವೊಂದರಲ್ಲಿ ಆಸೀನನಾದನು ಮತ್ತು ಇಂದಿಗೂ ಆ ದೈವಿಕ ಸಿಂಹಾಸನದ ಮೇಲೆ ಆಸೀನನಾಗಿರುವದನ್ನು ಮುಂದುವರೆಸಿರುತ್ತಾನೆಂಬುದನ್ನು ಸೂಚಿಸುತ್ತದೆ.[19] ಕ್ರಿಸ್ತನು ತನ್ನ ಮೆಸ್ಸೀಯತ್ವವನ್ನು ನಿರಾಕರಿಸಿದಂಥ ಅಜ್ಞಾನಿಗಳಾದ **ಪಾಪಿಗಳಿಂದ** ಬಹಳವಾದ ನೋವನ್ನು ಮತ್ತು ದಬ್ಬಾಳಿಕೆಯನ್ನು ಸಹಿಸಿಕೊಂಡನು. ಹಾಗಿದ್ದಾಗ್ಯೂ, ಆತನು ತಾನೇನು ಮಾಡಬೇಕಾಗಿತ್ತೋ ಅದನ್ನು ಮನಃಪೂರ್ವಕವಾಗಿ ಸ್ವೀಕರಿಸಿಕೊಂಡನು ಯಾಕೆಂದರೆ ಆತನು ತನಗೋಸ್ಕರ ಏನು ಕಾದಿರುತ್ತದೆಂಬುದನ್ನು ಬಲ್ಲವನಾಗಿದ್ದನು.

ಆದುದರಿಂದ, ಓಟವು ನಮ್ಮ ಮುಂದೆ ಇಡಲ್ಪಟ್ಟಿದೆ. ಅದು ಕಠಿಣ ಪ್ರಯಾಸ ಮತ್ತು ಸಂಕಷ್ಟಗಳಿಂದ ತುಂಬಿದ್ದಾಗಿದೆ. ಅದನ್ನು ನಂಬಿಗಸ್ತಿಕೆಯಿಂದ ಓಡಬೇಕಾದರೆ, ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನು ತೆಗೆದು ಹಾಕುವ ಮೂಲಕ ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಬೇಕು. ನಾವು ಯೇಸುವಿನ ಮೇಲೆಯೇ ದೃಷ್ಟಿಯನ್ನಿಟ್ಟವರಾಗಿ ಉಳಿಯಬೇಕು, ನಾವು ಎಂದಿಗೂ ಬಿಟ್ಟು ಬಿಡುವವರಾಗಿರದೆ ಅಂತ್ಯದ ವರೆಗೂ ಛಲ ಬಿಡದೆ ಮುಂದುವರೆಯಬೇಕು. ನಮಗಿಂತ ಮುಂಚೆ ಹೋಗಿರುವ ನಂಬಿಗಸ್ತರನ್ನು ದೇವರು ಹೇಗೆ ಅನುಮೋದನೆ ಮಾಡಿದನೋ ಹಾಗೆಯೇ, ಮುಕ್ತಾಯದ ಗೆರೆಯ ಬಳಿಯಲ್ಲಿ ನಮಗೋಸ್ಕರ ಕಿರೀಟದೊಂದಿಗೆ ಕಾಯುತ್ತಿರುವದನ್ನು ಕಾಣುವೆವು.

## ದೇವರ ಮಕ್ಕಳಾಗಿ ಶಿಕ್ಷಿಸಲ್ಪಡುವದು (12:4-11)

**4 ನೀವು ಪಾಪಕ್ಕೆ ವಿರೋಧವಾಗಿ ಹೋರಾಡುವದರಲ್ಲಿ ಪ್ರಾಣಾಪಾಯದ ತನಕ ಇನ್ನೂ ಅದನ್ನು**
**ಎದುರಿಸಲಿಲ್ಲ. 5 ಮಕ್ಕಳಿಗೆ ಹೇಳುವಂತೆ ನಿಮಗೆ ಹೇಳಿದ ಎಚ್ಚರಿಕೆಯ ಮಾತನ್ನು**
**ಮರೆತುಬಿಟ್ಟಿದ್ದೀರೋ? ಏನೆಂದರೆ –**

**ಮಗನೇ, ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬೇಡ;**
**ಆತನು ನಿನ್ನನ್ನು ಗದರಿಸುವಾಗ ಬೇಸರ ಗೊಳ್ಳಬೇಡ;**
**6 ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿ ಸುತ್ತಾನೆ;**
**ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗ ನನ್ನು ಹೊಡೆಯುತ್ತಾನೆ ಎಂಬುದು.**

**7 ನೀವು ಶಿಕ್ಷಿತರಾಗುವದಕ್ಕಾಗಿಯೇ ನಿಮಗೆ ಶಿಕ್ಷೆಯಾಗುತ್ತದೆಂದು ತಿಳಿದು ಅದನ್ನು ಸಹಿಸಿಕೊಳ್ಳಿರಿ;**
**ದೇವರು ನಿಮ್ಮನ್ನು ಮಕ್ಕಳೆಂದು ನಡಿಸುತ್ತಾನೆ. 8 ತಂದೆಯಿಂದ ಶಿಕ್ಷೆಹೊಂದದ ಮಗನೆಲ್ಲಿ?**
**ಮಕ್ಕಳೆಲ್ಲರೂ ಹೊಂದುವ ಶಿಕ್ಷೆಯು ನಿಮಗುಂಟಾಗದಿದ್ದರೆ ನೀವು ಹಾದರಿಂದ ಹುಟ್ಟಿದವರೇ**
**ಹೊರತು ಪುತ್ರರಲ್ಲ. 9 ಇದು ಮಾತ್ರವಲ್ಲದೆ ನಮ್ಮನ್ನು ಶಿಕ್ಷಿಸಿದಂಥ ಶರೀರಸಂಬಂಧವಾದ**
**ತಂದೆಗಳನ್ನು ಸನ್ಮಾನಿಸಿದೆವಷ್ಟೆ; ನಮ್ಮ ಆತ್ಮಗಳಿಗೆ ತಂದೆಯಾಗಿರುವಾತನಿಗೆ ನಾವು ಇನ್ನೂ**

**ಹೆಚ್ಚಾಗಿ ಒಳಪಟ್ಟು ಜೀವಿಸಬೇಕಲ್ಲವೇ. [10]ಆ ತಂದೆಗಳು ಕೆಲವು ದಿವಸಗಳ ಪ್ರಯೋಜನವನ್ನು ಲಕ್ಷ್ಯಕ್ಕೆ ತೆಗೆದುಕೊಂಡು ತಮ್ಮ ಮನಸ್ಸಿಗೆ ತೋರಿದಂತೆ ನಮ್ಮನ್ನು ಶಿಕ್ಷಿಸಿದರು; ಆತನಾದರೋ ನಾವು ತನ್ನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂದು ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ. [11]ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುತ್ತದೆ.**

ಶಿಕ್ಷೆ ಮಾಡುವದು ಅವರ ಮೇಲೆ ದೇವರು ಇಟ್ಟಿರುವ ಪ್ರೀತಿಯನ್ನು ತೋರಿಸುತ್ತದೆಂಬುದಕ್ಕೆ ಲೇಖಕನು ಇಬ್ರಿಯರಿಗೆ ಪುರಾವೆಗಳನ್ನು ಕೊಡುತ್ತಾನೆ. ಮೊದಲನೆಯದಾಗಿ, ಶಾಸ್ತ್ರಗಳು ಈ ಸತ್ಯಕ್ಕೆ ಸಾಕ್ಷಿ ಕೊಡುತ್ತವೆಂಬುದನ್ನು ಆತನು ಘೋಷಿಸಿದನು. ನಂತರ, ವೈಯಕ್ತಿಕ ಅನುಭವದ ಮೈಲಕ ತತ್ವವು ಕಲಿತುಕೊಳ್ಳಲ್ಪಡುತ್ತದೆಂಬ ನಿರ್ಧಾರಕ್ಕೆ ಆತನು ಬರುತ್ತಾನೆ, ಯಾಕೆಂದರೆ ಅದರಲ್ಲಿ ನಾವು ತನ್ನ ಮಗುವಿನ ಕಡೆಗೆ ಪ್ರೀತಿಯುಳ್ಳ ತಂದೆಯ ಕ್ರಿಯೆಗಳನ್ನು ಕಾಣುತ್ತೇವೆ. ಕಡೆಯದಾಗಿ, ಆತನು ಶಿಕ್ಷಿಸುವದರ ಆಶೀರ್ವಾದಕರವಾದ ಫಲಿತಗಳನ್ನು ಬಣ್ಣಿಸುತ್ತಾನೆ.

**ವಚನ 4.** ಪ್ರಥಮ ವಾಚಕರು **ಪಾಪಕ್ಕೆ ವಿರೋಧವಾಗಿ** ಹೋರಾಟದಲ್ಲಿ ತೊಡಗಿದ್ದರು, ಅದು ಯೇಸುವಿಗೋಸ್ಕರ (ತಮ್ಮ) **ರಕ್ತವನ್ನು ಸುರಿಸುವಷ್ಟರ ತನಕ** (ಪ್ರಾಣಾಪಾಯದ ತನಕ) **ಇನ್ನೂ** ಅವರನ್ನು ನಡಿಸಿರಲಿಲ್ಲ. ಹೋರಾಟವು ದೇವರ ಶಿಕ್ಷಿಸುವಿಕೆಯನ್ನು ಒಂದು ಅಂತಿಮ ಆಶಿರ್ವಾದವಾಗಿ ಅಂಗೀಕರಿಸಿಕೊಳ್ಳುವದಕ್ಕೆ ಕಲಿತುಕೊಳ್ಳುವದನ್ನು ಒಳಗೊಂಡಿತ್ತು. ಹಿಂದೆ ಯಾರೊಬ್ಬನೂ ರಕ್ತಸಾಕ್ಷಿಯಾಗಿ ಮರಣಿಸಿರಲಿಲ್ಲ ಎಂದು ಈ ವಚನವು ಹೇಳುವದಿಲ್ಲ. (ಅಪೊಸ್ತಲನಾದ ಯಾಕೋಬನು ಕತ್ತಿಯಿಂದ ಕೊಲ್ಲಲ್ಪಟ್ಟಿದ್ದನು; ಅಪೊಸ್ತಲರ ಕೃತ್ಯಗಳು 12:2.) ಅವರಲ್ಲಿ ಯಾರೊಬ್ಬರೂ ಮುಂದೊಂದು ದಿನ ಕ್ರಿಸ್ತನಂಬಿಕೆಗಹೋಸ್ಕರ ಮರಣಿಸುವವರಾಗಿರಲಿಲ್ಲ ಎಂಬ ಅರ್ಥವನ್ನೂ ಇದು ಕೊಡುವದಿಲ್ಲ. ಕ್ರೈಸ್ತರು ರಕ್ತಸಿಕ್ತ ಬೆನ್ನುಗಳನ್ನು ಹೊಂದಿರಲಿಲ್ಲ ಎಂದಾಗಲಿ (ಪೌಲನ ಹಾಗೆ) ಅಥವಾ ಕಲ್ಲೇಸೆಯಲ್ಪಟ್ಟು ಕೊಲ್ಲಲ್ಪಡಲಿಲ್ಲ (ಯೇಸುವಿನ ಶರೀರಸಂಬಂಧವಾದ ಸಹೋದರನಾಗಿದ್ದ ನೀತಿವಂತನಾದ ಯಾಕೋಬನು ರೀತಿಯಲ್ಲಿ) ಎಂದಾಗಲಿ ಸಹ ಅದರ ಅರ್ಥವಾಗಿರುವದಿಲ್ಲ.[20] ಅವರು ಹಿಂಸೆಯಿಂದ ದೂರವಾಗಿ ತಪ್ಪಿಸಿಕೊಳ್ಳುವಿಕೆಗೆ ಅವರ ಹೇಡಿತನ ಕ್ರಿಯೆಗಳು ಅಥವಾ ಯೆಹೂದಿ ಮತದೊಂದಿಗೆ ರಾಜಿ ಮಾಡಿಕೊಳ್ಳುವಿಕೆ ಸಹ ಕಾರಣವಾಗಿದ್ದಿರಬಹುದಾಗಿದೆ. ಇಂದು ರಾಜಿ ಮಾಡಿಕೊಳ್ಳುವಿಕೆಯು ಒಂದು ಸಮಸ್ಯೆಯಾಗಿರುತ್ತದೆ: ಹಿಂದೆ ಬಾಧೆಯನ್ನು ಅನುಭವಿಸಬೇಕಾಗದವರಲ್ಲಿ ಇದ್ದಂಥ ಧೈರ್ಯವು ಇಂದಿನ ಕೆಲವು ಜನರಲ್ಲಿ ಇಲ್ಲದಂತಾಗಿರುತ್ತದೆ. ಅವರು ಕ್ರೈಸ್ತತ್ವದ ಒಂದು "ಮೃದುವಾದ" ವಿಧವನ್ನು ಆಚಾರ ಮಾಡುವ ಮೂಲಕ ಹಿಂಸೆಗೊಳಗಾಗದಂತೆ ದೂರವಿರುತ್ತಾರೆ, ಬೇರೆಯವರ ಕೈಗಳಲ್ಲಿ ಬಾಧೆಯನ್ನನುಭವಿಸದಷ್ಟು ದಯೆ ಹಾಗೂ ಸಹಿಷ್ಣುಗಳಾಗಿ ಇರುವವರಾಗಿದ್ದಾರೆ!

**ವಚನಗಳು 5, 6. ಶಿಕ್ಷೆಯು** ಬರುವದೆಂದು ಶಾಸ್ತ್ರಗಳು ನಮಗೆ ಹೇಳುತ್ತವೆ (ವ. 5). ಶಾಸ್ತ್ರಗಳು ಹೇಳುವದನ್ನು ಈ ವಾಚಕರು **ಮರೆತು ಹೋಗಿದ್ದರೋ**? ಲೇಖಕನು ಈ ಆರೋಪವನ್ನು ಅವರ ಮೇಲೆ ಹೊರಿಸುತ್ತಾನೆ, ಆದ್ದರಿಂದ ಅವರು ಮರೆತು ಹೋಗಿದ್ದರೆಂದು ನಾವು ಭಾವಿಸಿಕೊಳ್ಳಬೇಕು.

ಈ ವಚನಗಳಲ್ಲಿರುವ ಪ್ರಶ್ನೆಯು ಜ್ಞಾನೋಕ್ತಿ 3:11, 12ರಿಂದ ತೆಗೆದುಕೊಂಡದ್ದು ಮತ್ತು ಅದು ನೇರವಾಗಿ ಪ್ರಥಮ ಶತಮಾನದಲ್ಲಿನ ಇಬ್ರಿಯರಿಗೆ ನೇರವಾಗಿ ಹೇಳಲ್ಪಟ್ಟಿತೋ ಎಂಬಂತೆ ಅದನ್ನು ಅವರಿಗೆ ಅನ್ವಯಗೊಳಿಸಲಾಗಿರುತ್ತದೆ. ನಾವು ಹೀಗೆ ಯೋಚಿಸಬಹುದು,

"ಜ್ಞಾನೋಕ್ತಿಗಳಲ್ಲಿ ಬುದ್ಧಿ ಹೇಳಲ್ಪಟ್ಟಿರುವ 'ಮಗನೇ' ಎಂಬುವವನು ನಮ್ಮಲ್ಲಿ ಯಾರೊಬ್ಬನೂ ಆಗಿರಲಾರನು!" ಬೈಬಲ್ ಯಾವಾಗಲೂ ಪ್ರಸ್ತುತವಾದದ್ದು; ಅದು ಯಾವಾಗಲೂ ಅನ್ವಯವಾಗುವಂಥದ್ದು. ಹಳೆಯ ಒಡಂಬಡಿಕೆಯಲ್ಲಿನ ಮೂಲಭೂತ ಸತ್ಯವು ಸಾಧ್ಯವಾಗುವ ಎಲ್ಲಾ ಸಂದರ್ಭಗಳಲ್ಲಿ ನಮಗೆ ಅನ್ವಯವಾಗತಕ್ಕದ್ದು. ನಮ್ಮ ದೇವರು ತಾನು **ಪ್ರೀತಿಸುವವ**ರನ್ನು "ಶಿಕ್ಷಿತರನ್ನಾಗಿಸುತ್ತಾನೆ" ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ.

ನಾವು ಈ ಮುಂಚೆ 3:7-11ರಲ್ಲಿ ಈ ವಿಧವಾದ ಅನ್ವಯಿಕೆಯು ಮಾಡಲ್ಪಡುವದನ್ನು ಕಂಡೆವು, ಅಲ್ಲಿ ಶತಮಾನಗಳ ಮುಂಚೆ ಹೇಳಲಾದ ಬುದ್ಧಿವಾದವು ಇಬ್ರಿಯರಿಗೆ ಪತ್ರಿಕೆಯ ಪ್ರಥಮ ವಾಚಕರಿಗೆ ಅನ್ವಯಗೊಳಿಸಲ್ಪಟ್ಟಿತು (ನೋಡಿರಿ ಕೀರ್ತನೆ 95:7-11). ಉಲ್ಲೇಖಿಸಲಾಗಿರುವ ವಾಕ್ಯಭಾಗವು "ಶಿಕ್ಷೆ" (παιδεία, *paideia* ಎಂಬದರಿಂದ ಬಂದದ್ದು) ಯ ಕುರಿತಾಗಿರುತ್ತದೆ, ಅದರಲ್ಲಿ ಒಂದು ಮಗುವನ್ನು ತರಬೇತುಗೊಳಿಸುವ ಮತ್ತು ಉಪದೇಶಗೊಳಿಸುವ ಇಡೀ ಪ್ರಕ್ರಿಯೆಯು ಸೇರಿರುತ್ತದೆ.[21] ಶಾಸ್ತ್ರೀಯ ಗ್ರೀಕ್ ಭಾಷೆಯಲ್ಲಿ, ಈ ಪದವು ಒಂದು "ಶಿಕ್ಷಣ"ವನ್ನು ಸೂಚಿಸುತ್ತದೆ.[22] "ಶಿಕ್ಷೆ" ಈ ಪದದ ಅರ್ಥದಲ್ಲಿ ಅಗತ್ಯವಾಗಿರುವದಿಲ್ಲ, ಆದರೆ ಸನ್ನಿವೇಶದಲ್ಲಿ ಒಂದು ವಿಧವಾದ "ಬಾಧೆಯನ್ನನುಭವಿಸುವವಿಕೆ" ಸೂಚಿಸಲ್ಪಟ್ಟಿದೆ. ಸಾಮಾನ್ಯ ಯೆಹೂದಿ ಅಭಿಪ್ರಾಯದಲ್ಲಿ, ಬಾಧೆಯನ್ನು ದೇವರಿಂದ ಒಂದು ಶಿಕ್ಷೆ, ಅಥವಾ ಕಲಿಕೆಯ ವಿಧಾನವೆಂದು ಅರ್ಥಮಾಡಿಕೊಳ್ಳಲ್ಪಟ್ಟಿತ್ತು.[23]

**ವಚನಗಳು 7, 8.** ನಾವು **ಪುತ್ರ**ರಾಗಿ ಬಾಧೆಯನ್ನನುಭವಿಸುವಾಗ (ವ. 7), ನಾವು ಮಗನನ್ನು ಅನುಸರಿಸುವವರಾಗಿದ್ದೇವೆ (5:8). ಅದರ ಫಲಿತವು ಮಹಿಮಕರವಾಗಿರುತ್ತದೆ. ಇಬ್ರಿಯ 2:10ನೇ ವಚನವು ಯೇಸು "ಬಹು ಮಂದಿ ಪುತ್ರರನ್ನು ಮಹಿಮೆಗೆ ಸೇರುವದನ್ನು" ಆತನ "ಬಾಧೆಗಳ" ಸಂಗಡ ಸಂಬಂಧಗೊಳಿಸುತ್ತದೆ. ಪೌಲ ಹಾಗೂ ಬಾರ್ನಬರು ಅಪೊಸ್ತಲರ ಕೃತ್ಯಗಳು 14:21, 22ರಲ್ಲಿ ಹೇಳಿದ ರೀತಿಯಲ್ಲಿ ಒಬ್ಬನೂ ಸ್ವಲ್ಪವಾದರೂ ಸಂಕಷ್ಟವನ್ನು ಅನುಭವಿಸಿದ ಹೊರತು ಅಂತಿಮ ಮಹಿಮೆಯನ್ನು ಪ್ರವೇಶಿಸುವದನ್ನು ಎದುರು ನೋಡಬಾರದು. ಆ ವಾಕ್ಯಭಾಗವು "ಸಂಕಟ ಕಾಲ" ಎಂದು ಹೇಳಲ್ಪಡುವ ಸಮಯವನ್ನು ಸೂಚಿಸುವದಿಲ್ಲ, ಆದರೆ ಈ ಜೀವನದಲ್ಲಿ ಬರುವ ನಿರಂತರವಾದ ಸಂಕಷ್ಟಗಳನ್ನು ಸೂಚಿಸುತ್ತದೆ.

**ಶಿಕ್ಷೆ**ಯು ದೇವರು ತನ್ನ **ಮಕ್ಕಳ** ಮೇಲೆ ಹೊಂದಿರುವ ಪ್ರೀತಿಯ ಒಂದು ಸೂಚನೆಯಾಗಿರುತ್ತದೆ. ಬಾಧೆಯು ಇಲ್ಲದಿರುವಿಕೆಯು ನಮ್ಮನ್ನು ಸೈತಾನನ ಮಕ್ಕಳೆಂದು ಸೂಚಿಸಬಹುದಾಗಿದೆ! ನಮ್ಮ ಸ್ವಭಾವವೇ ನಮಗೆ ಶಿಕ್ಷೆಯ ಅಗತ್ಯವಿರುವಂಥದ್ದಾಗಿದೆ (10ನೇ ವಚನದಲ್ಲಿ ಪರೋಕ್ಷವಾಗಿ ಸೂಚಿಸಲ್ಪಟ್ಟಿರುವ ಹಾಗೆ). ಅದು ನಮಗೆ "ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ" (2 ಕೊರಿಂಥ 4:17). ಇಲ್ಲಿ ಮುಖ್ಯ ಯೋಚನೆಯು ಏನೆಂದರೆ ನಾವು ನಂಬಿಕೆಯ ನಿಮಿತ್ತವಾಗಿ ಸ್ವಲ್ಪ ಕಷ್ಟವನ್ನು **ಸಹಿಸಿಕೊಳ್ಳು**ವಾಗ ಸೋತು ಹೋಗಬಾರದು.

ನಾವು ದೇವರ ಶಿಕ್ಷಿಸುವಿಕೆಯನ್ನು ಏಕೆ ಬಯಸಬೇಕು ಅಥವಾ ಅದನ್ನು ನಮಗೆ ಒಳ್ಳೇದೆಂದು ಕಾಣಬೇಕು? ಲೇಖಕನು ಮೂರು ಕಾರಣಗಳನ್ನು ಕೊಡುತ್ತಾನೆ. (1) ನಾವು ದೇವರ ಮಕ್ಕಳೆಂಬುದಕ್ಕೆ ಅದೊಂದು ಖಚಿತವಾದ ಸೂಚನೆಯಾಗಿರುತ್ತದೆ (ವ. 8). ಅಶಿಕ್ಷಿತ ಮಕ್ಕಳು ಪ್ರೀತಿಸಲ್ಪಡದ ಮಕ್ಕಳು. Donald Guthrie ಹೀಗೆ ಬರೆದನು, "ಒಬ್ಬ *ಮಗ*ನನ್ನು ಶಿಕ್ಷಿತಗೊಳಿಸಲು ನಿರ್ಲಕ್ಷಿಸುವ ಒಬ್ಬ *ತಂದೆ*ಯು ತಂದೆಯಾಗಿ ತನ್ನ ಸಾಮರ್ಥ್ಯದಲ್ಲಿ ಕೊರತೆಯುಳ್ಳವನಾಗಿದ್ದಾನೆ, ಮತ್ತು ಎಲ್ಲಾ ಶಿಕ್ಷೆಗೊಳಿಸುವಿಕೆಯಿಂದ ತಪ್ಪಿಸಿಕೊಳ್ಳುತ್ತಿರುವ ಒಬ್ಬ ಮಗನು ತನ್ನ ಪುತ್ರತ್ವವನ್ನು ಕಳೆದುಕೊಳ್ಳುತ್ತಿದ್ದಾನೆ."[24] (2) ನಾವು ಅನಂತರದಲ್ಲಿ ಹಿಂದಿನದನ್ನು

ನೆನಪಿಸಿಕೊಂಡು ಶಿಕ್ಷೆಯು ನಮಗೆ ಒಳ್ಳೇದಾಗಿತ್ತು ಮತ್ತು ಪರಿಪಕ್ವವುಳ್ಳ ಪ್ರಾಯಸ್ಥರಾಗುವಂತೆ ನಮಗೆ ಸಹಾಯ ಮಾಡಿತೆಂಬುದನ್ನು ಅರಿತುಕೊಳ್ಳುವೆವು (ವಚನಗಳು 9, 10). (3) ಇದರ ಮೂಲಕ ನಾವು ಆತನ "ಪರಿಶುದ್ಧತೆಯಲ್ಲಿ ಪಾಲುಗಾರರಾಗುವೆವು" (ವ. 10). ಈ ಹಂತದಲ್ಲಿ ಮಾತ್ರವೇ ಪತ್ರಿಕೆಯು ದೇವರನ್ನು ನಮ್ಮ "ತಂದೆ" ಎಂಬದಾಗಿ ಸೂಚಿಸುತ್ತದೆ (ವ. 9).

ಲೇಖಕನು **ಹಾದರದಿಂದ ಹುಟ್ಟಿದ** ಮಕ್ಕಳಿಗೆ ಯಾವದೇ ಸ್ವಾಸ್ಥ್ಯವು ಕೊಡಲ್ಪಡದಿರುತ್ತಿದ್ದ ಪ್ರಾಚೀನ ಪದ್ಧತಿಯನ್ನು ನಿಜವೆಂದು ಒಪ್ಪಿಕೊಳ್ಳುತ್ತಾನೆ. ರೋಮನ್ ಕಾನೂನಿನ ಅಡಿಯಲ್ಲಿ, ಅಂಥ ಮಕ್ಕಳು **ತಂದೆ**[ಯ] ನಿಯಂತ್ರಣದಲ್ಲಿರುತ್ತಿರಲಿಲ್ಲ, ಆತನು ಅವರಿಗೆ ಉಪದೇಶವನ್ನೂ ಕೊಡುತ್ತಿರಲಿಲ್ಲ.[25] ದೇವರು ಶಿಕ್ಷಿತರಾಗುವಂತೆ ನಮಗೆ ಅನುಮತಿಸುವಾಗ, ಆತನು ನಮ್ಮ ತಂದೆ ಮತ್ತು ನಾವು ಲೋಕದಿಂದ ಕೀಳುಜಾತಿಯವರೆಂದು ಎಣಿಸಲ್ಪಟ್ಟಿದ್ದರೂ, ಆತನ ಕಾನೂನುಬದ್ಧ ಮಕ್ಕಳು ಎಂಬುದನ್ನು ತೋರ್ಪಡಿಸುತ್ತಾನೆ.

**ವಚನಗಳು 9, 10.** ಬಾಧೆಯ ಕುರಿತಾದ ಒಂದು ವಿಭಾಗದಲ್ಲಿ **ಶಿಕ್ಷೆಯ** ಬಗ್ಗೆ ಸೇರ್ಪಡೆಗೊಳಿಸಿರುವದು ಮಹತ್ವಪೂರ್ಣವಾದದ್ದು. ತನ್ನ ಮಕ್ಕಳನ್ನು ಶಿಕ್ಷಿತಗೊಳಿಸುವದರಲ್ಲಿ, ಒಬ್ಬ ಒಳ್ಳೇ **ತಂದೆ**ಯು ಅವರ ಮೇಲೆ ಸ್ವಲ್ಪ ಪ್ರಮಾಣದಲ್ಲಿ ವೇದನೆಯನ್ನು ಬಳಸಬಹುದು. ಖಂಡಿತವಾಗಿಯೂ, ಅವರು ಆ ಸಮಯದಲ್ಲಿ ಅಂಥ ಶಿಕ್ಷೆಯ ದಾರಿಯನ್ನು ಅವರು ಅರ್ಥಮಾಡಿಕೊಳ್ಳದೆ ಹೋಗಬಹುದು ಅಥವಾ ಬಯಸದಿರಬಹುದು. ನಮ್ಮ ತಂದೆಯು **ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ**, ಆ ಸಮಯದಲ್ಲಿ ಅದು ಇಷ್ಟವಾಗದಿದ್ದಾಗ್ಯೂ, ಒಳ್ಳೇ ಫಲಿತಗಳನ್ನು ಉಂಟು ಮಾಡುವದಕ್ಕೋಸ್ಕರ ಶಿಕ್ಷಿಸುತ್ತಾನೆ. ಇಬ್ರಿಯರು ಅನುಭವಿಸುತ್ತಿದ್ದ ಶಿಕ್ಷೆಯು ಒಂದು ಪ್ರೋತ್ಸಾಹ, ಅಥವಾ ಒಂದು ಆದರಣೆ ಸಹ ಆಗಿರಬಹುದಾಗಿದೆ, ಯಾಕೆಂದರೆ ಅದು ನಿಜವಾಗಿಯೂ ಅವರು ದೇವರ ಮಕ್ಕಳೆಂಬ ನಿಶ್ಚಯತ್ವವನ್ನು ಒದಗಿಸುತ್ತದೆ.

ಬಾಧೆಯ ಮೂಲಕವಾಗಿ ಶಿಕ್ಷಿತಗೊಂಡದ್ದಕ್ಕೆ ಒಂದು ಉತ್ತಮ ಉದಾಹರಣೆಯೆಂದರೆ ಅಪೊಸ್ತಲನಾದ ಪೌಲನು. ಆತನ ಸಂಕಟವು – "ಶರೀರದಲ್ಲಿನ ಶೂಲ" (2 ಕೊರಿಂಥ 12:7-10) – ಬಹಳಷ್ಟು ನೋವಿಗೆ ಕಾರಣವಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ, ಮತ್ತು ಬಹುಶಃ ಮುಜುಗರಕ್ಕೆ ಕಾರಣವಾಗಿತ್ತು; ಆದರೆ ಅದರಿಂದ ಆತನು ಪ್ರಯೋಜನವನ್ನು ಹೊಂದಿದನು. ಆ ಕಷ್ಟವು ಸುವಾರ್ತೆಯನ್ನು ಮತ್ತಷ್ಟು ಪ್ರಕಾಶಮಾನವಾಗಿ ಹೊಳೆಯುವಂತೆ ಮತ್ತು ಆತನು ಕಡಿಮೆ ಮಹತ್ವವನ್ನು ಪಡೆದುಕೊಳ್ಳುವಂತೆ ಮಾಡಿತ್ತು. ಒಬ್ಬ ಅಲ್ಪನಾದ ಮನುಷ್ಯನು ಅಂಥ ವೇದನೆಯಿಂದ ಅವಮಾನ ಪಟ್ಟಿರಬಹುದಿತ್ತು, ಆದರೆ ಪೌಲನ ವಿಷಯದಲ್ಲಿ ಹಾಗಾಗಲಿಲ್ಲ. ಪೌಲನ ದೇಹದಲ್ಲಿ ಕ್ರಿಸ್ತನು ಹೆಚ್ಚಿಸಲ್ಪಟ್ಟನು (ಫಿಲಿಪ್ಪಿ 1:20) ಯಾಕೆಂದರೆ "ನಿಕ್ಷೇಪವು" ಒಂದು "ಮಣ್ಣಿನ ಘಟಕದಲ್ಲಿ" ಇತ್ತು (ನೋಡಿರಿ 2 ಕೊರಿಂಥ 4:7). ಆತನು ತನ್ನನ್ನು ಅಲ್ಲ ಆದರೆ ಸಂದೇಶವನ್ನು ಮುಂದೆ ಕಾಣುವಂತೆ ಬಿಡುವ ಮೂಲಕ ತಾನು ದೇವರ ಒಬ್ಬ ಉತ್ತಮವಾದ ಸೇವಕವೆಂಬುದನ್ನು ಅರ್ಥಮಾಡಿಕೊಳ್ಳುವವನಾದನು. ಅಲ್ಲದೆ ಆತನು ತನ್ನ "ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಹೆಚ್ಚಳ ಪಡುವದನ್ನು" ಕಲಿತುಕೊಂಡನು (2 ಕೊರಿಂಥ 12:9)! "ದೇವರು . . . ನಮ್ಮ ನೋವುಗಳಲ್ಲಿ ಕೂಗುತ್ತಾನೆ: ಅದು ಕಿವುಡು ಲೋಕವನ್ನು ಎಬ್ಬಿಸುವದಕ್ಕೆ ಆತನ ಧ್ವನಿವರ್ಧಕವಾಗಿರುತ್ತದೆ"[26] ಎಂಬ C. S. Lewisನ ಮಾತುಗಳಿಗೆ ಪೌಲನು ಒಮ್ಮತವನ್ನು ವ್ಯಕ್ತಪಡಿಸಿರುತ್ತಿದ್ದನು. Albert Barnes ಹೀಗೆ ಹೇಳಿದನು, "ವೇದನೆಗಳಿಂದ ಪ್ರಯೋಜನವನ್ನು ಪಡೆಯದ ಒಬ್ಬ ಕ್ರೈಸ್ತನ ಪರಿಚಯವು ನನಗೆ ಎಂದಿಗೂ ಆಗಿರುವದಿಲ್ಲ."[27]

ದೇವರು **ಆತ್ಮಗಳಿಗೆ ತಂದೆಯಾಗಿರುವಾತನು** (ವ. 9) ಎಂಬುದನ್ನು ನಂಬುವದೆಂದರೆ ಆತನನ್ನು ಎಲ್ಲಾ ಕ್ರೈಸ್ತರಿಗೆ "ತಂದೆ" ಎಂಬುದನ್ನು ಒಪ್ಪಿಕೊಳ್ಳುವದು ಎಂದರ್ಥವಾಗಿದೆ. ಆತನು

ಹೊಸ ಒಡಂಬಡಿಕೆಯಲ್ಲಿ ಆಗಾಗ ಆ ಪದದಿಂದ ಕರೆಯಲ್ಪಟ್ಟಿರುತ್ತಾನೆ (ಮತ್ತಾಯ 6:9; ಲೂಕ 11:2; ಯೋಹಾನ 20:17; ರೋಮಾ 8:15, 16; ಗಲಾತ್ಯ 4:6). "ಆತ್ಮಗಳು" ಎಂಬುದು ದೇವದೂತರನ್ನು ಸೂಚಿಸುವದಕ್ಕೆ ಸಾಧ್ಯವಿಲ್ಲ ಯಾಕೆಂದರೆ ಅವರು ಇಬ್ರಿಯರಿಗೆ ಪತ್ರಿಕೆಯಲ್ಲಿ ದೇವರ "ಪುತ್ರರು" ಎಂದು ಎಣಿಸಲ್ಪಟ್ಟಿರುವದಿಲ್ಲ (1:5; 2:5, 16).

ದೇವರು ನಮ್ಮ ಆತ್ಮಗಳ ಸೃಷ್ಟಿಕರ್ತನಾಗಿದ್ದಾನೆ, ನಾವು ಲೋಕದೊಳಗೆ ಹುಟ್ಟಿದ ವೇಳೆಯಲ್ಲಿ ಅದನ್ನು ನಮಗೆ ಅನುಗ್ರಹಿಸಿದನು. ಮರಣದ ವೇಳೆಯಲ್ಲಿ, ಒಬ್ಬನ ಆತ್ಮವು "ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಹಿಂದಿರುಗುವದು" (ಪ್ರಸಂಗಿ 12:7). ಪ್ರಸಂಗಿ ಪುಸ್ತಕದ ಜ್ಞಾನಿಯಾದ ಲೇಖಕನು ನಮಗೊಬ್ಬ "ಆತ್ಮಗಳ ತಂದೆ" ಇದ್ದಾನೆಂಬುದನ್ನು ಬಲ್ಲವನಾಗಿದ್ದನು (ವ. 9), ಅದು ಹೊಸ ಒಡಂಬಡಿಕೆಯೊಳಗೆ ಇಲ್ಲಿ ಮಾತ್ರವೇ ಬಳಸಿರುವ ಮಾತಾಗಿರುತ್ತದೆ. ಒಬ್ಬನು "ಆತ್ಮಗಳ ತಂದೆಯಾಗಿರುವಾತ"ನಲ್ಲಿ ನಂಬಿಕೆಯನ್ನು ಇಡುವದರ ಫಲಿತವು **ಜೀವಿಸುವದು** ಆಗಿರುತ್ತದೆ. ಇದು ನಿತ್ಯವಾದ ಜೀವವನ್ನು ಮತ್ತು ಈಗಿನ ಅಸ್ತಿತ್ವವನ್ನು ಸಹ ಸೂಚಿಸುವದಾಗಿರತಕ್ಕದ್ದು (ಹಬಕ್ಕೂಕನು 2:4; ಇಬ್ರಿಯ 10:38).

ಒಬ್ಬ ಗ್ರೀಕ್ ಯುವಕನ ವಿಷಯದಲ್ಲಾದರೋ, ತಂದೆಯ ಶಿಸ್ತುಗಾರಿಕೆಯ ನಿಯಂತ್ರಣದಲ್ಲಿ **ಕೆಲವು ದಿವಸಗಳು** (ವ. 10) ಆತನು ಪ್ರಾಯಕ್ಕೆ ಬಂದ ಬಳಿಕ, ಮದುವೆಯಾಗುವ ತನಕ ಮೂರು ವರ್ಷಗಳ ಕಾಲ, ಅಥವಾ ಸಾರ್ವಜನಿಕ ನೊಂದಣಿಯಲ್ಲಿ ಪಟ್ಟಿ ಮಾಡಲ್ಪಡುವ ತನಕ ಇರುತ್ತಿತ್ತು.[28] ಕ್ರೈಸ್ತನು ಬಾಧೆಯನ್ನನುಭವಿಸುವ "ಕೆಲವು ದಿವಸಗಳು" ಕೆಲವು ವರ್ಷಗಳ ಕಾಲ ಇರಬಹುದು ಆದರೆ ನಿತ್ಯತ್ವದ ದೃಷ್ಟಿಯಲ್ಲಿ ಆಗಲೂ "ಕೆಲವು ದಿವಸಗಳು" ಎಂದು ಎಣಿಸಲ್ಪಡಬಲ್ಲದು (2 ಕೊರಿಂಥ 4:16, 17).

**ವಚನ 11. ಶಿಕ್ಷೆ** ಎಂಬುದು ರೋಮಾ 2:20ರಲ್ಲಿ "ಶಿಕ್ಷಕನು" (παιδευτής, *paideutēs*) ಎಂಬುದಾಗಿ ಅನುವಾದಿಸಲ್ಪಟ್ಟಿರುವ ಅದೇ ಪದದಿಂದ ಬಂದದ್ದಾಗಿದೆ. ಅಂಥ ಒಬ್ಬ ವ್ಯಕ್ತಿಯು ಶಿಸ್ತು ಮತ್ತು ಉಪದೇಶವನ್ನು ನೀಡುತ್ತಿದ್ದ, ವಿಶೇಷವಾಗಿ ಮಕ್ಕಳಿಗೆ ನೀಡುತ್ತಿದ್ದ "ಒಬ್ಬ ತರಬೇತುದಾರ" ಅಥವಾ "ಒಬ್ಬ ಉಪಾಧ್ಯಾಯ" ಆಗಿರುತ್ತಿದ್ದನು. ಈ ಪದವು *paideion* ("ಚಿಕ್ಕ ಮಕ್ಕಳು") ಎಂಬುದಕ್ಕೆ ಸಂಬಂಧಿಸಿದ್ದಾಗಿದೆ ಮತ್ತು ಅದನ್ನು "ಒಬ್ಬ ಮಕ್ಕಳ ಶಿಕ್ಷಕ," "ಶಿಸ್ತುಗೊಳಿಸುವಾತನು," ಅಥವಾ "ಒಬ್ಬ ಪುತ್ರನ ತರಬೇತುದಾರ" ಎಂದು ಸಹ ಅನುವಾದಿಸಬಹುದು.[29] ಒಬ್ಬ ಉತ್ತಮ ಶಿಕ್ಷಿತ ಮಗುವು ಅವರು ತನ್ನನ್ನು ಶಿಸ್ತುಗೊಳಿಸುವದಕ್ಕಾಗಿ ತನ್ನ ತಂದೆತಾಯಿಗಳನ್ನು "ಸನ್ಮಾನಿಸುವವನಾಗಿದ್ದನು" (ವ. 9).

ಪ್ರೀತಿಯಿಂದ ಶಿಕ್ಷೆಗೊಳಿಸುವದು "ಪ್ರತೀಕಾರಕವಾಗಿರಲು ಸಾಧ್ಯವಿಲ್ಲ, ಆದರೆ ಯಾವಾಗಲೂ ಪ್ರಯೋಜನಕರವಾಗಿರುತ್ತದೆ."[30] ಯೌವನ ಪ್ರಾಯದಲ್ಲಿ ಇಷ್ಟವಿಲ್ಲದ್ದಾಗಿ ಕಾಣಿಸುವಂಥದ್ದು ಅನೇಕ ಸಾರಿ ವೃದ್ಧಾಪ್ಯದ ದೃಷ್ಟಿಕೋನದಿಂದ ನೋಡುವದಾದರೆ ಯಾವಾಗಲೂ ಅಮೋಘವಾಗಿ ಕಾಣಿಸುತ್ತದೆ. ನಮ್ಮ ಭೂಲೋಕದ ತಂದೆಗಳು ನಮ್ಮ ವಿಷಯದಲ್ಲಿ ಬಹಳ ಕಠೋರವಾಗಿದ್ದಾರೆ ಮತ್ತು ಅನ್ಯಾಯಸ್ಥರಾಗಿದ್ದಾರೆಂದು ಭಾವಿಸಿದ್ದ ನಾವು ಪರಿಪಕ್ವಗೊಂಡಾಗ ಅವರನ್ನು ಪ್ರೀತಿಸುವವರಾಗುವದು ವಿಚಿತ್ರವಲ್ಲವೋ? ನನ್ನ ತಂದೆಯು ನನ್ನನ್ನು ಶಿಕ್ಷಿತನನ್ನಾಗಿಸುವ ವೇಳೆ ತಪ್ಪುಗಳನ್ನು ಮಾಡಿರಬಹುದು, ಆದರೆ ಆತನು ನನ್ನನ್ನು ಪ್ರೀತಿಸಿದನೆಂಬುದನ್ನು ನಾನು ಬಲ್ಲೆನು. ಒಬ್ಬ ಮಗುವಾಗಿ ನನಗೆ ಶಿಕ್ಷೆಯು ಕೆಟ್ಟದ್ದಾಗಿ ಕಂಡಾಗ್ಯೂ ಆತನನ್ನು ಗೌರವಿಸುತ್ತಾನೆ.

ನಿಜವಾದ ಪ್ರೀತಿ ಕಠಿಣವಾಗಿರುವಿಕೆ ಮತ್ತು ಆಗಾಗ ಘೋರ ಶಿಕ್ಷೆಯನ್ನು ಕೊಡುವದು ಅಗತ್ಯವಾಗುತ್ತದೆಂಬುದನ್ನು ತಂದೆತಾಯಿಗಳು ತಿಳಿದುಕೊಂಡಿರುತ್ತಾರೆ. ಕೆಲವು ಸಾರಿ

ತಂದೆತಾಯಿಗಳಿಂದ ಶಿಕ್ಷೆಯು ಆತುರದ ಕೋಪದಿಂದ ಅಥವಾ ಪ್ರೀತಿಯ ಶಕ್ತಿಯಿಂದಾಗಿ ಬರುವದಾಗಿರುತ್ತದೆ. ಹೇಗೂ, ಸಾಮಾನ್ಯವಾಗಿ, ತಂದೆತಾಯಿಗಳು ಪ್ರೀತಿಯಿಂದ ಹಾಗೆ ನಡೆದುಕೊಳ್ಳುತ್ತಾರೆ, ಅದರ ಜೊತೆಯಲ್ಲಿ ಇಲ್ಲವಾದರೆ ಮಕ್ಕಳು ಮುಂದೆ ಏನಾಗುವರೋ ಎಂಬ ಭಯವೂ ಸೇರಿರುತ್ತದೆ. ನಮ್ಮನ್ನು ದಂಡಿಸಿದ ಭೂಲೋಕದ ತಂದೆಗಳನ್ನು ನಾವು ಪ್ರೀತಿಸಬಲ್ಲೆವಾದರೆ, ನಮಗೆ ಆತ್ಮಗಳನ್ನು ದಯಪಾಲಿಸಿದ ನಮ್ಮ ಪರಲೋಕದ ತಂದೆಯನ್ನು ನಾವು ಏಕೆ ಪ್ರೀತಿಸಲಾರೆವು? "ತಮ್ಮ ಮನಸ್ಸಿಗೆ ತೋರಿದಂತೆ" (ವ. 10) ಎಂಬ ವಾಸ್ತವಾಂಶವು ತಂದೆತಾಯಿಗಳು ತಮ್ಮ ವಿವೇಚನೆಯಲ್ಲಿ ತಪ್ಪು ಮಾಡಿರಬಹುದಾಗಿದೆ ಎಂಬುದನ್ನು ಒತ್ತಿ ಹೇಳುತ್ತದೆ.

ಮಕ್ಕಳನ್ನು ಬೆಳೆಸುವದರಲ್ಲಿ ಮಗುವಿನ ನಂಬಿಕೆಯನ್ನು ಕಟ್ಟುವುದು ಸೇರಿರತಕ್ಕದ್ದು. ಉತ್ತಮ ತಂದೆತಾಯಿಗಳು ಕ್ರೂರರು ಅಥವಾ ಹಿಂಸಿಸುವದರಲ್ಲಿ ಆನಂದಿಸುವವರು ಆಗಿರುವದಿಲ್ಲ, ಆದರೆ ಅವರು ಸರಿಯಾದದ್ದು ಮತ್ತು ಅವಶ್ಯಕವಾದದ್ದೆಂದು ನಂಬುವಂತಹ ನ್ಯಾಯದ ಭಾವನೆಯೊಂದನ್ನು ಚಲಾಯಿಸುತ್ತಾರೆ. ದೇವರು "ನಮ್ಮ ಹಿತಕ್ಕಾಗಿಯೇ ಶಿಕ್ಷಿಸುತ್ತಾನೆ," *ಸಂಪೂರ್ಣ ಒಳ್ಳೆದಕ್ಕಾಗಿ*ಯೇ, ಹೊರತು ತನ್ನಿಷ್ಟದಂತೆ ತೋಚಿದ ಹಾಗೆ ಅಲ್ಲ. ನಾವು ಆತನ ಚಿತ್ತಕ್ಕೆ ಅಧೀನರಾಗುವವರು ಹಾಗೂ ಹೊಂದಾಣಿಕೆಯಾಗುವವರು ಆಗುವದಕ್ಕಾಗಿ, ಮತ್ತು ಅಂತಿಮವಾಗಿ ಆತನ ಪರಿಶುದ್ಧತೆಯಲ್ಲಿ ಪಾಲುಗಾರರಾಗಬೇಕೆಂಬ – ಇಲ್ಲಿ ಮತ್ತು ನಿತ್ಯತ್ವಗಳೆರಡರಲ್ಲೂ – ಉದ್ದೇಶಕ್ಕಾಗಿಯೇ ಆಗಿದೆ. ನಾವು ಆತನ ಹಾಗಿರಬೇಕೆಂದು, ಭೂಲೋಕದ ಯಾವದೇ ತಂದೆತಾಯಿಗಳಾದರೂ ತಮ್ಮ ಮಕ್ಕಳು ತಮ್ಮಂತೆ ಇರಬೇಕೆಂದು ಬಯಸುವಂತೆಯೇ, ಆತನು ಬಯಸುತ್ತಾನೆ. ಇದರಲ್ಲಿ ದೇವರು ಏನನ್ನು ಪ್ರೀತಿಸುತ್ತಾನೋ ಅದನ್ನು ಪ್ರೀತಿಸುವದು ಮತ್ತು ಆತನ ಸಾರೂಪ್ಯದಲ್ಲಿ ಬೆಳೆಯುವದು ಸೇರಿರುತ್ತದೆ.

**ಶಿಕ್ಷೆ ಹೊಂದಿದವರಿಗೆ** ಎಂಬುದು γυμνάζω (*gumnazō*) ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಇದು "gymnasium" (ವ್ಯಾಯಾಮಶಾಲೆ) ಎಂಬ ಪದದ ಗುರುತಿಸಲ್ಪಡಬಲ್ಲ ಮೂಲವಾಗಿದೆ. ಈ ಪದವು "ಗ್ರೀಕ್ ಯುವಕರು ಕ್ರೀಡಾ ಸ್ಪರ್ಧೆಗಳಿಗಾಗಿ ತರಬೇತಿಗೊಳ್ಳುತ್ತಿದ್ದ ವ್ಯಾಯಾಮ ಶಾಲೆಯ ಚಿತ್ರಣವನ್ನು ಹೊಂದಿರುತ್ತದೆ. ಬಹುಮಾನಗಳು ಆಶಿಸಲ್ಪಡುತ್ತಿದ್ದವು, ಹೋರಾಟವು ಕಠಿಣ ಪ್ರಯಾಸದಿಂದ ಕೂಡಿರುತ್ತಿತ್ತು, ಅದಕ್ಕನುಗುಣವಾಗಿ ತರಬೇತಿಯು ಘೋರವಾಗಿ ರುತ್ತಿತ್ತು."[31] ವ್ಯಾಯಮವು ದೈಹಿಕ ಸ್ನಾಯುಗಳನ್ನು ಬಲಗೊಳಿಸುತ್ತದೆ, ಹಾಗೆಯೇ ಜೀವನದ ಸಂಕಷ್ಟಗಳು ಆತ್ಮವನ್ನು ಪರಿಪಕ್ವಗೊಳಿಸುತ್ತವೆ. ಹಾಗಾದರೆ, ಕ್ರೈಸ್ತನು ಪರಿಣಾಮಕಾರಿಯಾದ ಶಿಕ್ಷೆಯಿಂದಾಗುವ ಪ್ರಯೋಜನಗಳನ್ನು ಬಯಸಬೇಕು ಮತ್ತು ಅವುಗಳು ಹೋರಾಟಕ್ಕೆ ಯೋಗ್ಯವಾದವುಗಳೆಂದು ಗುರುತಿಸಿಕೊಳ್ಳಬೇಕು.

ಸಮರ್ಪಕವಾದ ತರಬೇತಿ ಮತ್ತು ಶಿಕ್ಷೆಯ ಫಲಿತವು ಒಂದು **ನೀತಿಯ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುತ್ತದೆ** ಮತ್ತು ಆತನ "ಪರಿಶುದ್ಧತೆಯಲ್ಲಿ" ಪಾಲುಗಾರರಾಗುವದು (ವ. 10). ಈ ಫಲವನ್ನು ಹೊಂದುವದೆಂದರೆ ಒಂದು ಸದ್ಗುಣ, ಸತ್ಯವಂತಿಕೆ, ಮತ್ತು ಉದ್ದೇಶದ ಜೀವಿತವನ್ನು ಜೀವಿಸುವದಾಗಿರುತ್ತದೆ. ಕ್ರೈಸ್ತನ ಉದ್ದೇಶವು ದೇವರ ಮಹಿಮೆಗೋಸ್ಕರ ಸೇವೆ ಮಾಡುವದಾಗಿರುತ್ತದೆ. ನಾವು ಶುದ್ಧೀಕರಿಸುವ ಪ್ರಕ್ರಿಯೆಯ ಮೂಲಕ ಪರಿಶುದ್ಧಗೊಳಿಸಲ್ಪಡುತ್ತೇವೆ (ನೋಡಿರಿ 10:22). ದೇವರೊಂದಿಗೆ ಸಂಪೂರ್ಣ ಪರಿಶುದ್ಧತೆಯು ಪರಲೋಕದಲ್ಲಿ ಮಾತ್ರವೇ ನಮ್ಮದಾಗುತ್ತಾದರೂ, ಈಗ ಸದ್ಯ ನಾವು ಆತನ

ರಕ್ಷಿಸುವ ಕೃಪೆ ಹಾಗೂ ಕ್ರಿಸ್ತನ ಪ್ರಾಯಶ್ಚಿತ್ತದ ಮರಣದ ಮೂಲಕವಾಗಿ ಅದರಲ್ಲಿ ಪಾಲುಗಾರರಾಗುತ್ತೇವೆ (10:19).

"ಸಮಾಧಾನ" ಮತ್ತು "ನೀತಿ"ಗಳು ರೋಮಾ 5:1ರಲ್ಲಿ ಪೌಲನಿಂದ ಸಹ ಜೊತೆಗೂಡಿಸಲ್ಪಟ್ಟಿರುತ್ತವೆ, ಅಲ್ಲಿ ನೀತಿವಂತರೆಂಬ ನಿರ್ಣಯ ಹೊಂದುವದರ ಬಳಿಕ ಸಮಾಧಾನ ಬರುವದೆಂದು ಹೇಳಲಾಗಿರುತ್ತದೆ. "ಸಮಾಧಾನಕರವಾದ ನೀತಿಯೆಂಬ ಫಲವನ್ನು" ಬಾಧೆಯಿಂದ ಬಂದ ಶಿಕ್ಷಣದ ಮೂಲಕವಾಗಿ ಹೊಂದಿಕೊಳ್ಳುವಾಗ ಅದು ಎಷ್ಟು ಅದ್ಭುತಕರವಾದದ್ದು! ಒಂದು ಸಾಧುತ್ವದ ಮನೋಭಾವವನ್ನು ಬೆಳೆಸಿಕೊಳ್ಳುವ ಮೂಲಕ ಈ ಫಲವು ಬರುತ್ತದೆ, ಕರ್ತನು ಹತ್ತಿರವಾಗಿದ್ದಾನೆ ಎಂದು ನೆನಪಿಟ್ಟುಕೊಳ್ಳುವ ಮೂಲಕ, ಮತ್ತು ಚಿಂತೆಯನ್ನು ಜಯಿಸುವದಕ್ಕಾಗಿ ಪ್ರಾರ್ಥಿಸುವ ಮೂಲಕ ಬರುತ್ತದೆ (ಫಿಲಿಪ್ಪಿ 4:4-7).

## ದೇವರ ಕೃಪೆಯನ್ನು ಹುಡುಕುವಂತೆ ಮತ್ತು ನಂಬಿಕೆಯ ಜೀವನ ನಡಿಸುವಂತೆ ಪ್ರೋತ್ಸಾಹ (12:12-17)

**12ಆದದರಿಂದ ಜೋಲುಬಿದ್ದ ಕೈಗಳನ್ನೂ ನಡುಗುವ ಮೊಣಕಾಲುಗಳನ್ನೂ ಸುಧಾರಿಸಿಕೊಳ್ಳಿರಿ;**
**13ನಿಮ್ಮ ಕಾಲುಗಳಿಂದ ನೆಟ್ಟಗೆ ಮುಂದೆ ನಡೆಯಿರಿ. ಹೀಗೆ ಮಾಡಿದರೆ ಕುಂಟಕಾಲು ಉಳುಕಿ ಹೋಗದೆ ವಾಸಿಯಾಗುವದು.**

**14ಎಲ್ಲರ ಸಂಗಡ ಸಮಾಧಾನದಿಂದಿರುವದಕ್ಕೂ ಪರಿಶುದ್ಧತೆಯನ್ನು ಹೊಂದುವದಕ್ಕೂ**
**ಪ್ರಯತ್ನ ಮಾಡಿರಿ; 15ಪರಿಶುದ್ಧಯಿಲ್ಲದೆ ಯಾವನೂ ಕರ್ತನನ್ನು ಕಾಣುವದಿಲ್ಲ. ನಿಮ್ಮಲ್ಲಿ**
**ಯಾವನಾದರೂ ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ಯಾವ ವಿಷವುಳ್ಳ ಬೇರೂ ನಿಮ್ಮಲ್ಲಿ**
**ಚಿಗುರಿ ಅಸಮಾಧಾನವನ್ನು ಹುಟ್ಟಿಸಿ 16ಸಭೆಯವರನ್ನು ಕೆಡಿಸದಂತೆ ಯಾವ ಜಾರನಾಗಲಿ**
**ಏಸಾವನಂಥ ಪ್ರಾಪಂಚಿಕನಾಗಲಿ ನಿಮ್ಮಲ್ಲಿ ಇರದಂತೆ ಜಾಗ್ರತೆಯಿಂದ ನೋಡಿಕೊಳ್ಳಿರಿ. ಆ**
**ಏಸಾವನು ಒಂದೇ ಒಂದು ಊಟಕ್ಕೋಸ್ಕರ ತನ್ನ ಚೊಚ್ಚಲತನದ ಹಕ್ಕನ್ನು ಕೊಟ್ಟುಬಿಟ್ಟನು;**
**17ಅನಂತರದಲ್ಲಿ ತನ್ನ ತಂದೆಯ ಆಶೀರ್ವಾದವನ್ನು ಬಾಧ್ಯವಾಗಿ ಹೊಂದಬೇಕೆಂದು ಕಣ್ಣೀರು**
**ಸುರಿಸುತ್ತಾ ಬೇಡಿಕೊಂಡರೂ ನಡೆದದ್ದನ್ನು ಇಲ್ಲದ ಹಾಗೆ ಮಾಡುವದಕ್ಕೆ ಮಾರ್ಗವಿಲ್ಲದೆ**
**ನಿರಾಕರಿಸಲ್ಪಟ್ಟನೆಂದು ಬಲ್ಲಿರಿ.**

ಲೇಖಕನು ತನ್ನ ನಂಬಿಕೆಯುಳ್ಳ ವಾಚಕರಿಗೆ ಸ್ಥಿರವಾಗಿ ಮುನ್ನಡೆಯುವಂತೆ ವಿವಿಧ ಎಚ್ಚರಿಕೆಯ ಮಾತುಗಳನ್ನು ತಿಳಿಸುತ್ತಾನೆ. ನಂಬಿಕೆಯಲ್ಲಿ ಬೆಳವಣಿಗೆ ಮತ್ತು ಮುಂದುವರೆಯುವಿಕೆಯನ್ನು ಖಾತ್ರಿಗೊಳಿಸಲು, ಮತ್ತು ಯಾವನಾದರೂ ತಪ್ಪಿ ಹಿಂಜರಿಯದಂತೆ ತಡೆಯುವದಕ್ಕಾಗಿ, ಕೆಲವೊಂದು ಮನೋಭಾವಗಳನ್ನು ಮತ್ತು ಜೀವಿಸುವ ಗುಣಗಳನ್ನು ಬೆಳೆಸಿಕೊಳ್ಳಬೇಕಾಗಿರುತ್ತದೆ.

**ವಚನಗಳು 12, 13.** ಒಬ್ಬನು ಹೊರ ನಡೆಯುವಂತೆ ಅಥವಾ ಸಭೆಯಿಂದ ಕಳೆದು ಹೋಗುವಂತಾಗುವ ಹಾಗೆ ಯಾವನನ್ನೂ ಪ್ರಯಾಣದಲ್ಲಿ ಹಿಂದೆ ಉಳಿಯುವಂತೆ ಬಿಡದೆ ಇರುವದು ನಮ್ಮ ಹೊಣೆಗಾರಿಕೆಯಾಗಿದೆ. **ಜೋಲುಬಿದ್ದ** ಕೈಗಳುಳ್ಳವರನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು (ವ. 12).

ಮೊದಲನೆಯ ಬುದ್ಧಿವಾದವು ಯೆಶಾಯ 35:3ರಂತೆಯೇ ಇರುತ್ತದೆ. ಎರಡನೆಯದ್ದು ಜ್ಞಾನೋಕ್ತಿ 4:26, 27ರಿಂದ ತೆಗೆದುಕೊಂಡದ್ದಾಗಿದೆ.[32] LXXನ ಹೀಗೆ ಹೇಳುತ್ತದೆ, "ಕಾಲುಗಳಿಗೆ ದಾರಿಗಳನ್ನು ನೆಟ್ಟಗೆ ಮಾಡಿರಿ, ಆದರೆ ಕೆಟ್ಟ ದಾರಿಯ ಕಡೆಯಿಂದ ಕಾಲನ್ನು ದೂರಕ್ಕೆ ತಿರುಗಿಸಿರಿ

. . ." ಯೆಶಾಯ 35 ಮೆಸ್ಸೀಯನಿಗೆ ಸಂಬಂಧಿಸಿದ ಸನ್ನಿವೇಶ ಹೊಂದಿದೆ; ಇದು 5 ಮತ್ತು 6 ವಚನಗಳಲ್ಲಿ ಸ್ಪಷ್ಟವಾಗಿ ಸೂಚಿಸಲ್ಪಟ್ಟಿರುತ್ತದೆ, ಅವುಗಳು ಮೆಸ್ಸೀಯನು ಮಾಡಲಿದ್ದ ಕೆಲವೊಂದು ಅದ್ಭುತಗಳನ್ನು ವಿವರವಾಗಿ ತಿಳಿಸುತ್ತವೆ. (ಮತ್ತಾಯ 11:5ನೇ ವಚನವು ಯೆಶಾಯ ಪುಸ್ತಕದಲ್ಲಿನ ಈ ವಾಕ್ಯಭಾಗವನ್ನು ಪ್ರಾಸಂಗೀಕವಾಗಿ ಪ್ರಸ್ತಾಪಿಸುತ್ತದೆ.)

ದೇಹವನ್ನು ಸೂಚಿಸಿದರೂ ಸರಿಯೇ ಅಥವಾ ಆತ್ಮವನ್ನು ಸೂಚಿಸಿದರೂ ಸರಿಯೇ, "ಉತ್ಸಾಹಶೂನ್ಯ ಕೈಗಳು ಮತ್ತು ಪಾರ್ಶ್ವವಾಯು ಹೊಡೆದ ಮೊಣಕಾಲುಗಳು" ಎಂಬುದು "ನಿರಾಶೆ ಮತ್ತು ಹತಾಶೆಯ ಒಂದು ಚಿತ್ರಾತ್ಮಕ ರೂಪಕಾಲಂಕಾರವನ್ನು" ಆಗಿಸುತ್ತದೆ.[33] ಬಾಬಿಲೋನಿನಿಂದ ಹಿಂದಿರುಗಲಿದ್ದ ಸೆರೆಯಾಳುಗಳನ್ನು ಬಣ್ಣಿಸುವಾಗ ಹಳೆಯ ಒಡಂಬಡಿಕೆಯ ವಾಕ್ಯಭಾಗಗಳು ಅವರಿಗೆ ದಾರಿಯುದ್ದಕ್ಕೂ ಸಹಾಯದ ಅಗತ್ಯವಿತ್ತೆಂಬುದನ್ನು ತಿಳಿಸುತ್ತವೆ. **ಜೋಲುಬಿದ್ದ ಕೈಗಳು** (ವ. 13) ಎಂಬುದರ ಅರ್ಥವು **ನಡುಗುವ ಮೊಣಕಾಲು**ಗಳುಳ್ಳವರಿಗೆ ನಡೆಯುವದಕ್ಕೆ ಸ್ವಲ್ಪ ಆಸರೆಯ ಅಗತ್ಯವಿತ್ತು. ಇಬ್ರಿಯರಿಗೆ ಪತ್ರಿಕೆಯಲ್ಲಿ, ಅದು ಪರಲೋಕದ ಯೆರೂಸಲೇಮಿಗೆ ಪ್ರಯಾಣಿಸುತ್ತಿರುವ ಕ್ರೈಸ್ತರಿಗೆ ಅನ್ವಯವಾಗುತ್ತದೆ. ಬಲವಾಗಿರುವವರು ದುರ್ಬಲರಿಗೆ ಅವರ ಯಾತ್ರೆಯಲ್ಲಿ ಸಹಾಯವನ್ನು ಒದಗಿಸಬೇಕು. ಇಚ್ಛಿತ ಫಲಿತವು ಆತ್ಮೀಕವಾಗಿ ಕುಂಟರಾದವರಿಗೆ ಸ್ವಸ್ಥತೆಯು ಸಂಬವಿಸುವದೇ. ಇದಕ್ಕೆ ಇಡೀ ಸಭೆಯು ಪ್ರೋತ್ಸಾಹವನ್ನು ನೀಡುವ ಅಗತ್ಯವಿರಬಹುದಾಗಿದೆ.

ಇದೇ ಯೋಚನೆಯು ರೋಮಾ 15:1ರಲ್ಲಿ ಕಂಡು ಬರುತ್ತದೆ, ಅಲ್ಲಿ ಪೌಲನು ಹೀಗೆ ಘೋಷಿಸಿದನು, "ದೃಢವಾದ ನಂಬಿಕೆಯುಳ್ಳ ನಾವು ನಮ್ಮ ಸುಖವನ್ನು ನೋಡಿಕೊಳ್ಳದೆ ದೃಢವಿಲ್ಲದವರ ಅನುಮಾನಗಳನ್ನು ಸಹಿಸಿಕೊಳ್ಳಬೇಕು." "ಬಲಗೊಳಿಸಿರಿ" ಎಂಬುದು ಬಹುವಚನದ ಆಜ್ಞಾರ್ಥಕವಾಗಿದ್ದು "ಅನೇಕರಿಂದ ಒಟ್ಟಾಗಿ ಮಾಡಲ್ಪಡುವ ಪ್ರಯತ್ನವೆಂದು ಪರೋಕ್ಷವಾಗಿ ಸೂಚಿಸುತ್ತದೆ."[34] ದೃಢವಿರುವವರು ಇದನ್ನು ನಿಯತಕ್ರಮವಾಗಿ ಓದತಕ್ಕದ್ದು, ಮತ್ತು ಬಳಲಿರುವವರು ಹಾಗೂ ನಿರಾಶೆಗೊಂಡಿರುವವರು ತಾವು ಹೇಗೆ ಬೇರೆಯವರಿಂದ ಸಹಾಯ ಹೊಂದಿಕೊಳ್ಳಬಹುದೆಂಬುದನ್ನು ತಿಳಿದುಕೊಳ್ಳುವದಕ್ಕೆ ಇದನ್ನು ಓದಬೇಕು. ಪ್ರತಿಯೊಬ್ಬ ಕ್ರೈಸ್ತನು ವಾಗ್ದಾನ ದೇಶದ ಕಡೆಗೆ ಸಾಗುವ ಪ್ರಯಾಣದಲ್ಲಿ ಬೇರೆಯವರಿಗೆ ಪ್ರೋತ್ಸಾಹವನ್ನು ಮಾಡಬೇಕು. ನಾವು ದಾರಿಯಿಂದ ಪಕ್ಕಕ್ಕೆ ಹೋಗುವದಕ್ಕೆ ಅಥವಾ ಹಿಂದೆ ಬರುವ ದೃಢವಿಲ್ಲದವರು ಬಿದ್ದು ಹೋಗುವಂತೆ ಮಾಡುವ ಯಾವದೇ ವಿಘ್ನಗಳನ್ನು ದಾರಿಯಲ್ಲಿ ಬಿಡಬಾರದು.

**ನೆಟ್ಟಗೆ ನಡೆಯಿರಿ** ಎಂಬುದು ದಾರಿಗಳು ಸಾಮಾನ್ಯವಾಗಿ ವಕ್ರವಾಗಿರುತ್ತವೆ ಮತ್ತು ಅನೇಕ ಸಾರಿ ಒರಟಾಗಿ ಇರುತ್ತವಾದ್ದರಿಂದ ಶ್ರದ್ಧೆಯಿಂದ ಪ್ರಯಾಸ ಪಡಬೇಕೆಂಬುದನ್ನು ಸೂಚಿಸುತ್ತದೆ. ನಡೆಯುವದಕ್ಕೆ ಒಬ್ಬ ಕುಂಟನಿಗೆ ನೆಟ್ಟನೆಯ, ಮೃದುವಾದ ದಾರಿಯನ್ನು ಹೊಂದಿರುವದು ಎಂಥ ಒಂದು ಆಶೀರ್ವಾದವಾಗುವದು! ದಾರಿಯಿಂದ ತಪ್ಪಿ ಹೋಗುವದು ನಡೆಯುವದಕ್ಕೆ ಸಲಭವಾದ ದಾರಿಯೆಂದು ತೋರಬಹುದು, ಆದರೆ ಅದು ಸುಲಭವಲ್ಲ ಎಂಬುದು ಯಾವಾಗಲೂ ಸಾಭಿತಾಗುತ್ತದೆ. ದೇವರ ದಾರಿಯು ಮಾತ್ರವೇ ಕಾಲ ಮತ್ತು ಪ್ರಯಾಸದ ಜೊತೆಯಲ್ಲಿ ಸುಲಭವಾಗುತ್ತಾ ಹೋಗುತ್ತದೆ (ಮತ್ತಾಯ 11:28-30). ಅದು ಮತ್ತಾಯ 7:13, 14ರಲ್ಲಿ ಪ್ರಸ್ತಾಪಿಸಲಾಗಿರುವ "ಇಕ್ಕಟ್ಟು . . . ಬಿಕ್ಕಟ್ಟು ಆಗಿರುವ" (KJV) ದಾರಿಯೇ "ನೆಟ್ಟನೆಯ" ದಾರಿಯಾಗಿದೆ.

**ಉಳುಕಿ ಹೋಗದೆ ವಾಸಿಯಾಗುವದು** ಎಂಬುದು ಒಂದು ಆತ್ಮೀಕ ಸ್ವಸ್ಥತೆ ಅಥವಾ ನಂಬಿಕೆಗೆ ಪುನಃಸ್ಥಾಪಿಸಲ್ಪಡುವಿಕೆಯನ್ನು ಸೂಚಿಸುತ್ತದೆ. "ವಾಸಿಯಾಗುವ" ಭಾವನೆಯು

ಯೆಶಾಯ 6:10 ಮತ್ತು ಮತ್ತಾಯ 13:15ರಲ್ಲಿ ಈ ವಿಧವಾಗಿ ಬಳಸಲ್ಪಟ್ಟಿದೆ, ಅಲ್ಲಿ ಅದು ಯೇಸುವಿನ ಸಂದೇಶವನ್ನು ಕೇಳಿಸಿಕೊಳ್ಳುವದರಿಂದ ಬರುವ ಸ್ವಸ್ಥತೆಗೆ ಅನ್ವಯಿಸಲ್ಪಟ್ಟಿದೆ (ಅಲ್ಲದೆ ಯೋಹಾನ 12:40; ಅಪೊಸ್ತಲರ ಕೃತ್ಯಗಳು 28:28 ಸಹ ನೋಡಿರಿ).

**ವಚನ 14.** ಕ್ರೈಸ್ತರಿಗಾಗಿರುವ ಮಹಾ ಸಕಾರಾತ್ಮಕ ಅಂಶಗಳೆಂದರೆ ದೇವರ ಪ್ರತಿಯೊಬ್ಬ ಮಕ್ಕಳನ್ನು ಆತನ ಕೃಪೆಯಲ್ಲಿ ಕಾಪಾಡುವದು, **ಎಲ್ಲರ ಸಂಗಡ ಸಮಾಧಾನ**ವನ್ನು ಆನಂದಿಸುವದು, ಮತ್ತು ಹೆಚ್ಚಿನ ಪ್ರಮಾಣದಲ್ಲಿ **ಪರಿಶುದ್ಧತೆಯನ್ನು** ಹೊಂದಿಕೊಳ್ಳುವದು ಆಗಿರುತ್ತವೆ. ಇವುಗಳನ್ನು ಅತ್ಯಾಸಕ್ತಿಯಿಂದ ಬಯಸಬೇಕು ಮತ್ತು ನಮ್ಮ ಪ್ರಧಾನ ಲಕ್ಷ್ಯವಾಗಿ ಇಟ್ಟುಕೊಳ್ಳಬೇಕು.

**ಪ್ರಯತ್ನ ಮಾಡಿರಿ** (διώκω, *diōkō* ಎಂಬದರಿಂದ ಬಂದದ್ದು) ಎಂಬ ಪದವು ಒಂದು ಬಲವಾದ ಪದವಾಗಿದ್ದು ಒಂದು ಗುರಿಯನ್ನು ಸಾಧಿಸುವದಕ್ಕೆ ಪ್ರಯತ್ನಿಸುವದಕ್ಕೆ ಹಂಬಲಿಕೆಯನ್ನು ವ್ಯಕ್ತಪಡಿಸುತ್ತದೆ.[35] ಇದು ಇತ್ತೀಚಿನ ಹಿಂಸೆ ಮತ್ತು ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕು ಎಂಬ ಕುರಿಯು ಸಭೆಯಲ್ಲಿ ಎದ್ದಿದ್ದ ಪ್ರಶ್ನೆಗೆ ಉತ್ತರವಾಗಿತ್ತು.

ಕ್ರೈಸ್ತರು ಮೂರು ಸಂಗತಿಗಳಿಗಾಗಿ ಪ್ರಯಾಸ ಪಡಬೇಕು: ಸಮಾಧಾನ, ಕೃಪೆ, ಮತ್ತು ಪರಿಶುದ್ಧತೆ. ರಹಾಬಳು ಇಸ್ರಾಯೇಲ್ಯರ ಗೂಢಚಾರರನ್ನು ಕಾಪಾಡುವ ಮೂಲಕ ಅಂಥ ನಿಮಯವನ್ನು ಅನುಸರಿಸಿದಳು (11:31). ಆಕೆಯು ದೇವರ ಜನರೊಂದಿಗೆ ಸಮಾಧಾನವನ್ನು ಹುಡುಕಿದಳು ಮತ್ತು, ಅದರ ಒಂದು ಫಲಿತವಾಗಿ, ಆಕೆಯು ಅವರೊಳಗೆ ಒಬ್ಬಳಾದಳು. ನಾವು ಜನರನ್ನು ಕ್ರಿಸ್ತನ ಬಳಿಗೆ ತರುವದಕ್ಕೆ ಪ್ರಯತ್ನಿಸಬೇಕು, ರಹಾಬಳು ಯೆಹೂದಿಮತಕ್ಕೆ ಪರಿವರ್ತನೆಗೊಂಡ ಪ್ರಕಾರವೇ, ನಾವು ಜನರನ್ನು ಕ್ರಿಸ್ತನ ಬಳಿಗೆ ತರುವದಕ್ಕೆ ಪ್ರಯತ್ನಿಸಬೇಕು.

"ಸಮಾಧಾನ" (שָׁלוֹם, *shalom*) ಎಂಬುದಕ್ಕಿರುವ ಹಳೆಯ ಒಡಂಬಡಿಕೆಯ ಪದವು ಅನೇಕ ಸಾರಿ ಶಾಸ್ತ್ರಗಳಲ್ಲಿ ಎಲ್ಲಾ ವಿಧದಲ್ಲಿಯೂ ಸೌಖ್ಯವಾಗಿರುವದನ್ನು ಪ್ರತಿನಿಧಿಸುವದಕ್ಕೆ ಬಳಸಲ್ಪಟ್ಟಿದೆ. "ಸಮಾಧಾನ" (εἰρήνη, *eirēnē*) ದಿಂದ ಇರಬೇಕೆಂದು ಈ ವಾಕ್ಯಭಾಗದಲ್ಲಿ ಕೊಡಲಾಗಿರುವ ಕರೆಯು ಪರಿಶುದ್ಧತೆಗೆ ನೀಡಿರುವ ಕರೆಯಷ್ಟೇ ಪ್ರಾಮುಖ್ಯವೆಂದು ತೋರುತ್ತದೆ. ಸಮಾಧಾನವನ್ನು ಅನುಸರಿಸುವ ಯೋಚನೆಯು ಹೊಸ ಒಡಂಬಡಿಕೆಯುದ್ದಕ್ಕೂ ಒತ್ತಿ ಹೇಳಲ್ಪಟ್ಟಿದೆ (ನೋಡಿರಿ ರೋಮಾ 14:19 ಮತ್ತು 1 ಪೇತ್ರ 3:11). ಸಮಾಧಾನ ಮಾಡಿಕೊಳ್ಳುವಿಕೆ ಮತ್ತು ಶುದ್ಧತೆಯ ಯೋಚನೆಯು ಅನೇಕ ಸಾರಿ ಜೊತೆ ಜೊತೆಯಾಗಿ ಸಿಕ್ಕುತ್ತವೆ (ಮತ್ತಾಯ 5:8, 9). ಇವುಗಳು ಎಲ್ಲಾ ಕ್ರೈಸ್ತರು ಅಭಿವೃದ್ಧಿಪಡಿಸಿಕೊಳ್ಳಬೇಕಾದ ಪ್ರಾಮುಖ್ಯವಾಗಿರುವ ಗುಣಗಳಾಗಿವೆ.

ನಾವು ಹೆಚ್ಚು ಶುದ್ಧೀಕರಣಗೊಳ್ಳುವಂತೆ ಅಥವಾ ಪವಿತ್ರಗೊಳ್ಳುವಂತೆ ಶ್ರದ್ಧೆಯಿಂದ ಹುಡುಕುವವರಾಗಿರಬೇಕು. "ಶುದ್ಧೀಕರಣ" (ἁγιασμός, *hagiasmos*) ಎಂಬ ಪದದ ಅರ್ಥವು "ಪ್ರತ್ಯೇಕಿಸಲ್ಪಡುವಿಕೆ" ಎಂದಾಗಿರುತ್ತದೆ ಮತ್ತು ಶುದ್ಧ ಹಾಗೂ ವ್ಯತ್ಯಾಸವಾಗಿರಬೇಕು ಎಂಬ ಯೋಚನೆಗಳನ್ನು ಒಳಗೊಂಡಿರುತ್ತದೆ. ನಾವು ಶುದ್ಧತೆಯನ್ನು ಬೆಳೆಸಿಕೊಳ್ಳುವ ಹೊರತು ದೇವರ ಹಾಗೆ ಇರಲಾರೆವು. *Hagiasmos* ಪೌಲನ ಪತ್ರಿಕೆಗಳಲ್ಲಿ ಕ್ರಿಸ್ತನಲ್ಲಿರುವವನ ಸ್ಥಿತಿಯ ವಿಷಯದಲ್ಲಿ ಸತತವಾಗಿ ಬಳಸಲ್ಪಟ್ಟಿದೆ (1 ಕೊರಿಂಥ 6:11). ಇದು ನಾವು ಕ್ರಿಸ್ತನೊಂದಿಗೆ ಹೊಂದಿರುವ ಸಂಬಂಧದ ಕಾರಣದಿಂದಾಗಿ ನಾವು ಪಡೆದುಕೊಂಡ ಗುಣಸ್ವಭಾವವಾಗಿರತಕ್ಕದ್ದು; ಇದು ಇಲ್ಲದೆ, ನಾವು ಕರ್ತನನ್ನು ನೋಡಲಾರೆವು. ಬಹಳಷ್ಟು ಜನರು, ಸಭೆಯಲ್ಲಿರುವವರು ಸಹ, ಅನೈತಿಕತೆಯಿಂದ ಓಡಿ ಹೋಗಿ ಪರಿಶುದ್ಧತೆಯನ್ನು ಹುಡುಕುವದಕ್ಕೆ ವಿಫಲರಾಗುತ್ತಿದ್ದಾರೆ. 16 ಮತ್ತು 17 ವಚನಗಳಲ್ಲಿ ನೋಡಿರುವ ಪ್ರಕಾರ,

ಏಸಾವನು ತಪ್ಪಾದ ಉದಾಹರಣೆಯಾಗಿದ್ದಾನೆ; ಈ ಸಮಸ್ಯೆಗೆ ಸರಿಯಾದ ಪರಿಹಾರವು 1 ಥೆಸಲೋನಿಕ 4:1-8ರಲ್ಲಿ ಸಿಕ್ಕುತ್ತದೆ, ಅಲ್ಲಿ ಪೌಲನು ಹಾದರದ ಪಾಪವನ್ನು ಕುರಿತು ಅತ್ಯಂಥ ಸ್ಪಷ್ಟವಾಗಿ ತಿಳಿಸುತ್ತಾನೆ.

"ನೆಟ್ಟನೆಯ ದಾರಿಗಳನ್ನು" ಅನುಸರಿಸುವದರ ಭಾಗವೆಂದರೆ ಸಹೋದರರೊಳಗೆ "ಸಮಾಧಾನ"ವಾಗಿರುವ ಮಾರ್ಗವನ್ನು ಕಂಡುಕೊಳ್ಳಲು ಪ್ರಯತ್ನಿಸುವದೇ ಆಗಿದೆ. ನಿತ್ಯವಾದ ರಕ್ಷಣೆಯ ಪ್ರಯಾಣದಲ್ಲಿರುವ ಸಭೆಯೊಳಗೆ ವಿಭಜಿಸುವಂತೆ ಕಾದಾಡುತ್ತಿರುವ ಪಂಗಡಗಳಿಗೆ ಅವಕಾಶ ಕೊಡಬಾರದೆಂಬುದು ಆಜ್ಞಾರ್ಥವಾದದ್ದು. ಇದೊಂದು ಎಡೆಬಿಡದೆ ಇರುವಂಥ ಅಪಾಯವಾಗಿದೆ, ಮತ್ತು ನಾವು ದೇವರ ಮಾರ್ಗವನ್ನು ಅನುಸರಿಸುತ್ತಿಲ್ಲವಾದರೆ ಇದನ್ನು ಸಂಭವಿಸುವಂತೆ ಆತನು ಅನುಮತಿಸುತ್ತಾನೆ. ಸಹೋದರರು ಹೊಂದಿಕೊಂಡು ಹೋಗುವದನ್ನು ಮತ್ತು ತಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥ ಮಾಡಿಕೊಳ್ಳುವದಕ್ಕೆ ಕಲಿತುಕೊಳ್ಳಬೇಕು. ಪೌಲನು ಈ ತತ್ವವನ್ನು 1 ಕೊರಿಂಥ 6:1-8ರಲ್ಲಿ ಕಲಿಸಿದನು. "ನಾವು ಪಾಪದೊಂದಿಗೆ ಯುದ್ಧ ಮಾಡಬೇಕು, ಆದರೆ ಮನುಷ್ಯರೊಂದಿಗೆ ಅಲ್ಲ . . ."[36]

ಹೇಗೂ, ಸತ್ಯವನ್ನು ರಾಜಿ ಮಾಡಿಕೊಂಡು ಸಮಾಧಾನ ಹೊಂದುವದು ಅನುಸರಿಸುವದಕ್ಕೆ ಅನುಮತಿಯಳ್ಳ ದಾರಿಯಲ್ಲ. ಒಬ್ಬನ ಸಿದ್ಧಾಂತವು ಸುಳ್ಳಾಗಿರುವದಾದರೆ, ಆತನ ಆರಾಧನೆಯು ವ್ಯರ್ಥವಾದದ್ದೆಂದು ಯೇಸು ಕಲಿಸಿದನು. ಸುಳ್ಳು ಬೋಧಕರು ತಾವು ಮಾಡುವ ಪ್ರಕಾರವೇ ಮಾಡುವಂತೆ ಬೇರೆಯವರ ಮನವೊಲಿಸುವಾಗ, ಅವರು ಒಟ್ಟಾಗಿ ಹಳ್ಳದಲ್ಲಿ ಬೀಳುವವರಾಗಿದ್ದಾರೆ (ಮತ್ತಾಯ 15:8-14). ಅಂತಿಮವಾಗಿ, ನಿಜವಾದ ಮತ್ತು ಶಾಶ್ವತವಾಗಿ ಉಳಿಯುವ ಸಮಾಧಾನವು ದೇವರಿಂದಲೇ ಬರತಕ್ಕದ್ದು, ಯಾಕೆಂದರೆ ಆತನು ಸ್ವತಃ "ಶಾಂತಿದಾಯಕನಾದ ದೇವರು" ಆಗಿದ್ದಾನೆ (ನೋಡಿರಿ ಇಬ್ರಿಯ 13:20).

ವ್ಯಾಜ್ಯವನ್ನು ಹುಟ್ಟಿಸುವವನು **ಕರ್ತನನ್ನು ಕಾಣುವದಿಲ್ಲ**. ಈ ವಾಗ್ದಾನವು ವ್ಯಾಜ್ಯವನ್ನು ಅಸಹ್ಯಪಡುವದಕ್ಕೆ ಇನ್ನಷ್ಟು ಹೆಚ್ಚು ಭಯಂಕರವಾಗಿಸುತ್ತದೆ. "ಕರ್ತನನ್ನು ಕಾಣುವದಿಲ್ಲ" ಎಂದರೆ ಒಬ್ಬನು ನರಕಕ್ಕೆ ಗಡಿಪಾರು ಮಾಡಲ್ಪಡುತ್ತಾನೆ ಎಂಬುದನ್ನು ಸೂಚಿಸುತ್ತದೆ, "ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ" ತಳ್ಳಲ್ಪಡುತ್ತಾರೆ (2 ಥೆಸಲೋನಿಕ 1:9). ಸ್ಪಷ್ಟವಾಗಿ ಇದು ಮತಭ್ರಷ್ಟತೆಯ ವಿರುದ್ಧದ ಒಂದು ಎಚ್ಚರಿಕೆಯಾಗಿದೆ.

ನ್ಯಾಯತೀರ್ಪಿನಲ್ಲಿ ಎಲ್ಲರೂ ನಿಂತುಕೊಳ್ಳುವರು, ಆದರೆ ಆತನನ್ನು "ಕಾಣುವದು" ಎಂದರೆ ಆತನೊಂದಿಗೆ ಇದ್ದು ಆತನ ಪ್ರಸನ್ನತೆಯನ್ನು ಆನಂದಿಸುವದು ಎಂದಾಗಿದೆ. ಅಶುದ್ಧಗೊಂಡಿರುವ ಸ್ಥಿತಿಯಲ್ಲಿ ಯಾವನೂ ಎಂದೂ ಪರಲೋಕದಲ್ಲಿ ಇದ್ದಿಲ್ಲ, ಅಥವಾ ಅನುಮತಿಸಲ್ಪಡುವದಿಲ್ಲ — ಅಂದರೆ, ಇನ್ನೂ ತನ್ನ ಪಾಪಗಳಲ್ಲಿಯೇ ಇರುವನಾಗಿ (ಯೋಹಾನ 8:21-24; ಪ್ರಕಟನೆ 21:27).

**ವಚನ 15. ನೋಡಿಕೊಳ್ಳಿರಿ** (ἐπισκοποῦντες, *episkopountes*) ಎಂಬುದು ವರ್ತಮಾನಕಾಲ ಕೃದಂತವಾಗಿದ್ದು ἐπισκοπέω (*episkopeō*) ಎಂಬ ನಾಮಪದದಿಂದ ಬಂದದ್ದಾಗಿದೆ. ಇದು ಹಿರಿಯರ ಕೆಲಸವನ್ನು ಸೂಚಿಸಲು 1 ಪೇತ್ರ 5:2ರಲ್ಲಿ ಬಳಸಲಾಗಿರುವ ಪದವಾಗಿದೆ. ಇದು ಒಬ್ಬ ಮೇಲ್ವಿಚಾರಕನ ಅಥವಾ ಪೋಷಕನ ಕೆಲಸವನ್ನು ಸೂಚಿಸುತ್ತದೆ. ಕೆಲವರನ್ನು ಕ್ರಿಸ್ತನಿಂದ ತಪ್ಪಿ ಹಿಂಜರಿಯದಂತೆ ತಡೆಯುವ ಕ್ರಿಯೆಯು ಸೂಚಿಸುವದೇನೆಂದರೆ "ಇಡೀ ಸಮುದಾಯವು ಎಚ್ಚರವುಳ್ಳವರಾಗಿ ಉಳಿಯಬೇಕು"[37] ಎಂಬದೆ. **ಯಾವನೂ ತಪ್ಪಿ ಹಿಂಜರಿಯದಂತೆ** "ನೋಡಿಕೊಳ್ಳಿರಿ" ಎಂಬುದು ಲೋಕದಲ್ಲಿರುವವರನ್ನು ಸೂಚಿಸಲು ಸಾಧ್ಯವಿಲ್ಲ, ಯಾಕೆಂದರೆ ಕ್ರಿಸ್ತನಿಂದ ಹೊರಗೆ ಇರುವವರೆಲ್ಲರು ಖಂಡಿತವಾಗಿಯೂ ಹಿಂಜರಿಯುವರು. ಆದದರಿಂದ, ಕೆಲವು ಸಾರಿ ಒಬ್ಬ ನಂಬಿಗಸ್ತ ಕ್ರೈಸ್ತನು ಸಹ "ಹಿಂಜರಿಯುವನು" ಎಂಬುದಕ್ಕೆ ಇದು

ಮತ್ತೊಂದು ಎಚ್ಚರಿಕೆಯಾಗಿದೆ. ಪ್ರತಿಯೊಬ್ಬ ಕ್ರೈಸ್ತನು ತನ್ನ ಸ್ವಂತ ಆತ್ಮವನ್ನು "ನೋಡಿಕೊಳ್ಳಬೇಕು" ಅಥವಾ "ಮೇಲ್ವಿಚಾರಣೆ ಮಾಡಬೇಕು" ಮತ್ತು ಬೇರೆಯವರನ್ನು "ಮೇಲ್ವಿಚಾರಣೆ ಮಾಡಲು" ಸಹಾಯ ಒದಗಿಸಬೇಕು.

ಇಲ್ಲಿ ಮತ್ತೊಬ್ಬರಿಗಿಂತ ಹಿಂದೆ ಬಿದ್ದಿರುವ ಪ್ರಯಾಣಿಕನ ಚಿತ್ರವು ಬಳಸಲ್ಪಟ್ಟಿರುತ್ತದೆ. ಆತ್ಮೀಕವಾಗಿ ಇದು ಸಂಭವಿಸುವಾಗ, ಅಂಥ ವ್ಯಕ್ತಿಯು **ದೇವರ ಕೃಪೆಗೆ** "ತಪ್ಪಿ ಹಿಂಜರಿಯುವವನಾಗುತ್ತಾನೆ." ಒಬ್ಬನು ತಂಡವಾಗಿ ಪ್ರಯಾಣಿಸುವ ವೇಳೆ ಹಿಂದೆ ಬೀಳುವಾಗ, ಆತನು ದರೋಡೆಕಾರರಿಗೆ ತುತ್ತಾಗಬಹುದು, ಬಲಹೀನತೆ ಅಥವಾ ವ್ಯಾಧಿಗೆ ಒಳಗಾಗಬಹುದು. ಅದು ಸಂಭವಿಸುವದಾದರೆ, ಆತನು ಎಂದಿಗೂ ತನ್ನ ಗಮ್ಯಸ್ಥಾನವನ್ನು ತಲುಪಲಾರನು ಅಥವಾ ಮನೆಗೆ ಹಿಂದಿರುಗಲು ಶಕ್ತನಾಗದಿರಬಹುದು. ಅದೇ ರೀತಿಯಲ್ಲಿಯೇ, ಸೈತಾನನು ಆತ್ಮೀಕ ದಾರಿಯಲ್ಲಿ ಹಿಂದಿರುವವನನ್ನು ಹಿಂದಿಕ್ಕಬಹುದು. Moses Stuartನು ವಾಕ್ಯಭಾಗಕ್ಕೆ ಈ ವ್ಯಾಖ್ಯಾನವನ್ನು ಕೊಟ್ಟನು: "ಪರಿಶುದ್ಧತೆಯ ಫಲಿತವಾಗಿರುವ ಆ ದೈವಿಕ ಕೃಪಾಕಟಾಕ್ಷವನ್ನು ಹೊಂದಿಕೊಳ್ಳುವದಕ್ಕೆ ಯಾವನೂ ವಿಫಲನಾಗದಂತೆ ಚೆನ್ನಾಗಿ ನೋಡಿಕೊಳ್ಳಿರಿ."[38] ಎಲ್ಲಾ ಮುನ್ನೆಚ್ಚರಿಕೆಗಳು ಹಾಗೂ ಸಹಾಯವು ಕೊಡಲ್ಪಟ್ಟಿದ್ದರ ಹೊರತಾಗಿಯೂ ಕೆಲವರು ದೇವರ ಕೃಪೆಗೆ ತಪ್ಪಿ ಹೋಗುವರವಾಗಿದ್ದಾರೆ. ಇದು ಸಂಭಿಸುವಾಗ, "ಆತನ ಕೃಪೆಯು ನಿಲುಕಲಾರದ್ದಾಗಿತ್ತು ಎಂಬ ಕಾರಣವಲ್ಲ, ಆದರೆ ಅವರು ಅದಕ್ಕಾಗಿ ತಮ್ಮನ್ನು ಲಭ್ಯವಾಗಿಸಿಕೊಳ್ಳಲಿಲ್ಲ ಎಂಬುದೇ ಕಾರಣವಾಗಿರುತ್ತದೆ, ಮತ್ತು ಅವರು ಆ ಕಾರಣದಿಂದ ಆತನ ಕೃಪೆಯಿಂದ ಮಾತ್ರವೇ ಸಾಧಿಸಬಹುದಾದ ಗುರಿಯನ್ನು ತಲುಪುವದಕ್ಕೆ ವಿಫಲರಾದರು . . ."[39]

**ವಿಷವುಳ್ಳ ಬೇರು** ಎಂಬುದು ಯಾವದೋ ಘೋರ ಪಾಪವನ್ನು ಪ್ರತಿನಿಧಿಸಬಹುದಾಗಿದೆ. ಸೀಮೋನನ "ಹಾನಿಕರವಾದ ವಿಷ"ಕ್ಕೆ ಕಾರಣವು ಆತನ ದುರಾಶೆಯಾಗಿತ್ತು (ಅಪೊಸ್ತಲರ ಕೃತ್ಯಗಳು 8:23). ವಿಗ್ರಹಾರಾಧಕ ಮತಭ್ರಷ್ಟತೆಯು ಧರ್ಮೋಪದೇಶಕಾಂಡ 29:18ರಲ್ಲಿ "ವಿಷಲತೆಯ ಬೇರು" ಎಂದು ಕರೆಯಲ್ಪಟ್ಟಿದೆ. ಪುರುಷರು ಮತ್ತು ಸ್ತ್ರೀಯರು ಬೇರೆ ದೇವರುಗಳ ಹಿಂದೆ ಹೋಗುತ್ತಿದ್ದರು ಮತ್ತು ಕರ್ತನ ಕಡೆಯಿಂದ ತಮ್ಮ ಹೃದಯಗಳನ್ನು ವಿಮುಖಪಡಿಸಿಕೊಳ್ಳುತ್ತಿದ್ದರು. ಇಬ್ರಿಯ 3:12ರಲ್ಲಿ ಅದೇ ಯೋಚನೆಯು "ಅಪನಂಬಿಕೆಯುಳ್ಳ ಕೆಟ್ಟ ಹೃದಯ" ಎಂದು ಬಣ್ಣಿಸಲ್ಪಟ್ಟಿದೆ. ಇದು ಮನಸ್ಸು ಮತ್ತು ಆತ್ಮವನ್ನು ಕೇಡಿಸುವ ಯಾವದೇ ಕಾರ್ಯವನ್ನು ಒಳಗೊಂಡಿರಬಹುದಾಗಿದೆ. ಅದರ ಪರಿಣಾಮವು ಭಯಾನಕವಾಗಿರುತ್ತದೆ:

> . . . ವಿಷಗೊಂಡವನು ಮತ್ತು ಅವಿಧೇಯನು ಆಗಿರುವ ಒಬ್ಬ ವ್ಯಕ್ತಿಯು ಅವರ ಮಧ್ಯದಲ್ಲಿ ರುವದಾದರೆ ಆತನು ಇಡೀ ಸಮುದಾಯದ ಮೇಲೆ ವಿನಾಶಕಾರಿ ಪರಿಣಾಮವನ್ನು ಬೀರಬಲ್ಲನು, ಹೀಗೆ *ಅನೇಕರು ಹೊಲೆಗೊಳ್ಳುವರು* – ಹಾನಿಕಾರಕ ಬೇರು ಇಡೀ ಬೆಳೆಯನ್ನು ವಿಷಗೊಳಿಸುವ ರೀತಿಯಲ್ಲಿಯೇ, ಮೋಶೆಯ ಮಾತುಗಳಲ್ಲಿ ಹೇಳುವದಾದರೆ, "ಹಸಿಯದ್ದಕ್ಕೂ ಒಣಗಿದ್ದಕ್ಕೂ ನಾಶನವನ್ನುಂಟುಮಾಡಾನು" (ಧರ್ಮೋಪದೇಶಕಾಂಡ 29:19).[40]

ಸಭೆಯ ಸದಸ್ಯರು ಆ ವಿಧದಲ್ಲಿ **ಕೇಡಿಸದಂತೆ** ನೋಡಿಕೊಳ್ಳಲು ಪ್ರಯತ್ನಿಸಬೇಕು. ಸಮಸ್ಯೆಯು ಏನೆಂದರೆ "ಒಂದು ಬೇರು" ಅನೇಕರನ್ನು ಕೇಡಿಸಬಲ್ಲದು. ಒಬ್ಬ ಸುಳ್ಳು ಬೋಧಕನು, ಕೆಲವೇ ಕೆಲವು ವಾಕ್ಯ ಸಾಲಿಗಳಿಂದ ಅನೇಕರ ಮನಸ್ಸುಗಳಲ್ಲಿ ಸಂಶಯಗಳನ್ನು ಹುಟ್ಟಿಸಿ ಅವರನ್ನು "ಕೆಟ್ಟು" ಹೋಗುವಂತೆ ಮಾಡಬಲ್ಲನು.

**ವಚನ 16.** ಈ ಯೋಚನೆಯು 15ನೇ ವಚನದಲ್ಲಿ ಕೊಡಲ್ಪಟ್ಟ ಬುದ್ಧಿವಾದವನ್ನು ಮುಂದುವರೆಸುತ್ತದೆ (ಮತ್ತು 13:4ರಲ್ಲಿ ಪುನರಾವರ್ತಿಸಲ್ಪಡುತ್ತದೆ). ಕ್ರೈಸ್ತರು ಹಿಂದೆ

ಬೀಳಬಾರದು ಮತ್ತು ದೇವರ ಕೃಪೆಯನ್ನು ಕಳೆದುಕೊಳ್ಳಬಾರದು. ತಮ್ಮ ಜೀವಿತಗಳಲ್ಲಿ ಪರಿಶುದ್ಧತೆಯನ್ನು ಬೆಳೆಸಿಕೊಂಡು ಅದನ್ನು ಕಾಪಾಡಿಕೊಳ್ಳುವವರಿಗೆ ಆ ಸ್ಥಿತಿಯು ಸಂಭವಿಸುವದಿಲ್ಲ.

**ಏಸಾವನು** ಪರಿಶುದ್ಧತೆಯನ್ನು ಹುಡುಕುವದಕ್ಕೆ ವಿಫಲನಾದವನಿಗೆ ಒಂದು ಪ್ರಮುಖ ಉದಾಹರಣೆಯಾಗಿದ್ದಾನೆ. ಆತನು ಹಳೆಯ ಒಡಂಬಡಿಕೆಯಲ್ಲಿ **ಜಾರನು** (πόρνος, *pornos*) ಎಂದು ಬಣ್ಣಿಸಲ್ಪಟ್ಟಿಲ್ಲ, ಆದರೆ ಪರಿಶುದ್ಧ ಕಾರ್ಯಗಳ ಕಡೆಗಿನ ತನ್ನ ಮನೋಭಾವದಲ್ಲಿ ಆತನು **ಪ್ರಾಪಂಚಿಕ** (ಭಕ್ತಿಹೀನ) ನಾಗಿದ್ದನು, ಅದು ಅತನು ತನ್ನ ಚೊಚ್ಚಲತನದ ಹಕ್ಕನ್ನು ಮಾರಿಕೊಂಡದ್ದರಲ್ಲಿ ಸ್ಪಷ್ಟವಾಗಿ ಕಂಡು ಬರುತ್ತದೆ. ಆತನು NKJVಯಲ್ಲಿ "ಜಾರನು ಅಥವಾ ಅಪವಿತ್ರ ಮನುಷ್ಯನು" ಎಂದು ಕರೆಯಲ್ಪಟ್ಟಿದ್ದಾನೆ. ಗ್ರೀಕ್ ಪದವು "ಜಾರನು" ಎಂಬುದಕ್ಕಿಂತಲೂ ವಿಸ್ತಾರವಾಗಿರುತ್ತದೆ ಮತ್ತು ಅದು "ಭಕ್ತಿಹೀನ" (βέβηλος, *bebēlos*) ಅಥವಾ "ಅಪವಿತ್ರ" ನಾಗಿರುವದಕ್ಕೆ ಸಮಾನವಾಗಿರಬಲ್ಲದು. ನಿಜ ಧರ್ಮವನ್ನು ಅಸಡ್ಡೆ ಮಾಡುವವನು ಅನೇಕ ಸಾರಿ ತನ್ನ ಸ್ವಯಿಚ್ಛೆಗಳನ್ನು ನೆರವೇರಿಸುವವನಾಗುತ್ತಾನೆ; ಆತನು ಆತ್ಮೀಕ ಕಾರ್ಯಗಳ ಮೇಲೆ ಯಾವದೇ ಮೌಲ್ಯವನ್ನು ಇಡುವದಿಲ್ಲ. ಜಾರರು ಮತ್ತು ಇತರ ಭಕ್ತಿಹೀನ ವ್ಯಕ್ತಿಗಳು ಎರಡೂ ಪ್ರವೃತ್ತಿಗಳಿಗಾಗಿ ಪಶ್ಚಾತ್ತಾಪ ಪಡುವ ಹೊರತು ಅದೇ ಅಂತ್ಯಸ್ಥಿತಿಯನ್ನು ಅನುಭವಿಸುವರು. ಅವರು ದೇವರ ರಾಜ್ಯದಲ್ಲಿ ಸಹಿಸಿಕೊಳ್ಳಲ್ಪಡುವದಿಲ್ಲ (1 ಕೊರಿಂಥ 5:9-11). ಸಭೆಯು ಜಾರತ್ವದ (ಅನೈತಿಕತೆಯ) ಕುರಿತು ಒಂದು ನಿಲುವು ತೆಗೆದುಕೊಳ್ಳದಿರುವ ಮೂಲಕ ದೇವರಿಂದ ತಪ್ಪಿ ಲೋಕದ ಕಡೆಗೆ ಹಿಂಜರಿಯುತ್ತಿದೆ; ಕ್ರೈಸ್ತರು ಬೈಬಲ್ ಮಾನದಂಡಗಳಿಗೆ ತಮ್ಮ ನಿಷ್ಠಾವಂತಿಕೆಯನ್ನು ನವೀಕರಿಸಿಕೊಳ್ಳ ತಕ್ಕದ್ದು.

**ವಚನ 17.** ಏಸಾವನ ಅನೈತಿಕ ಗುಣನಡತೆಯು ಪರದೇಶದ ಸ್ತ್ರೀಯರನ್ನು ಮದುವೆಯಾಗುವದರಲ್ಲಿ ಮತ್ತು ಅವರ ಕೆಟ್ಟ, ವಿಗ್ರಹಾರಾಧಕ ಪ್ರಭಾವವನ್ನು ಅಸಡ್ಡೆ ಮಾಡಿದ್ದರಲ್ಲಿ ಸ್ಪಷ್ಟವಾಗಿ ತೋರಿ ಬಂದಿರುತ್ತದೆ (ಆದಿಕಾಂಡ 36:2, 3; 26:34, 35). ಆತನು ಹೆಚ್ಚು ಪ್ರಾಮುಖ್ಯತೆಯನ್ನು ತನ್ನ ಚೊಚ್ಚಲತನದ ಹಕ್ಕಿಗಿಂತಲೂ ಹಸಿವೆಯ ತುಡಿತಗಳ ಮೇಲೆ ಇಟ್ಟಾಗ ಆತನ ನಡವಳಿಕೆಯು "ಭಕ್ತಿಹೀನ" ಅಥವಾ "ಅಪವಿತ್ರ" ಆಗಿತ್ತು. ಆತನು ಪವಿತ್ರವಾದವುಗಳನ್ನು ಕಡೆಗಣಿಸಿದನು. ದೇವರು ಆತನಿಗೆ ಚೊಚ್ಚಲತನದ ಹಕ್ಕನ್ನು ತ್ಯಜಿಸಿ ಬಿಡುವಂತೆ ಒತ್ತಾಯಿಸಲಿಲ್ಲ; ಆತನು ಸಂಪೂರ್ಣವಾಗಿ ತನ್ನ ಸ್ವಂತ ಇಷ್ಟದಿಂದ ಮಾಡಿದನು. ಆತನು **ಆಶೀರ್ವಾದವನ್ನು** ಹೊಂದಲಾಗಲಿಲ್ಲ ಯಾಕೆಂದರೆ ಆತನು ಒಂದು "ಭಕ್ತಿಹೀನ" ಸ್ವಭಾವವನ್ನು ಆರಿಸಿಕೊಂಡನು. ಆತನು ತತ್ಕಾಲಿಕ ಪ್ರಯೋಜನವುಳ್ಳ ಒಂದು ಸರಳವಾದ ಊಟಕ್ಕೋಸ್ಕರ ತನ್ನ ಚೊಚ್ಚಲತನದ ಹಕ್ಕನ್ನು ಮತ್ತು ಆಶೀರ್ವಾದವನ್ನು ಮಾರಿಕೊಂಡನು.

ಆಶೀರ್ವಾದವು ಕುಟುಂಬವನ್ನು ಆರಾಧನೆಯಲ್ಲಿ ನಡಿಸುವ ಭಾಗ್ಯದೊಂದಿಗೆ ಕುಟುಂಬದಲ್ಲಿ ಪ್ರಥಮ ಸ್ಥಾನವನ್ನು ಕೊಡುವದು ಮಾತ್ರವೇ ಆಗಿರಲಿಲ್ಲ, ಆದರೆ ಅಬ್ರಹಾಮನಿಗೆ ಕೊಡಲ್ಪಟ್ಟಿದ್ದ ವಾಗ್ದಾನಗಳಲ್ಲಿ ಮತ್ತು ಬಾಧ್ಯತೆಯಲ್ಲಿ ಎರಡರಷ್ಟು ಭಾಗವನ್ನು ಹೊಂದಿಕೊಳ್ಳುವದು ಸಹ ಆಗಿತ್ತು.[41] ಆತ್ಮೀಕ ನಾಯಕತ್ವದ ಸ್ಥಾನವು ಯಾಕೋಬನಿಗೆ ಬಹು ದೊಡ್ಡ ಮಹತ್ವವನ್ನು ಹೊಂದಿರಬಹುದು, ಆದರೆ ಏಸಾವನಿಗೆ ಅದು ಅತಿ ಕಡಿಮೆ ಮುಖ್ಯವಾಗಿತ್ತು. ಏಸಾವನು ಆಶೀರ್ವಾದವನ್ನು ಬೆಲೆಯುಳ್ಳದ್ದೆಂದು ಎಣಿಸಿಕೊಂಡಿದ್ದರೆ ಅದನ್ನು ಸುಲಭವಾಗಿ ಆತನಿಂದ ತೆಗೆದುಕೊಳ್ಳುವದಕ್ಕೆ ಆಗುತ್ತಿರಲಿಲ್ಲ.[42] ಇನ್ನೊಂದೆಡೆಯಲ್ಲಿ, ಯಾಕೋಬನು ದೈವಿಕ ಆಶೀರ್ವಾದದ ಪಾರಂಪರ್ಯಕ್ಕಾಗಿ ತನಗಿರುವ ಶ್ಲಾಘನೆಯನ್ನು ಜೀವಂತವಾಗಿ ಉಳಿಸಿಕೊಂಡಿದ್ದನೆಂದು ತೋರುತ್ತದೆ. ಇದು ಅತ್ಯಂಥ ಕೆಟ್ಟ ಸಮಯದಲ್ಲಿಯೂ, ಆತನ

ಜೀವನದ ಅವಸಾನದ ಕಾಲದ ಹತ್ತಿರದಲ್ಲಿ ಸ್ಪಷ್ಟವಾಗಿ ತೋರಿ ಬರುತ್ತದೆ (11:20, 21).

ದೇವರ ಸ್ಪಷ್ಟವಾಗಿದ್ದ ಚಿತ್ತವನ್ನು ಬದಲಾಯಿಸುವಂತೆ ಇಸಾಕನು ಏಸಾವನ ಅಸಮಾಧಾನದ **ಕಣ್ಣೀರಿಗೆ** (ಆದಿಕಾಂಡ 27:34) ಅವಕಾಶ ಕೊಡಲಿಲ್ಲ ಯಾಕೆಂದರೆ ಸರ್ವಶಕ್ತನ ಆತ್ಮೀಕ ಮಾರ್ಗದರ್ಶನದ ಅಡಿಯಲ್ಲಿ ಚೊಚ್ಚಲತನದ ಹಕ್ಕು ಕೊಡಲ್ಪಟ್ಟಿತ್ತು. ತಾನು ಮೋಸ ಪಡಿಸಲ್ಪಟ್ಟೆನೆಂದು ಇಸಾಕನು ಅರಿತುಕೊಂಡನು; ಆದರೆ, ದೇವರ ಚಿತ್ತವನ್ನು ಬಲ್ಲವನಾಗಿ ತನ್ನ ಹಿರಿಯ ಮಗನು ವ್ಯಥೆಯಿಂದ ಬೇಡಿಕೊಂಡಾಗ್ಯೂ ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಲಿಲ್ಲ.

**ಪಶ್ಚಾತ್ತಾಪ** (μετάνοια, *metanoia*) ಎಂಬುದಕ್ಕಾಗಿರುವ ಪದವು ಬಳಸಲ್ಪಟ್ಟಿದೆ. ತಂದೆಯು ಆಶೀರ್ವಾದದ ವಿಷಯದಲ್ಲಿ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಲಾಗಲಿಲ್ಲ. ಏಸಾವನು ಎಂಥ ನೀಚ ಹೇಡಿತನದ ಪಾಪವನ್ನು ಮಾಡಿದ್ದನೆಂದರೆ ಅವನು ಪಶ್ಚಾತ್ತಾಪ ಪಟ್ಟಿದ್ದಾಗ್ಯೂ ಆಶೀರ್ವಾದವನ್ನು ಮರಳಿ ಪಡೆದುಕೊಳ್ಳುವಂತೆ ದೇವರು ಆತನಿಗೆ ಅನುಮತಿ ಕೊಟ್ಟಿರುತ್ತಿರಲಿಲ್ಲ. ತಂದೆಯ ಪ್ರೀತಿಯು ಅಂಥ ವ್ಯಕ್ತಿಯ ವಿಷಯದಲ್ಲಿ ದೇವರ ಚಿತ್ತವನ್ನು ತಳ್ಳಿ ಹಾಕುವದಕ್ಕಾಗಲಿಲ್ಲ, ಆದ್ದರಿಂದ ಏಸಾವನಿಗೆ ತನ್ನ ಮೂರ್ಖತನ ಪರಿಣಾಮವನ್ನು ಅನುಭವಿಸುವಂತೆ ಬಿಡಲಾಯಿತು. ತಾವು ಅನಂತರದಲ್ಲಿ ತಮ್ಮ ಪಾಪಗಳನ್ನು ಇಲ್ಲದಂತೆ ಮಾಡಬಹುದೆಂದು ಯೋಚಿಸುವವರಿಗೆ ಈತನ ಜೀವನವು ಒಂದು ದೊಡ್ಡ ಪಾಠವಾಗಿರುತ್ತದೆ; ಹಾಗೆ ಮಾಡುವದಕ್ಕೆ ಎಂದಿಗೂ ಪೂರ್ಣವಾಗಿ ಸಾಧ್ಯವಿಲ್ಲ.

ಒಬ್ಬ ವಿಶ್ವಾಸಿಯ ಮತಭ್ರಷ್ಠತೆಯು ಏಸಾವನ ನಿರ್ಧಾರಕ್ಕೆ ಸಮಾನವಾಗಿರುತ್ತದೆ. ಒಬ್ಬನು ಹಿಂಸೆಯು ನೋವನ್ನು ಕ್ಷಣಿಕವಾಗಿ ದೂರ ಮಾಡಿಕೊಳ್ಳಬಹುದು, ಆದರೆ ಆತನು ಅಲ್ಪ ಮೌಲ್ಯವುಳ್ಳ ಒಂದು ತತ್ಕಾಲಿಕ ಪ್ರಯೋಜನಕ್ಕಾಗಿ ಎಷ್ಟೋ ಹೆಚ್ಚು ಮೌಲ್ಯವಿರುವದೊಂದನ್ನು ತ್ಯಜಿಸುವವನಾಗಿರುತ್ತಾನೆ. ಮತಭ್ರಷ್ಟತೆಯು ಸಾಧ್ಯವಿರುತ್ತದೆ, ಮತ್ತು ಅದು ನಮ್ಮ ದೇವರಿಗೆ ಅತ್ಯಂಥ ಗಂಭೀರವಾದ ವಿಷಯವಾಗಿರುತ್ತದೆ.

ಏಸಾವನ ಪ್ರಕರಣವು ವಾಗ್ದಾನ ಮಾಡಲ್ಪಟ್ಟ ಆಶೀರ್ವಾದವನ್ನು ಕಳೆದುಕೊಳ್ಳುವದಕ್ಕೆ ಮತ್ತೊಂದು ಉದಾಹರಣೆಯಾಗಿರುತ್ತದೆ (4:1ರಲ್ಲಿರುವ "ವಿಶ್ರಾಂತಿ" ವಿಷಯದಲ್ಲಿರುವಂತೆಯೇ). ಮತಭ್ರಷ್ಟತೆಯು ಸದಾಕಾಲ ಉಳಿಯುವಂಥ ಪರಿಣಾಮಗಳನ್ನು ಹೊಂದಿದೆ ಮತ್ತು ಬಹುವಾಗಿ ಬಯಸುವ ಗುರಿಯನ್ನು ನಂಬಿಕೆಗೆ ಹಿಂದಿರುಗಬೇಕೆಂಬ ಬಯಕೆಯು ಸಹ ಸಾಧಿಸಲಾಗದಂಥಹ ಒಂದು ಹಂತವನ್ನು ತಲುಪಬಹುದಾಗಿದೆ. ಏಸಾವನಂತಹ ಒಂದು ಹೃದಯಕ್ಕೆ, ನಿಜವಾದ ಪಶ್ಚಾತ್ತಾಪವು ಅಸಾಧ್ಯವಾಗಬಹುದು. ಒಬ್ಬ ಸಂಪೂರ್ಣ ಮತಭ್ರಷ್ಟನು ದೇವರ ಕರುಣೆಗಾಗಿನ ತನ್ನ ಸದವಕಾಶವನ್ನು ನಷ್ಟ ಪಡಿಸಿಕೊಳ್ಳುತ್ತಾನೆ. ಆತನ ಮನಸ್ಸಿಲ್ಲದಿರುವಿಕೆ ಮತ್ತು ತನ್ನ ಹೃದಯವನ್ನು ಮಾರ್ಪಡಿಸಿಕೊಳ್ಳುವದಕ್ಕೆ ಕ್ರಮೇಣವಾಗಿ ಬರುವ ಅಸಮರ್ಥತೆಯ ಕಾರಣದಿಂದಾಗಿ, ದೇವರು ತಪ್ಪು ಮಾಡುವ ಸಹೋದರನ ಕಡೆಗೆ ತನ್ನ ಚಿತ್ತವನ್ನು ಬದಲಾಯಿಸಿಕೊಳ್ಳಲಾರನು (ನೋಡಿರಿ 6:4-6; 10:26-29).

## ಸಿನಾಯ್ ಮಹಿಮೆ ಮತ್ತು ಚೀಯೋನಿನ/ "ಪರಲೋಕದ ಯೆರೂಸಲೇಮ್" ಮಹಿಮೆಯ ನಡುವಿನ ತದ್ವಿರುದ್ಧತೆ (12:18-24)

**[18]ನೀವು ಮುಟ್ಟುವಂತೆ ಸಾಧ್ಯವಾದಂಥ ಮತ್ತು ಬೆಂಕಿಹತ್ತಿದಂಥ ಬೆಟ್ಟಕ್ಕೂ ಮೋಡದ ಮೊಬ್ಬಿಗೂ ಕತ್ತಲೆಗೂ ಬಿರುಗಾಳಿಗೂ ತುತೂರಿಯ ಧ್ವನಿಗೂ ಮಾತುಗಳ ಶಬ್ದಕ್ಕೂ ಬಂದವರಲ್ಲ. [19]ಆ ಶಬ್ದವನ್ನು ಕೇಳಿದವರು ತಮಗೆ ಇನ್ನು ಒಂದು ಮಾತನ್ನಾದರೂ ಹೇಳಬಾರದೆಂದು**

**ಬೇಡಿಕೊಂಡರು; [20]ಯಾಕೆಂದರೆ – ಒಂದು ಮೃಗವಾದರೂ ಬೆಟ್ಟಕ್ಕೆ ಮುಟ್ಟಿದರೆ ಅದನ್ನು ಕಲ್ಲೆಸೆದು ಕೊಲ್ಲಬೇಕೆಂಬ ವಿಧಿಯನ್ನು ತಾಳಲಾರದೆ ಇದ್ದರು. [21]ಇದಲ್ಲದೆ ಅಲ್ಲಿ ತೋರಿದ್ದು ಅಷ್ಟು ಭಯಂಕರವಾಗಿದ್ದದರಿಂದ ಮೋಶೆಯು – ನನಗೆ ಬಹು ಭಯವಾಗುತ್ತದೆ, ನಡುಗುತ್ತೇನೆ ಎಂದು ಹೇಳಿದನು. [22]ಆದರೆ ನೀವು ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಬಳಿಗೂ [23]ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ [24]ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ.**

ಈ ವಿಭಾಗವು 12:18-29ರಲ್ಲಿರುವ ಮತ್ತೊಂದು ಎಚ್ಚರಿಕೆಯ ಭಾಗವಾಗಿದೆ. ಮೊದಲನೆಯ ಎಚ್ಚರಿಕೆಯು ನಿರ್ಲಕ್ಷ್ಯದ ವಿರುದ್ಧವಾಗಿತ್ತು (2:1-4), ಎರಡನೆಯದ್ದು ಅಪನಂಬಿಕೆಯ ವಿರುದ್ಧವಾಗಿತ್ತು (3:7-4:13), ಮೂರನೆಯದ್ದು ತಪ್ಪಿಹೋಗುವದರ ವಿರುದ್ಧವಾಗಿತ್ತು (5:11-6:20), ಮತ್ತು ನಾಲ್ಕನೆಯದ್ದು ಇಚ್ಛಾಪೂರ್ವಕವಾಗಿ ಮಾಡುವ ಪಾಪದ ವಿರುದ್ಧವಾಗಿರುತ್ತದೆ (10:26-31). 12:18-29ರಲ್ಲಿರುವ ಐದನೆಯ ಎಚ್ಚರಿಕೆಯು ಈ ವಿಧದಲ್ಲಿ ಸಾರಾಂಶಿಸಲ್ಪಡಬಹುದು, "ನೀವು ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು" (12:25). ದೇವರಿಗೆ ವಿಧೇಯರಾಗುವದಕ್ಕೆ ನಿರಾಕರಿಸುವದು ನಾಶನದ ದಂಡನೆಯನ್ನು ತರುತ್ತದೆ. ಈ ಬುದ್ಧಿವಾದಗಳು ಕ್ರಿಸ್ತನಿಗೆ ನಿಷ್ಠೆಯನ್ನು ಭದ್ರಪಡಿಸಿಕೊಳ್ಳುವಂತೆ ಮಾಡುವದಕ್ಕೆ ಮತ್ತು ಆತನಿಂದ ವಿಮುಖರಾಗುವದನ್ನು ತಡೆಯುವದಕ್ಕೆ ರಚಿಸಲ್ಪಟ್ಟಿದ್ದವು.

**ವಚನಗಳು 18, 19.** ದೇವರೊಂದಿಗೆ ಸಿನಾಯ್ ಪರ್ವತದಲ್ಲಿ ಒಂದು ಶಾರೀರಿಕವಾದ ಅನುಭವವನ್ನು ಹೊಂದಿದವರಿಗೆ ಕೊಡಲ್ಪಟ್ಟಿದ್ದ ಸವಲತ್ತುಗಳಿಗಿಂತ ನಮ್ಮ ಸವಲತ್ತುಗಳು ಎಷ್ಟೋ ಶ್ರೇಷ್ಠವಾಗಿವೆ. ಅವರು ಸ್ಪರ್ಶಗ್ರಾಹ್ಯವಾದದ್ದೊಂದರ ಬಳಿಗೆ ಬಂದರು, **ಮುಟ್ಟುವದಕ್ಕೆ ಸಾಧ್ಯವಾದಂಥದ್ದ**ರ ಬಳಿಗೆ ಸಹ ಬಂದಿದ್ದರು – ಆದರೆ ಅದು ನಿಷೇಧಿಸಲ್ಪಟ್ಟಿತ್ತು. ಅವರು ಸಮೀಪಿಸಿದ **ಬೆಟ್ಟವು ಬೆಂಕಿಹತ್ತಿದಂಥದ್ದಾ**ಗಿತ್ತು ಮತ್ತು ಅದು **ಕತ್ತಲೆ**ಯನ್ನು ಹೊಂದಿತ್ತು (ವಿಮೋಚನಕಾಂಡ 19:16-19). ಅವರು ಅನುಭವಿಸಿದ ಸಂಭವಗಳು ಜೀವಸ್ವರೂಪನಾದ ದೇವರ ಒಂದು ಘೋರವಾದ ಭಯವನ್ನು ಹುಟ್ಟಿಸಿದವು, ಅವರು ಹಾಗೆಯೇ ಭಯ ಪಡಬೇಕೆಂಬುದನ್ನೇ ಉದ್ದೇಶಿಸಲಾಗಿತ್ತು. ಬೆಂಕಿ, **ಮೊಬ್ಬು, ಬಿರುಗಾಳಿ,** ಮತ್ತು **ತುತೂರಿ** ಶಬ್ದಗಳು ಆ ಕಾಲದಲ್ಲಿ ದೇವರ ಬಳಿಗೆ ಬರುವದು ಎಷ್ಟು ಕಷ್ಟವಿತ್ತೆಂಬುದನ್ನು ಒತ್ತಿ ಹೇಳುತ್ತವೆ. ಹೊಸ ಒಡಂಬಡಿಕೆಯ ಎಲ್ಲಾ ಆಶೀರ್ವಾದಗಳೊಂದಿಗೆ, ಯಾವನಾದರೂ ಹಳೆಯದ್ದಕ್ಕೆ ಹಿಂದಿರುಗಲು ಬಯಸುವದು ಅವಿಶ್ವಸನೀಯವಾಗಿ ತೋರಿತ್ತು. ಅದಕ್ಕೆ ತದ್ವಿರುದ್ಧವಾಗಿ, ನಾವು ಒಂದು ಆತ್ಮೀಕ ಪರ್ವತಕ್ಕೆ ಬಂದಿದ್ದೇವೆ. ಅದು ಶಾರೀರಿಕವಾಗಿ ಮುಟ್ಟುವದಕ್ಕೆ ಸಾಧ್ಯವಿಲ್ಲದ್ದು, ಯಾಕೆಂದರೆ ಅದು ಅತ್ಯಾಶ್ಚರ್ಯವಾದ ಪ್ರಯೋಜನಗಳನ್ನು ತರುವಂತಹ ಆತ್ಮೀಕ ಚೀಯೋನ್ ಪರ್ವತವಾಗಿದೆ (12:22).

**ಬಂದವರು** ಎಂಬ ಮಾತು 18 ವಚನದಲ್ಲಿ ಮನುಷ್ಯನು ದೇವರ ಬಳಿಗೆ ಬರುವದು, ಅಥವಾ ಸಮೀಪಿಸುವದನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ನೋಡಿರಿ 4:16; 10:1; 11:6). ಆರಾಧಕರು ದೇವರ ಮುಂದೆ ಬಂದರು ಎಂದು ಹಳೆಯ ಒಡಂಬಡಿಕೆಯು ಹೇಳುವಂಥದ್ದಕ್ಕೆ ಇದು ಸಂಪೂರ್ಣ ತದ್ವಿರುದ್ಧವಾಗಿರುತ್ತದೆ. ದೇವಾಲಯದಲ್ಲಿ ದೇವರ ಮುಂಚೆ ಬರುವದು ಒಂದು

ಶ್ರೇಷ್ಟವಾದ ಭಾಗ್ಯವಾಗಿತ್ತಾದ್ದರಿಂದ ಯೆಹೂದಿಮತದ ರೂಪವು ಹೆಚ್ಚು ಉದಾತ್ತವಾಗಿತ್ತದೆಂದು ಕೆಲವರು ವಾದಿಸಬಹುದು, ಆದರೆ ದೇವರ ಬಳಿಗೆ ಬರುವದು ಅದಕ್ಕಿಂತ ಹೆಚ್ಚು ಅದ್ಭುತವಾದದ್ದೆಂಬುದನ್ನು ಇಬ್ರಿಯರಿಗೆ ಪತ್ರಿಕೆಯ ಲೇಖಕನು ತೋರಿಸಿ ಕೊಟ್ಟನು.

ದೇವರ ನಿಜವಾದ ಘನಗಾಂಭೀರ್ಯವು ಹೊಸ ಒಡಂಬಡಿಕೆಯ ಸದವಕಾಶಗಳನ್ನು ನಿರಾಕರಿಸುವವರಿಗೆ ಒಂದು ದಿನ ಪ್ರಕಟಗೊಳಿಸಲ್ಪಡುವದು. ಹಳೆಯ ಒಡಂಬಡಿಕೆಯ ಅಡಿಯಲ್ಲಿ, ತುತೂರಿಯ ಶಬ್ದವೇ ಅನೇಕ ಕಿವಿಗಳಿಗೆ ಗಾಯವನ್ನುಂಟು ಮಾಡಿರಬಹುದಾಗಿದೆ; ಇದು ಜನರನ್ನು ಭಯಗೊಳಿಸಿತ್ತಾದ್ದರಿಂದ ಅವರೆಲ್ಲರೂ ನಡುಗಿದರು. ದೇವರ ತುತೂರಿಯ ಅಂತಿಮ ಶಬ್ದವು (ನೋಡಿರಿ 1 ಥೆಸಲೋನಿಕ 4:16) ಹೇಗೆ ದುಷ್ಟರನ್ನು ಸದೆಬಡಿಯುವದೆಂದು ಯೋಚಿಸಿರಿ! ದೇವರ ಘನಗಾಂಭೀರ್ಯತೆಯ ಕೇವಲ ಶಾರೀರಿಕ ತೋರ್ಪಡುವಿಕೆಗಳನ್ನು ಮಾತ್ರವೇ ನಾವು ಅನುಭವಿಸುವದಿಲ್ಲ. ನಾವು ವಾಸ್ತವದಲ್ಲಿ ನಮ್ಮ ದೇವರು ಮತ್ತು ತಂದೆಯ ಬಳಿಗೆ ಬರಬಲ್ಲೆವು (12:23).

**ವಚನಗಳು 20, 21.** ಹಳೆಯ ಒಡಂಬಡಿಕೆಯ ಪ್ರಕಟನೆಯು ಹೆಚ್ಚಾಗಿ ಭೌತಿಕ ಸಂಗತಿಗಳ ಕುರಿತಾಗಿತ್ತು (ಇಬ್ರಿಯ 9:11, 24); ಆದರೆ ಹೊಸದು ಹೆಚ್ಚು ಉನ್ನತ ಹಾಗೂ ಪರಿಶುದ್ಧ ಸಂಗತಿಗಳಿಗೆ, ಉದಾಹರಣೆಗೆ ಪರಲೋಕದ ಯೆರೂಸಲೇಮಿಗೆ ಸಂಬಂಧಿಸಿದ್ದಾಗಿದ್ದು, ಅವುಗಳನ್ನು ಆತ್ಮೀಕ ಮುಟ್ಟಬಹುದಾಗಿದೆ. ಅದು ಸ್ವತಃ ದೇವರ ಪ್ರಸನ್ನತೆಯ ಸಂಕೇತವಾಗಿರುತ್ತದೆ, ಆತನ ಬಳಿಗೆ ನಾವು ಧೈರ್ಯದಿಂದ ಬರಬಹುದಾಗಿದೆ (ಇಬ್ರಿಯ 4:16; 9:24). ಇಬ್ರಿಯರಿಗೆ ಪತ್ರಿಕೆಯು, "ಇಲ್ಲಿ, ಬೇರೆ ಕಡೆಗಳಲ್ಲಿರುವಂತೆಯೇ (9:11, 24; cf. 8:5), ಶಾರೀರಿಕವಾಗಿರುವಂಥದ್ದು ಅಭೌತಿಕವಾದದ್ದಕ್ಕಿಂತ ಕಡಿಮೆಯಾದದ್ದೆಂಬ ಗ್ರೀಕ್ ಸಂಪ್ರದಾಯವನ್ನು ಅನುಸರಿಸುತ್ತದೆ."[43] ಲೇಖಕನು ಕಡಿಮೆಯಾದದ್ದರಿಂದ ಶ್ರೇಷ್ಠವಾದದ್ದರ ಕಡೆಗೆ ಸಾಗುವ ತನ್ನ ತರ್ಕವನ್ನು ಮುಂದುವರೆಸುತ್ತಾನೆ: ಶಾರೀರಿಕ ಬೆಟ್ಟಕ್ಕೆ ಗೌರವವು ತೋರಿಸಲ್ಪಟ್ಟಿರುವದಾದರೆ ಮತ್ತು ಮೋಶೆಯು ಭಯಗೊಂಡವನಾಗಿದ್ದಾದರೆ, ಪರಲೋಕದವುಗಳೆಡೆಗೆ ನಾವು ಇನ್ನು ಎಷ್ಟೋ ಗೌರವವನ್ನು ಹೊಂದಿರಬೇಕಲ್ಲವೇ!

**ಒಂದು ಮೃಗವಾದರೂ ಬೆಟ್ಟಕ್ಕೆ ಮುಟ್ಟಿದರೆ ಅದನ್ನು ಕಲ್ಲೆಸೆದು ಕೊಲ್ಲಬೇಕು** ಎಂಬ ಅಪ್ಪಣೆಯು ವಿಮೋಚನಕಾಂಡ 19:12, 13ರಲ್ಲಿರುತ್ತದೆ. ಇಲ್ಲಿರುವ ಉಲ್ಲೇಖನವು ಮೂಲ ಇಬ್ರಿಯ ಭಾಷೆಯ ಭಾವಾನುವಾದವಾಗಿರುತ್ತದೆ. "ಅದು ಕಲ್ಲೆಸೆಯಲ್ಪಡುವದು" ಎಂಬುದು ಒಂದು ಈಟಿಯಿಂದ "ತಿವಿಯಬೇಕು" ಎಂಬ ಹೆಚ್ಚುವರಿ ಹೇಳಿಕೆಗಿಂತಲೂ ಉತ್ತಮವಾದ ಅನುವಾದವಾಗಿರುತ್ತದೆ. (KJVಯಲ್ಲಿರುವ ಈ ಕಡೆಯ ಹೇಳಿಕೆಯು ಬಹುಪಾಲು ಪ್ರಾಚೀನ ಹಸ್ತಪ್ರತಿಗಳಲ್ಲಿರುವದಿಲ್ಲ; ಅದು ಯೆಹೂದಿ ಸಂಪ್ರದಾಯದ ಕಾರಣದಿಂದ ಸೇರ್ಪಡೆಗೊಳಿಸಲ್ಪಟ್ಟಿರಬಹುದು.)

ಮೋಶೆಯು **ಭಯವಾಗುತ್ತದೆ ನಡುಗುತ್ತೇನೆ** ಎಂದು ಹೇಳಿದ್ದು ನಿರ್ದಿಷ್ಟವಾಗಿ ಹಳೆಯ ಒಡಂಬಡಿಕೆಯೊಳಗೆ ಈ ಹಂತದಲ್ಲಿ ಪ್ರಸ್ತಾಪಿಸಲ್ಪಟ್ಟಿರುವದಿಲ್ಲ, ಆದರೆ ಧರ್ಮೋಪದೇಶಕಾಂಡ 9:19 ಹೇಳುವದೇನೆಂದರೆ ಅತನು "ಯೆಹೋವನ ಬಹುಕೋಪದ" ಕಾರಣದಿಂದ ಹೆದರಿದ್ದನು ಎಂಬದೆ. ಅಲ್ಲದೆ, ಸ್ತೇಫನನು ಸಹ "ಮೋಶೆಯು ನಡುಗುತ್ತಾ ಸ್ಥಿರವಾಗಿ ನೋಡುವದಕ್ಕೆ ಧೈರ್ಯವಿಲ್ಲದವನಾದನು" ಎಂದು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 7:32b; ನೋಡಿರಿ ವಿಮೋಚನಕಾಂಡ 3:6). ವಿಮೋಚನಕಾಂಡ 19:16ನೇ ವಚನವು ಎಲ್ಲಾ ಜನರು ಹೆದರಿದ್ದರು ಎಂದು ಹೇಳುತ್ತದೆ. ಇದು ಸಾಮಾನ್ಯವಾಗಿ ಒಪ್ಪಿಕೊಂಡಿದ್ದ ಸತ್ಯವಾಗಿತ್ತು ಮತ್ತು ಇದು ಅನೇಕ ಸಾರಿ ಯೆಹೂದಿ ಬರಹಗಳಲ್ಲಿ ಕಂಡು ಬರುತ್ತದೆ. ಬೆಟ್ಟದ ಬಳಿಗೆ ಬರುವದರ ಬದಲಾಗಿ,

ಇಸ್ರಾಯೇಲ್ಯರು ದೇವರ ಸಾಮಿಪ್ಯದ ಲಕ್ಷಣಗಳನ್ನು ನೋಡಿ ಭಯಪಟ್ಟು ದೂರಕ್ಕೆ ಹೋದರು. ದೇವರ ಪ್ರಸನ್ನತೆಯ ಅಂತಹ ತೋರ್ಪಡಿಸುವಿಕೆಯು ಆತನೊಂದಿಗೆ ಸಹವಾಸಕ್ಕೆ ಪಾಪವು ಅಡ್ಡಿಯಾಗುವದೆಂಬುದನ್ನು ಅವರ ಮನಸ್ಸುಗಳಿಗೆ ಹೊಳೆಯುವಂತೆ ಮಾಡಿರಬಹುದು.

**ವಚನಗಳು 22-24.** ಈ ವಚನಗಳು ಹೊಸ ಒಡಂಬಡಿಕೆಯ ದೇವಜನರು ಯಾವದರ **ಬಳಿಗೆ ಬಂದಿದ್ದಾರೆ** ಎಂಬುದನ್ನು ಬಣ್ಣಿಸುವ ಮೂಲಕ ಹಳೆಯ ಒಡಂಬಡಿಕೆಗಿಂತ ಹೊಸ ಒಡಂಬಡಿಕೆಯು ಹೊಂದಿರುವ ಶ್ರೇಷ್ಠತೆಯನ್ನು ಘೋಷಿಸಿದವು, ಈಗ ಅವರು **ಚೀಯೋನ್ ಪರ್ವತವನ್ನು** ಪ್ರವೇಶಿಸಿದ್ದಾರೆ. "ನೀವು . . . ಬಂದಿದ್ದೀರಿ" (ವ. 22) ಎಂಬುದು "ಮತಾಂತರಿ" (προσέρχομαι, *proserchomai*)[44] ಎಂಬ ಅದೇ ಮೂಲ ಪದದಿಂದ ಬಂದದ್ದಾಗಿದೆ, ಅದು ಮತಾಂತರಗೊಂಡ ವ್ಯಕ್ತಿಗೆ (ತಿರುಗಿಕೊಂಡವನಿಗೆ) ಬಳಸಲಾಗುತ್ತಿತ್ತು. ಆದದರಿಂದ, 22ನೇ ವಚನವು ಪರಿವರ್ತನೆಗೊಳ್ಳುವ ಸಂದರ್ಭವನ್ನು ಸೂಚಿಸುತ್ತಿರಬಹುದಾಗಿದೆ. ಈ ಕ್ರಿಯಾಪದರೂಪವಾಗಿರುವ *proserchomai* ಎಂಬುದು ಬಹುವಚನವಾಗಿದೆ ಮತ್ತು ಸಂಪೂರ್ಣವಾಚಿಕಾಲದಲ್ಲಿರುತ್ತದೆ, "ಕೆಲವರು [ತಿರುಗಿಕೊಳ್ಳುವದಕ್ಕೆ] ಆರಂಭಿಸಿದ್ದಾರೆ ಮತ್ತು ಹಾಗೆಯೇ ಮುಂದುವರೆಸುತ್ತಿದ್ದಾರೆ" ಎಂಬರ್ಥವನ್ನು ಹೊಂದಿದೆ. ದೇವಜನರು ಈಗ ಶಾಶ್ವತವಾದ ಸ್ಥಳಕ್ಕೆ ಬಂದಿದ್ದಾರೆ, ಅಲ್ಲಿಯೇ ಅವರು ಉಳಿಯತಕ್ಕದ್ದು. "ಹಳೆಯ ಒಡಂಬಡಿಕೆಯ ತಾತ್ಕಾಲಿಕ ಸ್ಥಿತಿಗಳು ಅಂತ್ಯಗೊಂಡಿವೆ, ಮತ್ತು ಹೊಸ ಒಡಂಬಡಿಕೆಯ ನಿತ್ಯವಾದ ಅವಧಿಗಳು ಈಗ ಪ್ರಾಬಲ್ಯದಲ್ಲಿರುತ್ತವೆ"; ಇನ್ನು ಯಾವದೇ ಬದಲಾವಣೆಗಳು ಮಾಡಲ್ಪಡುವದಿಲ್ಲ.[45] ಧರ್ಮಶಾಸ್ತ್ರದಡಿಯಲ್ಲಿ ಜೀವಿಸಿದ್ದ ಕ್ರೈಸ್ತರು ಆ ವ್ಯವಸ್ಥೆಯಿಂದ ವಿಮುಖರಾಗಿದ್ದರು ಮತ್ತು ಅವರು ಕ್ರಿಸ್ತನೊಂದಿಗೆ ಮುಂದುವರೆಯಬೇಕಾಗಿತ್ತು. ಕ್ರಿಸ್ತನ ಬಳಿಗೆ *ಬರುವದರಲ್ಲಿ*, ಅವರು ಹೊಸ ಒಡಂಬಡಿಕೆಯು ಒಳಗೊಂಡಿರುವ ಎಲ್ಲದಕ್ಕೂ ಪರಿವರ್ತನೆಗೊಂಡವರಾಗಿದ್ದರು.

1. ಅವರು ಸಿನಾಯ್ ಪರ್ವತಕ್ಕೆ ತದ್ವಿರುದ್ಧವಾಗಿ ಚೀಯೋನ್ ಪರ್ವತಕ್ಕೆ ಬಂದಿದ್ದರು. ಚೀಯೋನ್ ಪರ್ವತದ ಮೇಲೆಯೇ ಹಳೆಯ ಯೆರೂಸಲೇಮ್ ಪಟ್ಟಣವು ಕಟ್ಟಲ್ಪಟ್ಟಿತ್ತು, ಆದರೆ ಅದು ಮುಂದೆ ಇಡೀ ಪರಿಶುದ್ಧ ಪರ್ವತವನ್ನು ಪ್ರತಿನಿಧಿಸುವದಾಯಿತು. ರಾಜವಂಶದ ಮತ್ತು ಯಾಜಕತ್ವ ಎರಡೂ ಅಧಿಕಾರದ ನೆಲೆಯಾಗಿ, ಅದು "ಪರಿಶುದ್ಧ ಪರ್ವತವಾದ ಚೀಯೋನ್" (ಕೀರ್ತನೆ 2:6; KJV) ಎಂದು ಕರೆಯಲ್ಪಟ್ಟಿತ್ತು. ಅದು ಭೂಲೋಕದ ಆಲಯವಿರುವ ಸ್ಥಳವಾಗಿತ್ತು.[46] ಹೊಸ ಒಡಂಬಡಿಕೆಯಲ್ಲಿ, ಚೀಯೋನ್ **ಪರಲೋಕ ಯೆರೂಸಲೇಮ್**ಗೆ ಸಂಕೇತವಾಗಿದೆ (ನೋಡಿರಿ ಪ್ರಕಟನೆ 3:12; 21:2) "ಮತ್ತು ಮೇಲಣ ಯೆರೂಸಲೇಮ್" ನಲ್ಲಿ ದೇವರ ನಿವಾಸಸ್ಥಾನವನ್ನೇ ಪ್ರತಿನಿಧಿಸುತ್ತದೆ (ಗಲಾತ್ಯ 4:26).

2. ಪರಲೋಕವು ಭೂಲೋಕದ ಮೇಲಿರುವ ಪಟ್ಟಣವಾಗಿರುವದಿಲ್ಲ, ಆದರೆ ಈ ಸಹೋದರರು ಕ್ರಿಸ್ತನ ದೇಹವಾಗಿರುವ ಸಭೆಯನ್ನು ಪ್ರವೇಶಿಸುವ ಮೂಲಕ ಪರಿಶುದ್ಧ ಪಟ್ಟಣದೊಳಗೆ ಈಗಾಗಲೇ ಬಂದಿದ್ದರು. ಒಬ್ಬನು ನಿಜವಾದ "ಚೀಯೋನ್" ತಲುಪುವ ಮೂಲಕವಾಗಿ ರಕ್ಷಣೆಗೆ ಬರುತ್ತಾನೆಂಬುದನ್ನು ಇದು ಖಚಿತವಾಗಿಯೂ ಹೇಳುತ್ತದೆ. ನಾವು ಅಂತಿಮವಾಗಿ ಪರಲೋಕವನ್ನು ತಲುಪುವೆವು ಯಾಕೆಂದರೆ ಅದರ ಪಡಿರೂಪದ – ನಮ್ಮ ಕರ್ತನ ಸಭೆಯ – ಸದಸ್ಯರಾಗಿರುತ್ತೇವೆ. ಹೀಗೆ ನಾವು **ಜೀವಸ್ವರೂಪನಾದ ದೇವರ ಪಟ್ಟಣಕ್ಕೆ** ಬಂದಿದ್ದೇವೆ.

3. ಈ ಪಟ್ಟಣಕ್ಕೆ ಬರುವದರಲ್ಲಿ, ನಾವು **ಕೋಟ್ಯಾನುಕೋಟಿ ದೇವದೂತರ** ಬಳಿಗೆ ಸಹ ಬಂದವರಾಗಿದ್ದೇವೆ (ವ. 22). "ಕೋಟ್ಯಾನುಕೋಟಿ" ಎಂಬುದು ಗುರುತಿಸಲಾಗದಂತಹ ಸಂಖ್ಯೆಯನ್ನು ಸೂಚಿಸುವದಕ್ಕೆ ಬಳಸಲ್ಪಡುವ ಮಾತಾಗಿರುತ್ತದೆ. ಪಾಪಿಗಳು ಪಶ್ಚಾತ್ತಾಪ

ಪಡುವಾಗ ದೇವದೂತರು ಸಂತೋಷ ಪಡುವರು (ನೋಡಿರಿ ಲೂಕ 15:7, 10); ಅವರು ನಿರಂತರವಾಗಿ ಪರಲೋಕದಲ್ಲಿ ದೇವರ ಮಗುವನ್ನು ಪ್ರತಿನಿಧಿಸುತ್ತಾರೆ (ಮತ್ತಾಯ 18:10), ಮತ್ತು ಅವರು ರಕ್ಷಣೆಗೆ ಬಾಧ್ಯರಾಗಿರುವವರ ಸೇವೆಯನ್ನು ಮಾಡುವವರಾಗಿದ್ದಾರೆ (ನೋಡಿರಿ ಇಬ್ರಿಯ 1:14). ಸಭೆಯಲ್ಲಿ ನಾವು ಅವರ ಬಳಿಗೆ ಬಂದವರಾಗಿದ್ದೇವೆ – ಆದರೆ ಅವರನ್ನು ಆರಾಧಿಸುವದಕ್ಕಲ್ಲ, ಯಾಕೆಂದರೆ ಅದು ನಿಷೇಧಿಸಲ್ಪಟ್ಟಿದೆ (ಪ್ರಕಟನೆ 22:8, 9). ಬದಲಾಗಿ, ಪ್ರಸ್ತುತ ಕಾಲದಲ್ಲಿ ನಮಗೆ ಏನೇನೂ ಗೊತ್ತಿರದಿರುವ ದಾರಿಗಳಲ್ಲಿ ನಮಗೆ ಸಹಾಯ ಮಾಡುವರು. ದೇವರ ಸಮಕ್ಷಮದಿಂದ ಕಳುಹಿಸಲ್ಪಡುವಾಗ ಅವರು ನಮ್ಮ ಸೇವೆಯನ್ನು ಮಾಡುವರು, ಆದರೆ ಕ್ಷಿಪ್ರವಾಗಿ ಆತನನ್ನು ಸ್ತುತಿಸುವದಕ್ಕೆ ಹಿಂದಿರುಗುವರು (ಪ್ರಕಟನೆ 5:11; 7:11; 19:6).

4. ಅದರ ಜೊತೆಯಲ್ಲಿ, ನಾವು **ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಸಾರ್ವತ್ರಿಕ ಸಂಘಕ್ಕೂ ಚೊಚ್ಚಲಮಕ್ಕಳ ಸಭೆಗೂ** ಬಂದಿದ್ದೇವೆ (ವ. 23). ಇಲ್ಲಿ "ಸಂಘ" ಎಂಬುದು "ಸಭೆ" ಎಂದು ಅನುವಾದಿಸಲ್ಪಟ್ಟಿರುವ ಪದವಲ್ಲ. *Ekklēsia* ಎಂಬುದು ನಮಗೆ ತಿಳಿದಿರುವ ಸಭೆಯ ಕೂಡಿಬರುವಿಕೆ ಆಗಿರುವದರಿಂದ, ನಾವು ಈಗಾಗಲೇ ಅದರ ಬಳಿಗೆ ಸಹ ಬಂದಿದ್ದೇವೆ. "ಸಾರ್ವತ್ರಿಕ ಸಂಘ" (πανήγυρις, *panēguris*) ಎಂಬುದಕ್ಕಿರುವ ಪದವು ಮತ್ತು "ಸಭೆ" (ἐκκλησία, *ekklēsia*) ಎಂಬುದಕ್ಕಿರುವ ಪದವು ಎಂದು ಪ್ರತಿಷ್ಠಾಪಣೆಯನ್ನು ಸೂಚಿಸಬಹುದಾಗಿದೆ; ಹೇಗೂ, "ಸಾರ್ವತ್ರಿಕ ಸಂಘ" ವು ಹಳೆಯ ಒಡಂಬಡಿಕೆಯಲ್ಲಿ ರಕ್ಷಿಸಲ್ಪಟ್ಟವರನ್ನು ಸಹ ಒಳಗೊಂಡಿರಬಹುದಾಗಿದೆ. "ಸಂಘ" ಎಂಬುದಕ್ಕಿರುವ ಪದವು ಯಾವದೋ ದೇವರನ್ನು ಘನಪಡಿಸುವದಕ್ಕೆ ಕೂಡಿರುವ ರಾಷ್ಟ್ರೀಯ ಉತ್ಸವವನ್ನು ಸಂಕೇತಿಸುವದಾಗಿದೆ, ಮತ್ತು ಅದು ಮುಂದೆ ಯಾವದೇ ಉತ್ಸವದ ಸಂಘವನ್ನು ಸೂಚಿಸುವದಾಯಿತು. ಇದರ ಮೂಲಕವಾಗಿ ಆರಾಧನೆಗಾಗಿ ಕೂಡಿಬರುವ ಪ್ರತಿ ಸಾರಿ ಸಭೆಯು ಒಂದು ಉತ್ಸವದ ಗಳಿಗೆ ಆಗಿರಬೇಕೆಂದು ಭಾವಿಸುವದು ಅತಿರೇಕವೆನಿಸುತ್ತದೆ.

ಮೂಲ ಗ್ರೀಕ್ ವಾಕ್ಯದಲ್ಲಿ ಯಾವದೇ ಸ್ವರಚಿಹ್ನೆಯು ಇರುವದಿಲ್ಲವಾದ್ದರಿಂದ "ಸಾರ್ವತ್ರಿಕ ಸಂಘ"ವು ಹೇಗೆ ವಾಕ್ಯದಲ್ಲಿರುವ ಇನ್ನೊಂದು ಪದದೊಂದಿಗೆ ಸಂಬಂಧ ಹೊಂದಿದೆ ಎಂಬ ವಿಷಯದಲ್ಲಿ ಒಂದು ಪ್ರಶ್ನೆಯಿರುತ್ತದೆ. NIVಯು 22ನೇ ವಚನದಲ್ಲಿ ಪದಗುಚ್ಛವನ್ನು ಇಡುತ್ತಾ ಹೀಗೆ ಹೇಳುತ್ತದೆ, "ಸಾವಿರಾರು ದೇವದೂತರು ಉತ್ಸವದ ಸಂಘದಲ್ಲಿರುವರು." NASBಯು ಈ ಪದಗುಚ್ಛವನ್ನು 23ನೇ ವಚನದಲ್ಲಿ ಇಡುತ್ತದೆ, ಅದನ್ನು ಸಭೆಯೊಂದಿಗೆ ಸಂಬಂಧಗೊಳಿಸುತ್ತದೆ. ಅದು ಸಭೆಯೊಂದಿಗೆ ಜೋಡಿಸಲ್ಪಟ್ಟಿರುವದಾದರೆ, ಈ ಸಮೂಹವಾಗಿ ಕೂಡಿ ಬಂದಿರುವಿಕೆಯು ಜಾಗತಿಕ ಅನ್ಯೋನ್ಯತೆಯನ್ನು ಸೂಚಿಸುತ್ತದೆ ಎಂದಾಗುತ್ತದೆ.

ಸಭೆಯ ಸದಸ್ಯರು ತಮ್ಮ ಹೆಸರುಗಳನ್ನು "ಪರಲೋಕದಲ್ಲಿ ಬರಸಿಕೊಂಡವರಾಗಿದ್ದಾರೆ" (ನೋಡಿರಿ ಲೂಕ 10:20; ಫಿಲಿಪ್ಪಿ 4:3; ಪ್ರಕಟನೆ 21:27). ಅಲ್ಲದೆ, ಕ್ರೈಸ್ತರು ಎಲ್ಲಾ ಸೇರಿ "ಚೊಚ್ಚಲಮಕ್ಕಳು" (πρωτότοκος, *prōtotokos*)[47] ಆಗಿರುತ್ತಾರೆ. ಸಭೆಯು ಹೊಸದಾಗಿ ಹುಟ್ಟಿರುವವರನ್ನು, ಕ್ರಿಸ್ತನಲ್ಲಿರುವವರನ್ನು ಒಳಗೊಂಡಿರುತ್ತದೆ. ಶಾಸ್ತ್ರಗಳು ಪರಲೋಕದ ಹೆಸರುಗಳಿರುವ ಪುಸ್ತಕವನ್ನು ಮಾನವರೊಂದಿಗೆ ಸಂಬಂಧಗೊಳಿಸುತ್ತವೆ ಹೊರತು, ದೇವದೂರೊಂದಿಗೆ ಅಲ್ಲ.[48] ಲೂಕ 10:20ನೇ ವಚನವು ನಮ್ಮ ಹೆಸರುಗಳು "ಪರಲೋಕದಲ್ಲಿ ಬರೆದಿರುತ್ತವೆ" ಎಂಬುದು ಅದ್ಭುತಗಳನ್ನು ನಡಿಸುವ ಶಕ್ತಿಯನ್ನು ಮೀರಿದ ಸಂತೋಷದ ಒಂದು ಮೂಲವಾಗಿರತಕ್ಕದ್ದು ಎಂಬುದನ್ನು ಸೂಚ್ಯಾರ್ಥವಾಗಿ ಹೇಳುತ್ತದೆ.

5. ಕ್ರೈಸ್ತರಾಗಿ, ನಾವು **ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ** ಬಳಿಗೆ ಬಂದಿದ್ದೇವೆ

(ವ. 23). ಸಭೆಯಲ್ಲಿ ನಾವು ತಂದೆಯ ಬಳಿಗೆ ಬಂದಿದ್ದೇವೆ ಮತ್ತು ಈಗ ದೃಢವಿಶ್ವಾಸದ ಧೈರ್ಯದೊಂದಿಗೆ ಆತನ ಬಳಿಗೆ ಬರಬಲ್ಲೆವು (4:16). ಯೇಸುವು ತಂದೆಯ ಬಳಿಗೆ ತಾನೇ "ಮಾರ್ಗ" ಎಂದು ಹೇಳಿದನು (ಯೋಹಾನ 14:6). ನಾವು ದೇವರ ಬಳಿಗೆ ಬಂದಿದ್ದೇವಾದ್ದರಿಂದ, ಆತನ ಸಭೆಯಲ್ಲಿ ಉಳಿಯುವವರಾಗಿ ಆತನಿಗೆ ಸಮೀಪದಲ್ಲಿರುವದಕ್ಕಾಗಿ ಪರಿಶುದ್ಧ ಜೀವಿತಗಳನ್ನು ನಡಿಸುವದರಲ್ಲಿ ಶ್ರದ್ಧೆಯಿಂದಿರಬೇಕು. ನಾವು ಯೇಸು ಕ್ರಿಸ್ತನ ಮುಖಾಂತರವಾಗಿ ದೇವರಿಂದ ನ್ಯಾಯತೀರಿಸಲ್ಪಡುವೆವು (ಅಪೊಸ್ತಲರ ಕೃತ್ಯಗಳು 17:30, 31). ಜನರು ಸಭೆಯನ್ನು ಕೇವಲ ಉಪೇಕ್ಷೆ ಮತ್ತು ನಿರ್ಲಕ್ಷ್ಯ ಮಾಡುವದಕ್ಕೋಸ್ಕರ ಸಭೆಗಾಗಿ ತನ್ನ ರಕ್ತದಿಂದ ಬೆಲೆಯನ್ನು ಕಟ್ಟಲಿಲ್ಲ (ಅಪೊಸ್ತಲರ ಕೃತ್ಯಗಳು 20:28).

6. ನಾವು **ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ** ಬಳಿಗೆ ಬಂದಿದ್ದೇವೆ (ವ. 23). ಇವರು ಕ್ರೈಸ್ತ-ಪೂರ್ವ ದಿನಗಳ ವಿಶ್ವಾಸಿಗಳಾಗಿದ್ದು ಅವರು ಸಹ ಈಗ ಕ್ರಿಸ್ತನ ರಕ್ತದಿಂದ ಪರಿಪೂರ್ಣಗೊಳಿಸಲ್ಪಟ್ಟಿದ್ದಾರೆ (9:15; 10:14; 11:40), ಮತ್ತು ಇವರಲ್ಲಿ ಹೊಸ ಒಡಂಬಡಿಕೆಯ, ಬದುಕಿರುವ ಅಥವಾ ಸತ್ತಿರುವ ದೇವಜನರು ಸಹ ಸೇರಿರಬಹುದಾಗಿದೆ.[49] ಸತ್ತವರು ಅನೇಕ ಸಾರಿ ಅಂತ್ಯಾಕಾಲದ ಸಾಹಿತ್ಯಗಳಲ್ಲಿ "ಆತ್ಮಗಳು" ಎಂದು ಕರೆಯಲ್ಪಟ್ಟಿರುತ್ತಾರೆ.[50] ಯೆಹೂದಿ ಲೇಖಕರು ಸತ್ತಿರುವ ಆತ್ಮಗಳಿಗಾಗಿರುವ ಕಾಯುವ ಸ್ಥಳದ ಕುರಿತು ಮಾತಾಡಿದರು; ಅದು ಸಾಮಾನ್ಯವಾಗಿದ್ದ ಅರ್ಥವಾಗಿತ್ತಾದ್ದರಿಂದ, ಇಲ್ಲಿ ಅದೇ ಅರ್ಥವಿರುವದೆಂದು ನಾವು ಭಾವಿಸಿಕೊಳ್ಳಬಹುದಾಗಿದೆ. ಪ್ರಕಟನೆ 7:14-17 ವಚನಗಳು ಆತ್ಮಗಳಿಗೆ ಕೊಡಲಾಗುವ ಈಗಿನ ಪ್ರತಿಫಲಗಳ ಕುರಿತು ಮಾತಾಡುತ್ತಿರಬಹುದಾಗಿದೆ. ಕ್ರಿಸ್ತನು ಪರಿಪೂರ್ಣಗೊಳಿಸಲ್ಪಟ್ಟಿದ್ದಾನೆ (2:10), ಮತ್ತು ಆತನನ್ನು ಹಿಂಬಾಲಿಸುವ ಮೂಲಕ ನಾವು ಪರಿಪೂರ್ಣಗೊಳಿಸಲ್ಪಟ್ಟಿದ್ದೇವೆ.

7. ಅಂತಿಮವಾಗಿ, ನಾವು **ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣದ ಬಳಿಗೂ** ಬಂದಿದ್ದೇವೆ (ವ. 24). ನಾವು ಸಭೆಯಲ್ಲಿ ಹೊಸ ಒಡಂಬಡಿಕೆಯ ಅಡಿಯಲ್ಲಿ ದೇವರ ಬಳಿಗೆ ಬರುವಾಗ ಕ್ರಿಸ್ತನ ಹತ್ತಿರ ಬರುವವರಾಗಿದ್ದೇವೆ. ನಮ್ಮ ಮಧ್ಯಸ್ತನಾಗಿರುವ ಕ್ರಿಸ್ತನು ನಮಗೆ ದೇವರಿಂದ ಹೊಸ ಒಡಂಬಡಿಕೆಯನ್ನು ತಂದನು (9:15-17). ಹಳೆಯ ಒಡಂಬಡಿಕೆಯನ್ನು ಪ್ರತಿಷ್ಠಿಸುವ ವೇಳೆ ರಕ್ತವು ಪ್ರೋಕ್ಷಿಸಲ್ಪಟ್ಟಿತು (ವಿಮೋಚನಕಾಂಡ 24:6-8), ಮತ್ತು ನಮ್ಮ ಮನಸ್ಸಾಕ್ಷಿಗಳಿಂದ ಪಾಪವನ್ನು ಶುದ್ಧಗೊಳಿಸಲು ಕ್ರಿಸ್ತನ ರಕ್ತವು ಸುರಿಸಲ್ಪಟ್ಟಿತು (ಇಬ್ರಿಯ 10:22). ಕ್ರಿಸ್ತನ ರಕ್ತವು "ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುತ್ತದೆ" ಯಾಕೆಂದರೆ ಅದರ ಕೃಪಾಭರಿತ ಸಂದೇಶವು ಎಷ್ಟೋ ಹೆಚ್ಚಿನ ಕೊಡುಗೆಯನ್ನು ನೀಡುತ್ತದೆ. ಹೇಬೆಲನ ರಕ್ತವು ಕೇವಲ ನ್ಯಾಯಕ್ಕೋಸ್ಕರ ಕೂಗಿಕೊಳ್ಳುತ್ತದೆ (ಆದಿಕಾಂಡ 4:10). ಖಂಡಿತವಾಗಿಯೂ, ಕ್ರಿಸ್ತನ ರಕ್ತವು "ಹೆಚ್ಚು ಕೃಪಾಭರಿತವಾಗಿ" (RSV) ಮಾತಾಡುತ್ತದೆ, ಅಥವಾ "ಉತ್ತಮವಾಗಿ" (κρείττων, *kreittōn*) ಮಾತಾಡುತ್ತದೆ. ಈ ಹೊಸ ಮತ್ತು ಉತ್ತಮವಾದ ಒಡಂಬಡಿಕೆಯು ಯೆರೆಮೀಯನ ಪ್ರವಾದನೆಯಲ್ಲಿ ವಾಗ್ದಾನ ಮಾಡಲ್ಪಟ್ಟಿತು (31:31-34) ಮತ್ತು ಇದು ಈ ಪತ್ರಿಕೆಯ ಪ್ರಧಾನ ಚರ್ಚೆಯಾಂಶವಾಗಿರುತ್ತದೆ. ನಮ್ಮ ವಿಮೋಚನಾರ್ಥವಾಗಿ ಶಿಲುಬೆಯ ಮೇಲೆ ಸುರಿಸಿದ ಕ್ರಿಸ್ತನ ರಕ್ತವಿಲ್ಲದೆ ಯಾವ ಹೊಸ ಒಡಂಬಡಿಕೆಯೂ ಚಾಲನೆಯಲ್ಲಿರುವದಕ್ಕೆ ಸಾಧ್ಯವಿರಲಿಲ್ಲ (ಮತ್ತಾಯ 26:28).

## ಅಂತಿಮ ಎಚ್ಚರಿಕೆ: ದೇವರನ್ನು ನಿರಾಕರಿಸುವದರ ಅಪಾಯ (12:25-29)

**[25]ನೀವು ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲವೆಂದು ಹೇಳಬಾರದು, ಭೂಮಿಯ**

**ಮೇಲೆ ದೈವೋಕ್ತಿಗಳನ್ನಾಡಿದವನಿಗೆ ಕಿವಿಗೊಡ ಮನಸ್ಸಿಲ್ಲದೆ ಇದ್ದ ಇಸ್ರಾಯೇಲ್ಯರು ದಂಡನೆಗೆ ತಪ್ಪಿಸಿಕೊಳ್ಳದಿದ್ದರೆ ಪರಲೋಕದಿಂದ ಮಾತಾಡುವವನಿಗೆ ನಾವು ಕಿವಿಗೊಡ ಮನಸ್ಸಿಲ್ಲದೆ ತೊಲಗಿದರೆ ಹೇಗೆ ತಪ್ಪಿಸಿಕೊಂಡೇವು? [26]ಆತನ ಧ್ವನಿಯು ಆ ಕಾಲದಲ್ಲಿ ಭೂಮಿಯನ್ನು ಕದಲಿಸಿತು: ಈಗಲಾದರೋ ಆತನು – ಇನ್ನೊಂದೇ ಸಾರಿ ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ನಡುಗಿಸುವೆನೆಂದು ವಾಗ್ದಾನಮಾಡಿದ್ದಾನೆ. [27]ಇನ್ನೊಂದೇ ಸಾರಿ ಎಂಬೀ ಮಾತನ್ನು ಯೋಚಿಸಿದರೆ ಕದಲಿಸಿರುವ ವಸ್ತುಗಳು ನಿರ್ಮಿತವಾದವುಗಳಾದದರಿಂದ ತೆಗೆದುಹಾಕಲ್ಪಡಬೇಕೆಂದು ಸ್ಪಷ್ಟವಾಗುತ್ತದೆ. ಆಗ ಕದಲಿಸದೆ ಇರುವ ವಸ್ತುಗಳು ಸ್ಥಿರವಾಗಿ ಇರುವವು. [28]ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ [29]ಭಯದಿಂದಲೂ ಮಾಡೋಣ; ಯಾಕೆಂದರೆ ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ.**

ಇಬ್ರಿಯರಿಗೆ ಪತ್ರಿಕೆಯಲ್ಲಿನ ಐದನೆಯ ಹಾಗೂ ಕೊನೆಯ ಎಚ್ಚರಿಕೆಯ ಹೃದಯಭಾಗವು 12:25-29ರಲ್ಲಿರುತ್ತದೆ. ಇದು 3:7-11ರಲ್ಲಿರುವದರ ರೀತಿಯಲ್ಲಿಯೇ ಇರಬಹುದಾಗಿದೆ (ಅದು LXXನಲ್ಲಿರುವ ಕೀರ್ತನೆ 95:7-11ರಿಂದ ಉಲ್ಲೇಖಿಸಲ್ಪಟ್ಟಿದೆ).

2:1-4ರಲ್ಲಿ ಮೊದಲು ಬಳಸಲ್ಪಟ್ಟಿರುವ ಪ್ರಕಾರವೇ ಈ ವಚನಗಳಲ್ಲಿ ಇನ್ನೊಂದು "ಹಗುರಾದ ಮತ್ತು ಭಾರವಾದ" ವಾದವು ಸಂಭವಿಸುತ್ತದೆ (2:3 ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). "ನೋಡಿರಿ" ಎಂಬುದಕ್ಕಾಗಿರುವ ಪದವು βλέπω (*blepō*), 3:12ರಲ್ಲಿರುವ "ನೋಡಿಕೊಳ್ಳಿರಿ" ("ಎಚ್ಚರಿಕೆಯಾಗಿರಿ," KJV; "ಎಚ್ಚರವಾಗಿರ್ರಿ," NKJV) ಅನುವಾದಿಸಲ್ಪಟ್ಟಿರುವ ಅದೇ ಪದವಾಗಿರುತ್ತದೆ. ಪ್ರತಿಯೊಬ್ಬ ದೇವಮನುಷ್ಯನು ಕರ್ತನಿಗೆ ಜಾಗ್ರತೆಯಿಂದ ಕಿವಿಗೊಡಬೇಕು – ಸಿನಾಯ್ ಪರ್ವತದಲ್ಲಿ ತಂದೆಯಾದ ದೇವರಿಗೆ ಇಸ್ರಾಯೇಲ್ಯರು ಕಿವಿಗೊಟ್ಟದ್ದಕ್ಕಿಂತಲೂ ಅಧಿಕವಾಗಿ ಕೊಡಬೇಕು.

**ವಚನ 25.** ಈ ವಚನವು 10:26-29ರಲ್ಲಿನ ಮತಭ್ರಷ್ಟನಿಗಾಗಿರುವ ದಂಡನೆಯ ಕುರಿತಾದ "ಕಡಿಮೆಯಾದದ್ದರಿಂಧ ಶ್ರೇಷ್ಠವಾದದ್ದರ ಕಡೆಗೆ ಸಾಗುವ" ವಾದದಂತೆಯೇ ಇರುತ್ತದೆ. ಮೊದಲನೆಯದಾಗಿ ಲೇಖಕನು ಹೀಗೆ ಹೇಳುತ್ತಾನೆ, **ನೀವು ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು.** ಈಗ ನಮ್ಮೊಂದಿಗೆ ಮೋಶೆಯ ಅಲ್ಲ, ಬದಲಾಗಿ ಕ್ರಿಸ್ತನು ಮಾತಾಡುತ್ತಾನೆ; ಮತ್ತು ನಮ್ಮ ಕರ್ತನ ಎಚ್ಚರಿಕೆಗಳು ಎಷ್ಟೋ ಹೆಚ್ಚು ಮಹತ್ವಪೂರ್ಣವಾದವುಗಳು. ಆತನಂತೆಯೇ ಒಬ್ಬ ಹೊಸ ಪ್ರವಾದಿಯು ಎದ್ದೇಳುವನೆಂಬ ಮೋಶೆಯ ಪ್ರವಾದನೆಯನ್ನು ಯೇಸುವು ನೆರವೇರಿಸಿದನು (ಧರ್ಮೋಪದೇಶಕಾಂಡ 18:15, 18, 19). ಈ ಪ್ರವಾದನೆಯು ಕ್ರಿಸ್ತನಲ್ಲಿ ನೆರವೇರಿರುತ್ತದೆಂಬದಾಗಿ ಪೇತ್ರನು ಈ ಪ್ರವಾದನೆಯನ್ನು ಉಲ್ಲೇಖಿಸಿದನು; ಯಾವನಾದರೂ ಆತನ ಮಾತನ್ನು ಕೇಳಿಸಿಕೊಳ್ಳದೆ ಹೋದರೆ ಅಂಥವನು "ಜನರೊಳಗಿಂದ ಕಿತ್ತು ಹಾಕಲ್ಪಟ್ಟು ಸಂಪೂರ್ಣ ನಾಶವಾಗುವನು" (ಅಪೊಸ್ತಲರ ಕೃತ್ಯಗಳು 3:22, 23; NLT). ದೇವರು ಕ್ರಿಸ್ತನಲ್ಲಿ ತನಗೆ ಮೆಚ್ಚಿಗೆ ಇದೆ ಎಂಬುದನ್ನು ಪರಲೋಕದಿಂದ ತಿಳಿಸುವವನಾಗಿ ಹೀಗೆ ಹೇಳಿದ್ದನು, "ಆತನ ಮಾತನ್ನು ಕೇಳಿರಿ!" (ಮತ್ತಾಯ 17:5; ಮಾರ್ಕ 9:7; ಲೂಕ 9:35). ಹೊಸ ಪ್ರವಾದಿಯಾಗಿರುವ, ದೇವರ ಮಗನ ಮಾತನ್ನ ಕೇಳಲೊಲ್ಲದವನು, ಅದರ ಫಲಿತವಾಗಿ "ಕಿತ್ತು ಹಾಕಲ್ಪಡುವನು."

ಅರಣ್ಯದಲ್ಲಿ ಅಲೆದಾಡಿದ ದಾಖಲೆಗಳು ತೋರಿಸುವದೇನೆಂದರೆ ಜನರು ದೇವರ ಆಜ್ಞೆಗಳಿಗೆ ಅವಿಧೇಯರಾದಾಗ ಕಠೋರವಾಗಿ ದಂಡಿಸಲ್ಪಟ್ಟರು. ದೇವರ ಎಚ್ಚರಿಕೆಗಳು ಗಂಭೀರವಾದವವುಗಳೆಂಬುದನ್ನು ಅವರು ಗುರುತಿಸಿಕೊಂಡರು. ದೇವರು ಈಗ ನಮ್ಮೊಂದಿಗೆ

ತನ್ನ ಮಗನ ಮೂಲಕವಾಗಿ ಮಾತಾಡುತ್ತಾನೆ (1:2); ಖಂಡಿತವಾಗಿಯೂ, ಆತನ ಸಂದೇಶವು ನಮಗೆ ಆತನ ಅಪೊಸ್ತಲರು ಮತ್ತು ಪ್ರೇರಿತ ಬರಹಗಳ ಮೂಲಕವಾಗಿ ಬರುತ್ತದೆ. ಇವುಗಳ ಮೂಲಕ, ನಾವು ಎಚ್ಚರಿಸಲ್ಪಟ್ಟಿರುತ್ತೇವೆ.

**ದೈವೋಕ್ತಿಗಳನ್ನಾಡಿದವನಿಗೆ** (ಎಚ್ಚರಿಸಿದವನಿಗೆ) ಎಂಬುದು "ಮಾತಾಡುವಾತನಿಗೆ" ಎಂಬುದಕ್ಕಿಂತ ವ್ಯತ್ಯಾಸವಾದ ಒಂದು ಪದವಾಗಿದೆ; ಅದು χρηματίζω (*chrēmatizō*) ಎಂಬುದರ ಒಂದು ರೂಪವಾಗಿದ್ದು, 8:5 ಮತ್ತು 11:7ರಲ್ಲಿ ಬಳಸಿರುವ ಅದೇ ಪದವಾಗಿದೆ. ಅದು ಅಪೊಸ್ತಲರ ಕೃತ್ಯಗಳು 11:26ರಲ್ಲಿ "ಕರೆದುಕೊಂಡು" ಎಂದು ಅನುವಾದಿಸಲ್ಪಟ್ಟಿದೆ ಮತ್ತು ಒಂದು "ದೈವಿಕ ಬುದ್ಧಿವಾದ" ಎಂಬುದನ್ನು ಸೂಚಿಸಬಹುದಾಗಿದೆ. ದೇವರು, ತನ್ನ ಪ್ರೇರಿತ ವಾಕ್ಯದ ಭಾಗವಾಗಿರುವ ಈ ಪತ್ರಿಕೆಯ ಮೂಲಕವೇ ತನ್ನ ಮಗನ ಯಜ್ಞದ ವಿಷಯದಲ್ಲಿ ಮಾತಾಡುತ್ತಿದ್ದನು. ಶಾಸ್ತ್ರಗಳಲ್ಲಿ ಪಶ್ಚಾತ್ತಾಪ ಪಡುವದಕ್ಕೆ ನೀಡಲಾಗಿರುವ ಎಚ್ಚರಿಕೆಗಳು ಸಾಕಷ್ಟಿರುತ್ತವೆ (ಲೂಕ 13:3; ಅಪೊಸ್ತಲರ ಕೃತ್ಯಗಳು 17:30, 31), ಅವುಗಳ ಮೂಲಕವಾಗಿ ದೇವರು ಇಂದು ನಮ್ಮ ಸಂಗಡ ಮಾತಾಡುತ್ತಾನೆ.

**ವಚನ 26.** ಸಿನಾಯ್ ಪರ್ವತದ ಮೇಲೆ ದೇವರ **ಧ್ವನಿಯು** ಎಷ್ಟೊಂದು ಶಕ್ತಿಶಾಲಿಯಾಗಿತ್ತದೆಂದರೆ ಅದರ ಶಬ್ದವೇ ಭೂಕಂಪನವನ್ನುಂಟು ಮಾಡಿತ್ತು (ವಿಮೋಚನಕಾಂಡ 19:18): **ಇನ್ನೊಂದೇ ಸಾರಿ ನಾನು ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ನಡುಗಿಸುವೆನು.** ಕೀರ್ತನೆಗಾರನು ಭೂಮಿಯ ಕಂಪಿಸುವ ಕುರಿತು ಮಾತಾಡಿದನು (ಕೀರ್ತನೆ 68:8; 114:7).[51] ಇಲ್ಲಿ ಉಲ್ಲೇಖಿಸಲಾಗಿರುವ ಹಗ್ಗಾಯ 2:6, 7 ವಚನಗಳು ಮೆಸ್ಸೀಯನ ಯುಗದ ಸೂಚನೆಯು ಭೂಮಿ ಮತ್ತು ಆಕಾಶಗಳ ಅದುರಿಸುವಿಕೆ ಎಂದು ಹೇಳುತ್ತದೆ. (ಯೇಸು ಈ ಭಾವನೆಯನ್ನು ಮತ್ತಾಯ 24:29; ನೋಡಿರಿ ಮಾರ್ಕ 13:25; ಲೂಕ 21:26.) ಯೆಶಾಯ 13:13ರಲ್ಲಿ ಹೆಚ್ಚುಕಡಿಮೆ ಅದೇ ಮಾತುಗಳು ಬಳಸಲ್ಪಟ್ಟಿವೆ: "ಇದಕ್ಕಾಗಿ ಸೇನಾಧೀಶ್ವರನಾದ ಯೆಹೋವನ ಕೋಪೋದ್ರೇಕವೂ ತೀಕ್ಷ್ಣರೋಷವೂ ಮಸಗುತ್ತಿರುವ ದಿನದಲ್ಲಿ [ಯೆಹೋವನೆಂಬ] ನಾನು ಆಕಾಶ ಮಂಡಲವನ್ನು ನಡುಗಿಸಿ ಭೂಲೋಕವನ್ನು ಸ್ಥಳದಿಂದ ಕದಲಿಸುವೆನು."[52]

**ವಚನ 27.** ಈ ವಚನವು ಹಗ್ಗಾಯ 2:6ರಲ್ಲಿನ ಉಲ್ಲೇಖನದ ಕ್ಲುಪ್ತ ವ್ಯಾಖ್ಯಾನವಾಗಿರುತ್ತದೆ. ಹೊಸದಾಗಿ ನಡುಗಿಸುವಿಕೆಯು ಕ್ರಿಸ್ತನ ಎರಡನೆಯ ಬರೋಣದ ವೇಳೆ ಲೋಕದ ವ್ಯವಸ್ಥೆಯನ್ನು ಸಮಾಪ್ತಿಗೊಳಿಸುವದನ್ನು ಸೂಚಿಸುತ್ತದೆ, ಆಗ ಭೂಮ್ಯಾಕಾಶಗಳು ಸಂಪೂರ್ಣವಾಗಿ ಅಳಿಸಿ ಹಾಕಲ್ಪಡುವವು (ಅಥವಾ **ನಡುಗಿಸಲ್ಪಡುವವು**) ಎಂದು ಕೆಲವರು ಭಾವಿಸಿಕೊಳ್ಳುತ್ತಾರೆ. ಹೇಗೂ, ಹಗ್ಗಾಯನ ಪ್ರವಾದನೆಯನ್ನು ಯೇಸುವಿನ ಎರಡನೆಯ ಬರೋಣವನ್ನು ಸೂಚಿಸುವಂತೆ ಮಾಡುವದೆಂದರೆ ಅದು "ಈ ಸಂದೇಶದಿಂದ ಅದರ ಜೀವಾಳವಾದ ಒತ್ತನ್ನು ಕದ್ದುಕೊಳ್ಳುವಂತಾಗುತ್ತದೆ — ಹೆಸರಿಸುವದಾದರೆ, ಮೋಶೆಯ ಒಡಂಬಡಿಕೆಯ ಮುಂತಿಳಿಸಲ್ಪಡುವಿಕೆಯು ಕ್ರಿಸ್ತನ ಮೊದಲನೆಯ ಬರೋಣದಿಂದ ನಡುಗಿಸಲ್ಪಡಬೇಕು (ತೆಗೆದು ಹಾಕಲ್ಪಡಬೇಕು) ಎಂಬದೆ."[53] ಹಗ್ಗಾಯ 2:7ರಲ್ಲಿ "ಸಮಸ್ತಜನಾಂಗಗಳ ಇಷ್ಟವಸ್ತುಗಳು" ಎಂಬುದು ಮೆಸ್ಸೀಯನನ್ನು ಸೂಚಿಸತಕ್ಕದ್ದು ಮತ್ತು ಆತನ ಬರೋಣವು ದೇವಾಲಯಕ್ಕಾಗಿ ಅತ್ಯಂಥ ದೊಡ್ಡ ಮಹಿಮೆಯನ್ನು ಸಾಧಿಸಿಕೊಳ್ಳುವದು.[54] ಹಳೆಯ ಒಡಂಬಡಿಕೆಯು ನಡುಗಿಸಲ್ಪಡಬಹುದಾಗಿದೆ; ಅದು ನಮ್ಮ ಭೌತಿಕ ಜಗತ್ತು ಸಹ ತೆಗೆದು ಹಾಕಲ್ಪಡುವಂತೆಯೇ ಅದು **ತೆಗೆದುಹಾಕಲ್ಪಡು[**ವದು]. ಅದಕ್ಕೆ ತದ್ವಿರುದ್ಧವಾಗಿ, ಹೊಸ ಒಡಂಬಡಿಕೆಯು ನಡುಗಿಸಲ್ಪಡುವದಿಲ್ಲ; ಅದನ್ನು ತೆಗೆದು ಹಾಕುವದಕ್ಕೆ ಅಥವಾ ಅದರ ಸ್ಥಾನದಲ್ಲಿ ಬೇರೊಂದನ್ನು

ತರುವದಕ್ಕೆ ಸಾಧ್ಯವಿಲ್ಲ.

ಕ್ರಿಸ್ತನು ನಿತ್ಯವಾದ, ಆತ್ಮೀಕ ಸಂಗತಿಗಳನ್ನು ಸ್ಥಾಪಿಸುವದಕ್ಕೆ ಬಂದನು. ಆತನ ನೂತನ "ಲೋಕ" ದಲ್ಲಿ ಪ್ರವೇಶವು ಆತ್ಮೀಕ ಜನನದ ಮೂಲಕ ಸಂಭವಿಸುತ್ತದೆ (ಯೋಹಾನ 3:3-5). ನಮಗೋಸ್ಕರವಿರುವ ದೇವರ ನಿತ್ಯವಾದ ಉದ್ದೇಶವನ್ನು ಹೊಂದಿಕೊಳ್ಳಬೇಕಾದರೆ, ನಾವು ಆತ್ಮೀಕವಾಗಿ ಬೆಳೆಯುವದನ್ನು ಮುಂದುವರೆಸಬೇಕು (2 ಪೇತ್ರ 3:10, 11). **ನಿರ್ಮಿತವಾದವುಗಳು** ಒಂದು ದಿನ ಶಾಶ್ವತವಾಗಿರುವಂಥದ್ದಾಗಿ ಸ್ಥಳವನ್ನು ಬಿಟ್ಟು ಕೊಡುವ ಉದ್ದೇಶಕ್ಕಾಗಿಯೇ ಮಾಡಲ್ಪಟ್ಟವು. **ಇನ್ನೊಂದೇ ಸಾರಿ** ಎಂಬುದು "ಇನ್ನು ಒಂದು ಸಾರಿ ಮಾತ್ರವೇ" ಎಂಬರ್ಥವಾಗಿರುತ್ತದೆ, ಆ ಸಮಯದಲ್ಲಿ ದೇವರು ಭೂಮಿಯನ್ನು ತೆಗೆದು ಹಾಕುವನು (2 ಪೇತ್ರ 3:10, 11).

ಕೆಲವರು ಈ "ನಡುಗಿಸುವಿಕೆ" ಯನ್ನು ಕೇವಲ ಸಾಂಕೇತಿಕಗೊಳಿಸುವದಕ್ಕೆ ಪ್ರಯತ್ನಿಸುತ್ತಾರೆ, ಕ್ರಿಸ್ತನ ಸುವಾರ್ತೆಯ ಮೂಲಕವಾಗಿ ಲೋಕದ ವ್ಯವಸ್ಥೆಯಲ್ಲಿ ಆಗಿರುವ ಬದಲಾವಣೆಯು ಹಳೆಯ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಿರುತ್ತದೆಂದು ಹೇಳುತ್ತಾರೆ. ಅಂತೂ, ಪೌಲನು ಲೋಕವನ್ನು ತಲೆಕೆಳಗೆ ಮಾಡಲಿಲ್ಲವೋ? (ನೋಡಿರಿ ಅಪೊಸ್ತಲರ ಕೃತ್ಯಗಳು 17:6; KJV.) ಹೇಗೂ, ವಾಕ್ಯಭಾಗವು ಭೌತಿಕ ವಸ್ತುಗಳು ನಡುಗಿಸಲ್ಪಟ್ಟರೆ, ಆತ್ಮೀಕ ಸಂಗತಿಗಳು **ಸ್ಥಿರವಾಗಿ ನಿಲ್ಲುವವು** ಎಂದು ಹೇಳುತ್ತದೆ. "ನಿರ್ಮಿತವಾದವುಗಳು" ನಡುಗಿಸಲ್ಪಡಬಹುದಾದ ಸಂಗತಿಗಳನ್ನೊಳಗೊಂಡಿರುತ್ತವೆ, ಉದಾಹರಣೆಗೆ ಸುಳ್ಳು ಧರ್ಮಗಳು ಮತ್ತು ನಾಗರಿಕ ಅಧಿಕಾರಗಳು. "ಆತ್ಮೀಕ ವಸ್ತುಗಳು" ಸ್ಥಿರವಾಗಿ ನಿಲ್ಲುವವು. ಇವುಗಳಲ್ಲಿ ದೇವರ ರಾಜ್ಯ ಮತ್ತು ಅದರ ಸಕಲ ಪ್ರಜೆಗಳನ್ನು ಒಳಗೊಂಡಿರುತ್ತವೆ.

**ವಚನಗಳು 28, 29.** ನಮ್ಮಲ್ಲಿ ಪ್ರತಿಯೊಬ್ಬರಿಗೂ ನಿತ್ಯವಾದ ಮತ್ತು **ಕದಲಿಸಲ್ಪಡಲಾರದ** ವಸ್ತುಗಳ ಅಗತ್ಯವಿರುತ್ತದೆ. ನಮಗೆ ಆ ಅಗತ್ಯತೆಯ ನೆರವೇರಿಕೆಯು ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಕೊಡಲ್ಪಡುತ್ತದೆ (ಎಫೆಸ 5:5). ಈ ಕದಲಿಸಲಾಗದ ರಾಜ್ಯವು ಶೀಘ್ರದಲ್ಲಿಯೇ ಯೆರೂಸಲೇಮಿಗೆ ಬಂದು ಯೆರೂಸಲೇಮಿನ ಗೋಡೆಗಳನ್ನು ಕದಲಿಸಲಿದ್ದ ರೋಮನ್ನರ ಗುದ್ದುವ ಮರದ ದಿಮ್ಮೆಗಳಿಗೆ ವಿರುದ್ಧ ಹೋಲಿಕೆ ಮಾಡಬಹುದೋ? ಭೌತಿಕ ಲೋಕದ ಎಲ್ಲಾ ಬದಲಾಗಬಲ್ಲ ವಸ್ತುಗಳಿಗೆ ತದ್ವಿರುದ್ಧವಾಗಿ, ಕ್ರಿಸ್ತನ ರಾಜ್ಯವು ನಿತ್ಯವಾಗಿ ಮತ್ತು ಕದಲಲಾರದೆ ನಿಲ್ಲುವದು. ದಾನಿಯೇಲ 2:44 ಮತ್ತು 7:14ರ ವಾಕ್ಯಭಾಗಗಳು ನಾಶಪಡಿಸಲಿಕ್ಕಾಗದಂತಹ ಒಂದು ರಾಜ್ಯವು ಬರುವದೆಂದು ಮುಂತಿಳಿಸಿದವು. ಈ ರಾಜ್ಯವು, ಅಂದರೆ ಸಭೆಯು ಸ್ವತಃ "ಪಾತಾಳಲೋಕದ ಬಲ" ವನ್ನು ಎದುರಿಸಿ ನಿಲ್ಲುವದು (ಮತ್ತಾಯ 16:18). ಪಟ್ಟಣದ ಎಲ್ಲಾ ಗೋಡೆಗಳು ಮತ್ತು ದ್ವಾರಗಳು ಒಡೆದು ಹಾಕಲ್ಪಡಬಲ್ಲವು, ಆದರೆ ನಮ್ಮ ದೇವರ ಹಾಗೂ ರಕ್ಷಕನಾದ ಯೇಸು ಕ್ರಿಸ್ತನ ರಾಜ್ಯವು ಹಾಗಾಗುವದಿಲ್ಲ.

ರಾಜ್ಯವು ಈಗಾಗಲೆ ಇರುವದಾಗಿ ಈ ವಾಕ್ಯಭಾಗವು ಘೋಷಿಸುತ್ತದೆ. ರಾಜ್ಯದಲ್ಲಿ ಸಭೆಯಲ್ಲಿರುವ ಅದೇ ಜನರು ಇರುತ್ತಾರೆ. ಅಪೊಸ್ತಲರ ಕೃತ್ಯಗಳು 1:3-8ರಲ್ಲಿ, ರಾಜ್ಯವು ಇನ್ನೂ ಭವಿಷ್ಯದಲ್ಲಿ ಬರುವದಾಗಿತ್ತು; ಆದರೆ ಪಂಚಾಶತ್ತಮ ದಿನದ ಬಳಿಕ ಸ್ಪಷ್ಟವಾಗಿ ಅದು ಅಸ್ತಿತ್ವದಲ್ಲಿರುವದು ಕಂಡು ಬರುತ್ತದೆ (ಕೊಲೊಸ್ಸೆ 1:13; ಪ್ರಕಟನೆ 1:5, 6, 9). ರಾಜ್ಯವು ಈಗ ಇರುತ್ತದೆಂಬ ವಾಸ್ತವಾಂಶವನ್ನು ನಾವು ಗಮನಕ್ಕೆ ತೆಗೆದುಕೊಳ್ಳದೆ ಬಿಡಬಾರದು.

28ನೇ ವಚನವು ಇನ್ನೊಂದು **ಮಾಡೋಣ** ಎಂಬ ಬುದ್ಧಿವಾದವನ್ನು ಹೊಂದಿದೆ. ನಾವು ದೇವರ ಕೃಪೆಯನ್ನು ಪಡೆದುಕೊಳ್ಳುತ್ತಿರುವಂತಹ ಪರಿಸ್ಥಿತಿಯನ್ನು ಕಾಪಾಡಿಕೊಳ್ಳುವದಕ್ಕೆ ಪ್ರಯಾಸ ಪಡಬೇಕು. ಇದು "ಗಟ್ಟಿಯಾಗಿ ಹಿಡಿದುಕೊಳ್ಳೋಣ" ಎಂದು ಹೇಳುವ ಇನ್ನೊಂದು

ವಿಧವಾಗಿದೆ (10:23). 12:18ರಲ್ಲಿ ಆರಂಭವಾದ ಈ ಬುದ್ಧವಾದವು, 10:25ರಲ್ಲಿರುವಂತೆ, ಆರಾಧನೆಯನ್ನು ಬಿಟ್ಟು ಬಿಡಬೇಡಿರಿ ಎಂದು ಬೇಡಿಕೊಳ್ಳುವಿಕೆಯನ್ನು ಒಳಗೊಂಡಿರಬಹುದಾಗಿದೆ. ಇದು 29ನೇ ವಚನದಲ್ಲಿ ಧರ್ಮೋಪದೇಶಕಾಂಡ 4:24ರಿಂದ ಒಂದು ಉಲ್ಲೇಖನವನ್ನು ತಿಳಿಸುವದರೊಂದಿಗೆ ಮುಕ್ತಾಯಗೊಳ್ಳುತ್ತದೆ,[55] ಅದು ನಮ್ಮ ದೇವರು ಅವಿಧೇಯತೆಯನ್ನು ಸಹಿಸಿಕೊಳ್ಳುವದಿಲ್ಲ ಎಂಬುದನ್ನು ಪರೋಕ್ಷವಾಗಿ ಸೂಚಿಸುತ್ತದೆ: "ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ, ತನಗೆ ಸಲ್ಲಬೇಕಾದ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡುವದಿಲ್ಲ."

**ದೇವರು ದಹಿಸುವ ಅಗ್ನಿಯಾಗಿದ್ದಾನೆಂಬುದು** ಬೈಬಲಿನಲ್ಲಿ ಒಂದು ಏಕಾಂಗಿ ಯೋಚನೆಯಲ್ಲ (ನೋಡಿರಿ ಯೆಶಾಯ 33:14). ಅನೇಕ ವಾಕ್ಯಭಾಗಗಳು "ಅಗ್ನಿ"ಯನ್ನು ಪ್ರಸ್ತಾಪಿಸುತ್ತವೆ, ಮತ್ತು ಅವೆಲ್ಲವನ್ನು ಸಾಂಕೇತಿಕವೆಂದಾಗಿಸುವದಕ್ಕೆ ಕಷ್ಟಕರವಾಗಿರುತ್ತದೆ. ಇಲ್ಲಿ ಅಥವಾ 10:26-29ರಲ್ಲಿ ಇರುವ "ಅಗ್ನಿ" ಕೇವಲ ರೂಪಕವಾಗಿರುತ್ತದೆಂಬದಕ್ಕೆ ಯಾವದೇ ಪುರಾವೆ ಇರುವದಿಲ್ಲ.

ನಾವು ದೇವರಿಗೆ **ಸಮರ್ಪಕವಾದ ಆರಾಧನೆಯನ್ನು** ಅರ್ಪಿಸಬೇಕಾಗಿರುತ್ತದೆ. "ಆರಾಧನೆ" (λατρεύω, *latreuō*) ಎಂಬ ಪದದ ಒಂದು ರೂಪವು ಇದಕ್ಕೆ ಮುಂಚೆ ಆರಾಧನೆಯಲ್ಲಿ ಯಾಜಕರ ಸೇವೆಯ ಕುರಿತಾಗಿ ಬಳಸಲ್ಪಟ್ಟಿತು (8:5), ಮತ್ತು ಇದರ ಒಂದು ಸಜಾತೀಯ ಕ್ರಿಯಾಪದವು 13:10ರಲ್ಲಿ ಬಳಸಲ್ಪಟ್ಟಿದೆ. ಈ ಪದವು ಇತರೆ ಆರಾಧಕರಿಗಾಗಿ ಸಹ ಬಳಸಲ್ಪಟ್ಟಿದೆ (9:9; 10:2). ಈ ಪದದಲ್ಲಿ ಆರಾಧನೆಯು ಸೇರಿರಬಹುದಾದರೂ, ಇದು ಹೆಚ್ಚು ಸಾಮಾನ್ಯವಾಗಿ "ಧಾರ್ಮಿಕ ಸ್ವಭಾವದ ಒಂದು ಸೇವೆ" ಎಂಬ ಅರ್ಥವಾಗಿರುತ್ತದೆ. ಇಲ್ಲಿ, ಇದು ಬೇರೆಯವರ ಕಡೆಗೆ ಕಳಕಳಿಯ ಕ್ರಿಯೆಗಳನ್ನು ಸೂಚಿಸುತ್ತಿರಬಹುದಾಗಿದೆ (13:1-3ರಲ್ಲಿರುವಂತೆ) ಮತ್ತು ಅದು ಅತಿಥಿಸತ್ಕಾರ, ಸೆರೆಯವರಿಗೆ ಸಹಾಯ ಮಾಡುವದು, ದಾಂಪತ್ಯವನ್ನು ಮಾನ್ಯವೆಂದೆಣಿಸುವದು, ಮತ್ತು ಹಾದರದಿಂದ ಆಗೂ ದ್ರವ್ಯಾಶೆಯಿಂದ ದೂರವಿರುವದು ಇವುಗಳನ್ನು ಒಳಗೊಂಡಿರಬಹುದಾಗಿದೆ (13:1-6).

ದೇವರ ಪರಿಶುದ್ಧತೆಯ ಕಡೆಗೆ **ಭಕ್ತಿಯಿಂದಲೂ ಭಯದಿಂದಲೂ** ಇರುವದು "ಎಂಬವುಗಳು ಆತನ ಕರುಣೆಗೆ ಪ್ರತಿಕ್ರಿಯೆಯಾಗಿ ಕೃತಜ್ಞತೆಯುಳ್ಳ ವಿಶ್ವಾಸ ಮತ್ತು ಪ್ರೀತಿಗಳೊಂದಿಗೆ ಹೊಂದಾಣಿಕೆಯಾಗದಂಥವುಗಳೇನಲ್ಲ."[56] ದೇವರ ವೈಭವಕ್ಕೆ ಮತ್ತು ಪರಿಶುದ್ಧತೆಗೆ ಗೌರವವನ್ನು ಕೊಡುವದು ಆತನಿಗೆ ಭಯ ಪಡುವದರ ಭಾಗವಾಗಿರುತ್ತದೆ. ಈ ಭಯದಿಂದ ಕೂಡಿದ ಭಕ್ತಿಯಲ್ಲಿ ದೇವರು ನಮಗೆ ಏನು ಮಾಡಬಲ್ಲನು ಎಂಬುದರ ಭಯವೂ ಸೇರಿರಬಹುದಾಗಿದೆ. ಬೆಂಕಿಯಿಂದ ದಂಡನೆಯಾಗುವ ಭಯವು ಖಂಡಿತವಾಗಿಯೂ ಪಾಪಿಗಳಲ್ಲಿ ಸರ್ವಶಕ್ತನ ಕಡೆಗೆ ನಡುಗುವಂತಹ ಗೌರವಭಾವನೆಯನ್ನು ಹುಟ್ಟಿಸತಕ್ಕದ್ದು.

ದೇವರ ಪ್ರತಿಯೊಂದು ಆಜ್ಞೆಗೆ ವಿಧೇಯರಾಗುವ ಕುರಿತು ಗಂಭೀರವಾಗಿರುವದು ಒಬ್ಬನನ್ನು "ನೇಮನಿಷ್ಠಾವಾದಿ" ಆಗಿಸುವದಿಲ್ಲ. ದೇವರ ಎಲ್ಲಾ ಆಜ್ಞೆಗಳಿಗೆ ಪ್ರೀತಿಯಿಂದ ಪ್ರತಿಕ್ರಿಯಿಸುವದು ನಮ್ಮ ಕೆಲಸ, ಹೊರತು ಅಗತ್ಯವಾದ ಮತ್ತು ಹೊರಗಿನ ಆಜ್ಞೆಗಳೆಂದು ಕರೆಯಲ್ಪಡುವವುಗಳ ನಡುವೆ ಭಿನ್ನವನ್ನು ಮಾಡುವದಕ್ಕೆ ಪ್ರಯತ್ನಿಸುವದಲ್ಲ. ನಾವು ಅವಿಧೇಯರಿಗಾಗುವ ಭಯಂಕರವಾದ ಅಂತ್ಯಕ್ಕೆ ಒಳಗಾಗುವವರಾಗದಂತೆ ನಮ್ಮ ದೇವರಿಗೆ ಸಮರ್ಪಕವಾದ ಆರಾಧನೆ ಅರ್ಪಿಸುವದನ್ನು ಮುಂದುವರೆಸೋಣ.

# ಅನ್ವಯಿಸುವಿಕೆ

**ನಾವು ಒಂದು ಓಟದಲ್ಲಿ ಇದ್ದೇವೆ! (12:1, 2)**

ನಾವು ಕ್ರೈಸ್ತೀಯ ಜೀವನದಲ್ಲಿ ಸೋಮಾರಿಗಳಾಗಿ ದಾರಿಯುದ್ದಕ್ಕೂ ಹೆಜ್ಜೆಗಳನ್ನು ಹಾಕುತ್ತಾ ಹೋಗಲು ಸಾಧ್ಯವಿಲ್ಲ; ನಾವೊಂದು ಓಟದಲ್ಲಿದ್ದು ಅದಕ್ಕೆ ಶಕ್ತಿ ಮತ್ತು ಛಲದ ಅಗತ್ಯವಿರುತ್ತದೆ. ನಾವು ದೇವರಿಂದ ತಪ್ಪಿ ಹಿಂಜರಿಯಬಹುದು (2:1), ಆದರೆ ನಾವು ಎಂದಿಗೂ ದೇವರ ಕಡೆಗೆ ತಪ್ಪಿ ಹೋಗಲು ಸಾಧ್ಯವಿಲ್ಲ; ಆತನಿಗೆ ಆಪ್ತರಾಗಿ ಬೆಳೆಯಬೇಕಾದರೆ ಅದಕ್ಕೆ ಪರಿಶ್ರಮ ಅಗತ್ಯವಿರುತ್ತದೆ. "ತಾಳ್ಮೆ" ಎಂದರೆ ಪಟ್ಟು ಬಿಡದಿರುವಿಕೆ ಎಂದಾಗಿದೆ. ನಮಗೆ ಅದು ಇರುವದಾದಲ್ಲಿ ನಾವೆಲ್ಲರೂ ವಿಜಯಿಗಳಾಗಬಲ್ಲೆವು.

ಕ್ರೈಸ್ತತ್ವವು ನಾವು ನಿವೃತ್ತಿ ಪಡೆಯಬಹುದಾದ ರೀತಿಯ ಕೆಲಸವಾಗಿರುವದಿಲ್ಲ. ಕ್ರೈಸ್ತರು ಕರ್ತನಿಗೋಸ್ಕರವಾದ ತಮ್ಮ ಕೆಲಸವನ್ನು ನಿಲ್ಲಿಸಿ ಬಿಡುವ ಯೋಜನೆಯನ್ನು ಹಾಕಿಕೊಳ್ಳುವದಿಲ್ಲ. ತಾವು ಮಾಡುತ್ತಿದ್ದ ಎಲ್ಲಾ ಕೆಲಸವನ್ನು ಮಾಡುವದಕ್ಕಾಗದಷ್ಟು ವೃದ್ಧರಾಗುವವರು ಕೇವಲ ತಮಗೆ ಸಾಧ್ಯವಾದದ್ದನ್ನೆಲ್ಲಾ ಮಾಡುವಂತೆ ಹೊಂದಿಸಿಕೊಳ್ಳುತ್ತಾರಷ್ಟೆ. ಕ್ರೈಸ್ತೀಯ ಓಟದಲ್ಲಿನ ಓಟಗಾರನು ಬೇರೆಯವರಿಗೆ ಸಹಾಯ ಮಾಡುವದಕ್ಕೆ ದಾರಿಗಳನ್ನು ಹುಡುಕಿಕೊಳ್ಳುತ್ತಾನೆ. ನಾವು ನಡೆಯುವದಕ್ಕೆ ಶಕ್ತರಾಗಿರುವಷ್ಟು ಕಾಲ ಬೇರೆಯವರನ್ನು ಪಶ್ಚಾತ್ತಾಪಕ್ಕೆ ಕರೆಯುವದನ್ನು ಮುಂದುವರೆಸಬಲ್ಲೆವು.

**ಓಟವನ್ನು ಓಡುವದು (12:1, 2)**

ನಾವು ವಿಜಯದ ಕಡೆಗಿನ ಓಟದಲ್ಲಿ ನಂಬಿಗಸ್ತರಾದ ಓಟಗಾರರ ಒಂದು ನಿರಂತರವಾದ ಸಾಲಿನಲ್ಲಿರುತ್ತೇವೆಂಬುದನ್ನು ಮರೆತು ಬಿಡುವದಾದರೆ, ನಾವು ನಮ್ಮ ಓಟದಲ್ಲಿ ತಪ್ಪು ಮಾಡಬಹುದು ಮತ್ತು ಕಿರೀಟವನ್ನು ಕಳೆದುಕೊಳ್ಳಬಹುದು. ಒಬ್ಬ ಯಶಸ್ವಿಯಾದ ಓಟಗಾರನು ತನ್ನ ಲಕ್ಷ್ಯವನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತಾನೆ ಮತ್ತು ತಾನು ಅಂತ್ಯದ ವರೆಗೂ ನಿಲ್ಲುವವನಾಗುವಂತೆ ತನ್ನ ವೇಗದ ನಡೆಯನ್ನು ರೂಪಿಸಿಕೊಳ್ಳುತ್ತಾನೆ. ಕ್ರೈಸ್ತನು ಮುಕ್ತಾಯದ ಗೆರೆಯನ್ನು ತಲುಪುವದಕ್ಕಾಗಿ ಬೇರೆ ಯಾವನನ್ನೂ ಸೋಲಿಸಬೇಕಾಗಿಲ್ಲ; ನಾವೆಲ್ಲರೂ ಬೇರೆ ಬೇರೆ ಸಮಯಗಳಲ್ಲಿ ಮುಕ್ತಾಯಗೊಳಿಸುತ್ತೇವೆ, ಆದರೆ ನಾವು ಮುಕ್ತಾಯಗೊಳಿಸತಕ್ಕದ್ದು.

ಈ ಪತ್ರಿಕೆಯನ್ನು ಓದುವ ಪ್ರಥಮ ವಾಚಕರು ಬಳಲಿದ್ದರು ಮತ್ತು ನಿರಾಶೆಗೊಂಡಿದ್ದರು. ಅವನು ಅಥವಾ ಅವಳು ಸರಿಯಾದ ಹಾದಿಯಲ್ಲಿ ಸಾಗಿದ್ದಾನೆಂಬುದಕ್ಕೆ ಮತ್ತು ಅದರಲ್ಲಿ ಈಗಲೂ ಉತ್ತಮ ಕೆಲಸವನ್ನು ಮಾಡುತ್ತಿದ್ದಾರೆಂಬುದಕ್ಕೆ ಪ್ರತಿಯೊಬ್ಬರಿಗೂ ನಿಶ್ಚಯತ್ವವು ಅಗತ್ಯವಿತ್ತು. ಅದರ ಕಾರಣದಿಂದ ಲೇಖಕನು ಹೀಗೆ ಹೇಳುತ್ತಾನೆ, "ನೀವು ಇತಿಹಾಸದ ಅತ್ಯಂಥ ಶ್ರೇಷ್ಠವಾದ ಓಟವನ್ನು ಓಡುತ್ತಿರುವಿರಿ. ಬೇರೆ ಎಲ್ಲಾ ಓಟಗಳ ಸ್ಥಾನವನ್ನು ಇದು ವಹಿಸಿಕೊಳ್ಳುತ್ತದೆ. ಒಲಂಪಿಕ್ ಕ್ರೀಡೆಗಳು ಮಹತ್ವವಿಲ್ಲದವುಗಳು. ನೀವು ಓಡುತ್ತಿರುವ ಓಟದ ಶ್ರೇಷ್ಠತೆಯನ್ನು ಗ್ರಹಿಸಿಕೊಳ್ಳುವದಾದರೆ ಇನ್ನೆಂದಿಗೂ ಆ ಓಟಗಳಿಗಾಗಿ ಅಂಥ ರೋಮಾಂಚಕತೆಯನ್ನು ಹೊಂದುವದಿಲ್ಲ."

ಈ ಓಟವನ್ನು ಓಡುವವರು ತಮಗೆ ಅಭ್ಯಂತರವುಂಟು ಮಾಡುವ ಯಾವದೇ ಅಡೆತಡೆಗಳನ್ನು ಮತ್ತು ಯಾವದೇ ಪಾಪವನ್ನು ತೆಗೆದು ಹಾಕುವ ಅಗತ್ಯವಿತ್ತು. ಇವುಗಳು ಪ್ರತಿಯೊಬ್ಬೊಬ್ಬರಿಗೂ ವ್ಯತ್ಯಾಸವಾಗಿದ್ದಿರಬಹುದಾಗಿದೆ. ದೇವರು ಯಾವದೋ ಉತ್ತಮವಾದದ್ದನ್ನು ಅದರ ಸ್ಥಾನದಲ್ಲಿ ತರುವ ಹೊರತು ಯಾವದನ್ನೇ ಆಗಲಿ ಬಿಟ್ಟು ಬಿಡುವಂತೆ

ದೇವರು ಎಂದಿಗೂ ನಮಗೆ ಹೇಳುವದಿಲ್ಲ.

ಓಟವನ್ನು ಹೇಗೆ ಓಡಬೇಕೆಂಬ ಬಗ್ಗೆ ಯೇಸು ನಮಗೆ ತೋರಿಸಿ ಕೊಟ್ಟಿದ್ದಾನೆ. ನಾವು ಮುಕ್ತಾಯದ ಗೆರೆಯನ್ನು ದಾಟುವಾಗ, ಯೇಸು ಅಲ್ಲಿದ್ದುಕೊಂಡು ಹೀಗೆ ಹೇಳುವನು, "ತಂದೆಯೇ, ನೀನು ನನಗೆ ಕೊಟ್ಟಿರುವ ಮಕ್ಕಳಲ್ಲಿ ಕೆಲವರು ಇಲ್ಲಿದ್ದಾರೆ, ನೋಡು" (ನೋಡಿರಿ 2:13). ಆ ಗೌರವದ ಮೇಲೆ ಮುಖ್ಯ ಗಮನವನ್ನು ಇಡುವದು ಯೇಸುವೇ ಮಾಡಿದಂತೆಯೇ ಮಾಡುವಂತೆ ನಮಗೆ ಕಾರಣವಾಗತಕ್ಕದ್ದು. ದಾರಿಯುದ್ದಕ್ಕೂ ಸಂದೇಹವಾದಿಗಳಿಂದ ಅನುಭವಿಸಿದ "ಅವಮಾನ ಅಲಕ್ಷ್ಯ" ಮಾಡಿದಾಗ್ಯೂ, ನಾವು ಯಾರ ಓಟಗಾರೆಂಬುದನ್ನು ಬಲ್ಲವರಾಗಿರುವದರಿಂದ ನಮ್ಮ ತಲೆಯನ್ನು ಎತ್ತಿ ಹಿಡಿಯಬಲ್ಲೆವು.

## ಎಲ್ಲಾ ಭಾರವನ್ನು ತೆಗೆದಿಡುವದು (12:1, 2)

ಭಾರಗಳು ಅನೇಕ ಮೂಲಗಳಿಂದ ಬರಬಹುದಾಗಿದೆ: ನಮ್ಮ ಸ್ವಂತ ಮನೆಯಲ್ಲಿ ನಮ್ಮ ಪ್ರಿಯರಿಂದ ವಿರೋಧ, ನಮ್ಮ ಉದ್ಯೋಗಗಳಲ್ಲಿ ಅಪಹಾಸ್ಯ ಅಥವಾ ಅಡಚಣೆಗಳು, ಯಾವಾಗಲೂ ದುರ್ಭಯನ್ನಾಡುವ ನಮ್ಮ ಸುತ್ತಲಿನ ದುಷ್ಟರಿ. ಇವೆಲ್ಲವು ನಿಜವಾದ ಸಂಕಷ್ಟಗಳಾಗಿವೆ. ಸೈತಾನನು ಅನೇಕ ಸ್ಥಳಗಳಲ್ಲಿ ದುಷ್ಟ ಸೇವಕರನ್ನು ಇಟ್ಟುಕೊಂಡಿದ್ದಾನೆ, ಅನೇಕ ವೇಳೆ ನಾವು ಅವರ ಇರುವಿಕೆಯನ್ನು ಕಲ್ಪನೆ ಮಾಡಿಕೊಳ್ಳದಂತಹ ಸ್ಥಳಗಳಲ್ಲಿ ಇಟ್ಟಿರುತ್ತಾನೆ. ಆದರಿಂದ, ನಾವು ನಿರಂತರವಾಗಿ ಎಚ್ಚರಿಕೆಯುಳ್ಳವರಾಗಿರಬೇಕು. ನಮ್ಮ ಭಾರವನ್ನುಂಟು ಮಾಡುವ ಯಾವದನ್ನೇ ಆಗಲಿ ತೆಗೆದು ಬಿಡುವದೆಂದರೆ ಪ್ರಸ್ತುತ ಪರಿಸ್ಥಿತಿಯನ್ನು ಬಿಟ್ಟು ಬೇರೆ ವೃತ್ತಿಯನ್ನು ಅಥವಾ ಮಿತ್ರರನ್ನು ಹುಡುಕಿಕೊಂಡು ಹೋಗುವದು ಎಂದಾಗಿದೆ. ಓಟವನ್ನು ಹೇಗೆ ಓಡಬೇಕೆಂಬುದನ್ನು ಕಲಿತುಕೊಳ್ಳುವದು ಕಷ್ಟಕರವಾಗಬಹುದು, ವಿಶೇಷವಾಗಿ ಆರಂಭದಲ್ಲಿ ಕಷ್ಟವೇನಿಸಬಹುದು; ಆದರೆ ನನ್ನ ನೊಗವು ಸುಲಭ ಹಾಗೂ ಭಾರವು ಹಗುರವಾಗಿರುವದೆಂದು ಯೇಸು ವಾಗ್ದಾನ ಮಾಡಿದನು (ಮತ್ತಾಯ 11:28-30).

ಸಂಕಷ್ಟಗಳು ಕೆಲವು ಸಾರಿ ನಮ್ಮೊಳಗಿಂದಲೇ ಬರಬಲ್ಲವು. ನೀವು ಹೀಗೆ ಯೋಚಿಸಬಹುದು, "ನಾನೇನಾದರೂ ಹೆಚ್ಚು ಹಣವನ್ನು ಗಳಿಸಿಕೊಳ್ಳುವದಾದರೆ, ಖಂಡಿತವಾಗಿಯೂ ನಾನು ಕೆಲವೊಂದು ಶೋಧನೆಗಳನ್ನು ಎದುರಿಸಿ ನಿಲ್ಲಬಹುದು." ಆಗಲೂ ನೀವು ನೀವೇ ಆಗಿರುವಿರಿ! ಈ ಮನೋಭಾವವು ನಮ್ಮ ವಿಷಯದಲ್ಲಿ ದೇವರು ನಡೆದುಕೊಳ್ಳುವ ಒದಗಿಸುವಿಕೆಯ ರೀತಿಗಳಲ್ಲಿ ನಮಗೆ ನಂಬಿಕೆಯ ಕೊರತೆಯಿರುತ್ತದೆಂಬುದನ್ನು ಇದು ತೋರಿಸುತ್ತದೆ. ಒಂದು ವೇಳೆ ನೀವು, "ನಾನು ಈ ಪರಿಸ್ಥಿತಿಗಳಲ್ಲಿ ಇಲ್ಲದಿದ್ದರೆ ನಾನು ಉತ್ತಮವಾಗಿರುತ್ತಿದ್ದೆನು" ಎಂದು ಯೋಚಿಸುವದಾದರೆ, ಅವುಗಳಿಂದ ಹೊರಗೆ ಬಂದು ಬಿಡಿರಿ! ನೀವು ಕಳಪೆ ಆಯ್ಕೆಗಳನ್ನು ಮಾಡುವಂತೆ ಅನುಮತಿಸಿದ್ದಕ್ಕಾಗಿ ದೇವರ ವಿರುದ್ಧ ಗುಣಗುಟ್ಟುವ ಮೂಲಕ ಬದಲಾವಣೆಯನ್ನಾಗಲಿ ಅಥವಾ ಉತ್ತಮವಾದದ್ದೊಂದು ಓಟವನ್ನು ಓಡುವದಕ್ಕಾಗಲಿ ಸಾಧ್ಯವಿಲ್ಲ. ನೀವು ವಾಕ್ಯದ ಹೆಚ್ಚು ಜ್ಞಾನವನ್ನು ಬೆಳೆಸಿಕೊಳ್ಳುವದಕ್ಕೆ ಪ್ರಯಾಸ ಪಡಬೇಕು ಮತ್ತು ಅದಕ್ಕೆ ನಂಬಿಗಸ್ತರಾಗಿ ವಿಧೇಯರಾಗಬೇಕು. ಪ್ರತಿ ಸಾರಿ ಶೋಧನೆಯು ಕಾಣಿಸಿಕೊಳ್ಳುವಾಗಲೆಲ್ಲಾ ಅದನ್ನು ಎದುರಿಸುವಂತೆ ತನಗೆ ಸಹಾಯವಾಗುವಕ್ಕಾಗಿ ಶಾಸ್ತ್ರಗಳನ್ನು ಉಲ್ಲೇಖ ಮಾಡಿದನು. ನಾವು ಆತನ ಮಾದರಿಯನ್ನು ಅನುಸರಿಸುವದಾದರೆ, ಸ್ವತಃ ನಮ್ಮ ಭಕ್ತಿಯ ಜೀವಿತಗಳೇ ಸೈತಾನನಿಗೆ ಒಂದು ಗದರಿಕೆ ಆಗುವದು.

## ಅವಮಾನವನ್ನು ಅಲಕ್ಷ್ಯ ಮಾಡುವದು (12:1, 2)

ಶಿಲುಬೆಯ ಮರಣವೊಂದರ ಭಯಂಕರವಾದ ಬಾಧೆಗಿಂತಲೂ ಅದಕ್ಕೆ ಅಂಟಿಕೊಂಡಿದ್ದ ಅವಮಾನವು ಅತ್ಯಧಿಕವಾಗಿತ್ತು. ಸ್ವಲ್ಪ ಸಂಗತಿಗಳು ಸೋಲಿಸಲ್ಪಟ್ಟ ಸೈನಿಕರಿಗೆ ತಮ್ಮ ವೈರಿಗಳಿಂದ ಬೆತ್ತಲೆಗೊಳಿಸಲ್ಪಡುವದಕ್ಕಿಂತಲೂ ಹೆಚ್ಚು ಮುಜುಗರವನ್ನುಂಟು ಮಾಡುವಂತವುಗಳಾಗಿದ್ದವು. ಇದು ಸಂಪೂರ್ಣ ಅಪಜಯದ ಮತ್ತು ಜಯಿಸಿದಾತನಿಗೆ ಅಧೀನಪಡಿಸಿಕೊಳ್ಳುವ ಒಂದು ಸಾಮಾನ್ಯ ಸಂಕೇತವಾಗಿತ್ತು. ಅಲ್ಲದೆ, ಇದನ್ನು ಸ್ವಲ್ಪ ಹೊತ್ತಿನಲ್ಲಿಯೇ ಶಿಲುಬೆಗೆ ಹಾಕಲ್ಪಡಲಿದ್ದ ವ್ಯಕ್ತಿಗೆ ಮಾಡಲಾಗುತ್ತಿತ್ತು. ಆತನ ಬೆತ್ತಲೆಯನ್ನು ಎಲ್ಲರೂ ನೋಡುವದಕ್ಕೆ ಸಾಧ್ಯವಾಗುವ ಕಡೆಗಳಲ್ಲಿ ಅತನನ್ನು ಪ್ರದರ್ಶಿಸಲಾಗುತ್ತಿತ್ತು. ವಿವಸ್ತ್ರಗೊಳಿಸಲ್ಪಟ್ಟವನಾಗಿ, ಆತನು ಸಮಸ್ತಕ್ಕೂ ಮಾತ್ರವಲ್ಲದೆ ನೋಡುಗರಿಗೆ ಸಹ ತೋರಿಸಲ್ಪಡುತ್ತಿದ್ದನು. ತಮಗೆ ಗಹನವಾದ ವೈಯಕ್ತಿಕ ಮುಜುಗರವನ್ನುಂಟು ಮಾಡುವವರನ್ನು ಅಲಕ್ಷ್ಯ ಮಾಡದೆ ಇರುವವರು ಬಹಳ ಸ್ವಲ್ಪ ಜನ – ಆದರೆ ಯೇಸು ಅಲಕ್ಷ್ಯ ಮಾಡಿದನು, ಮತ್ತು ಆವರಿಗೋಸ್ಕರ ಪ್ರಾರ್ಥಿಸಿದನು (ಲೂಕ 23:34).

ಕ್ರಿಸ್ತನು "ಅವಮಾನವನ್ನು ಅಲಕ್ಷ್ಯ ಮಾಡಿ[ದನು]"; ಅದು ಆತನಿಗೆ ಲೆಕ್ಕಕ್ಕೆ ಇರಲಿಲ್ಲ. ಆತನು ಶೀಘ್ರದಲ್ಲಿಯೇ ಪರಲೋಕದಲ್ಲಿ ತನ್ನ ತಂದೆಯ ಸಂಗಡ ಸಕಲ ಸಂತೋಷವನ್ನು ಹೊಂದಿಕೊಳ್ಳುವ ಗಳಿಗೆಯನ್ನು ಎದುರು ನೋಡುತ್ತಿದ್ದನು. ಇದರ ಮಧ್ಯದಲ್ಲಿ, ಆತನು ಖಂಡಿತವಾಗಿಯೂ ಎಲ್ಲಾ ಯುಗಗಳ ನೀತಿವಂತರೆಲ್ಲರೊಂದಿಗೆ ಪರದೈಸಿನಲ್ಲಿ ಆನಂದಿಸಿದನು. ಶಿಲುಬೆಯ ಮರಣವನ್ನು ಸಹಿಸಿಕೊಳ್ಳುವ ಮೂಲಕ, ಅತ್ಯಂಥ ಸಂಪೂರ್ಣ ನ್ಯಾಯವಿಚಾರಣೆಯನ್ನು ಅನುಭವ ಮಾಡಿದನು ಮತ್ತು ಕ್ರಿಯೆಯಲ್ಲಿರುವ ನಂಬಿಕೆಗಾಗಿ ನಮಗೆ ಸರ್ವೋಚ್ಚ ಮಾದರಿಯಾದನು.

## "ಯೇಸುವನ್ನು ಆಲೋಚಿಸಿರಿ" (12:3)

ನಾವು "ಯೇಸುವನ್ನು ಆಲೋಚಿಸುವ" ವೇಳೆ, ಆತನ ಜೀವಿತದಿಂದ ಕಲಿತುಕೊಂಡ ಪಾಠಗಳನ್ನು ನಮ್ಮ ಜೀವಿತಕ್ಕೆ ಅನ್ವಯಿಸಿಕೊಳ್ಳಬಹುದು. ನಮ್ಮ ಬಳಲಿದ ಆತ್ಮಗಳು ಸೋತು ಹಿಂದೆ ಸರಿಯದ ಹಾಗೆ ಇದನ್ನು ಅನುದಿನವೂ ಮಾಡಬೇಕು. ಇದು ಯೇಸುವಿನ ದಾರಿಯಲ್ಲಿ ಈ ಓಟವನ್ನು ಓಡುವದಕ್ಕೋಸ್ಕರ ಒಂದು ಶಿಲುಬೆಯನ್ನು ಹೊತ್ತುಕೊಳ್ಳಬೇಕಿದೆ, ಒಂದು ಬೆಲೆಯನ್ನು ತೆತ್ತಬೇಕಿರುತ್ತದೆ. ಕೆಲವು ಸಾರಿ ಆ ಬೆಲೆಯು ಆರ್ಥಿಕವಾಗಿರುತ್ತದೆ. ಒಂದು ಉದ್ಯೋಗವು ಕ್ರೈಸ್ತನು ಮಾಡಲಿಕ್ಕಾಗದ ಕಾರ್ಯಗಳನ್ನು ಮಾಡುವಂತೆ ಬೇಡಿಕೆಯಿಡಬಹುದು. ಆ ಬೆಲೆಯು ಸಾಮಾಜಿಕವಾಗಿರಬಹುದು, ಯಾಕೆಂದರೆ ಕ್ರೈಸ್ತನು ತನ್ನನ್ನು ಯೇಸುವಿನ ಹೆಜ್ಜೆಜಾಡುಗಳಿಂದ ದೂರಕ್ಕೆ ಎಳೆದೊಯ್ಯುವಂತಹ ಸ್ನೇಹಿತರನ್ನು ಆರಿಸಿಕೊಳ್ಳುವದಿಲ್ಲ. ಕ್ರಿಸ್ತನನ್ನು ಮತ್ತು ಸರಳವಾದ ಸುವಾರ್ತೆಯನ್ನು ಅಂಗೀಕರಿಸಿಕೊಂಡದ್ದಕ್ಕಾಗಿ ಒಬ್ಬನು ಸ್ವಂತದವರಿಂದ ತನ್ನವನಲ್ಲವೆಂದು ನಿರಾಕರಿಸಲ್ಪಡಲೂ ಬಹುದಾಗಿದೆ.

"ಇಕ್ಕಟ್ಟಾದ ದಾರಿ" ಯಲ್ಲಿ ಮುಂದುವರೆಯುವದಕ್ಕಾಗಿ ಬೆಲೆಯನ್ನು ತೆತ್ತುವದಕ್ಕೆ ಮನಸ್ಸಿಲ್ಲದವರು ಯೇಸು ಭೂಮಿಯ ಮೇಲಿನ ತನ್ನ ಓಟದ ಕೊನೆಯಲ್ಲಿ ಸ್ವೀಕರಿಸಿಕೊಂಡ ಸಂತೋಷವನ್ನು ಸ್ವೀಕರಿಸಿಕೊಳ್ಳಲಾರರು. ದಾರಿಯು ದೀರ್ಘವೆಂದು ತೋರುವಾಗ ಮತ್ತು ಜೀವನದ ಹೋರಾಟಗಳು ಸಹಿಸಲಾಗದವುಗಳೆಂದು ಅನ್ನಿಸುವಾಗ ಕೆಲವರು "ಉತ್ತಮವಾಗಿ ಮಾಡುವದರಲ್ಲಿ ಬೇಸರಗೊಳ್ಳುತ್ತಾರೆ" (ಗಲಾತ್ಯ 6:9; RSV). ನಾವು ಯಾರನ್ನು ನಂಬಿದ್ದೇವೆಂಬುದನ್ನು ಅರಿತುಕೊಂಡವರಾಗಿ ಕಷ್ಟಗಳಿಗಾಗಿ ಸಿದ್ಧವುಳ್ಳವರು ಮತ್ತು ಅವುಗಳ

ನಡುವೆ ಮಂದಹಾಸವನ್ನು ಬೀರುವವರು ಹಾಗೂ ಸುವಾರ್ತೆಗೋಸ್ಕರ ಪ್ರತಿವಾದವನ್ನು ಮಾಡುವದಕ್ಕೆ ಸಿದ್ಧವಾಗಿ ನಿಲ್ಲೋಣ (ಫಿಲಿಪ್ಪಿ 1:16; 2 ತಿಮೊಥೆ 1:12). ದೇವರು ಅಧಿಕಾರದಲ್ಲಿದ್ದಾನೆ. ಆತನು ಪಾಪ, ಸುಳ್ಳು ಬೋಧನೆ, ಮತ್ತು ಅಜ್ಞಾನಗಳ ವಿರುದ್ಧದ ಅಂತಿಮ ಯುದ್ಧದಲ್ಲಿ ಜಯ ಗಳಿಸುವನು (ಪ್ರಕಟನೆ 17:14).

## "ಬೇಸರಗೊಳ್ಳದಿರಿ ಅಥವಾ ನಿರಾಶರಾಗಬೇಡಿರಿ" (12:3)

ನಾವು ಹೋರಾಡುವದರಲ್ಲಿ ಬೇಸರಗೊಳ್ಳುವ ಯುದ್ಧಗಳ ಕುರಿತು Thomas G. Longನು ಉತ್ತಮವಾಗಿ ಬಣ್ಣಿಸುತ್ತಾನೆ:

> . . . ಕ್ರೈಸ್ತರು ಬೇಸರಗೊಂಡು ನಿರಾಶೆ ಹೊಂದುತ್ತಾರೆ. ಅವರು ಹೋರಾಟದಲ್ಲಿ ಬಳಲಿ ಹೋಗುತ್ತಾರೆ, ಪಟ್ಟಣದಲ್ಲಿನ ಸಮಸ್ಯೆಗಳ ವಿರುದ್ಧ ಕಾದಾಡುವದರಲ್ಲಿ ಬಳಲಿ ಹೋಗುತ್ತಾರೆ, ಒಂದು ಕೃತಜ್ಞೆಯ ಮಾತನ್ನೂ ಹೇಳದೆ ಓಡಿ ಹೋಗುವ ಜನರಿಗೆ ಸಹಾಯ ಮಾಡಿ ಮಾಡಿ ಬಳಲಿ ಹೋಗುತ್ತಾರೆ, . . . "ಒಂದು ಸಭೆಗಾಗಿ ಆರಿಸಿಕೊಳ್ಳಲು ಹುಡುಕುತ್ತಿರುವ" ಜನರನ್ನು ಸಂಧಿಸುವದಕ್ಕೆ ಹೋಗಿ ಬಂದು ಬಳಲಿರುತ್ತಾರೆ, ತಮ್ಮ ಸ್ವಂತ ವ್ಯಸನಗಳ, ತಮ್ಮ ಸ್ವಂತ ಹಾತೊರೆತಗಳ ವಿರುದ್ಧ ಹೋರಾಡುವದರಲ್ಲಿ ಬಳಲಿರುತ್ತಾರೆ, ನೇಗಿಲನ್ನು ಕೆಳಗಿಟ್ಟು ದಾರಿಯಲ್ಲಿ ಸ್ವಲ್ಪ ವಿಶ್ರಾಂತಿ ಪಡೆಯಬೇಕೆಂಬ ತಮ್ಮ ಸ್ವಂತ ಇಚ್ಛೆಯ ವಿರುದ್ಧ ಹೋರಾಡುವದರಲ್ಲಿ ಬಳಲಿ ಹೋಗಿರುತ್ತಾರೆ. ಈ ಕಲ್ಲುಗಳಿಂದ ಕೂಡಿರುವ ನೆಲವನ್ನು ಒಡೆಯುವಂತೆ ಬೇರೆ ಇನ್ನಾರಿಗಾದರೂ ಏಕೆ ಅವಕಾಶ ಕೊಡಬಾರದು?[57]

ಒಂದು ಕಥೆಯು ಮುಕ್ತಾಯ ಗೆರೆಯನ್ನು ದಾಟಿದ ಬಳಿಕ ಉಸಿರು ಗಟ್ಟಿದವನಾಗಿ ಬಿಟ್ಟು ಮರಣವನ್ನು ಹೊಂದಿದ ಗ್ರೀಕ್ ಓಟಗಾರನೊಬ್ಬನ ಕುರಿತು ಹೇಳುತ್ತದೆ – ಆದರೆ ಆತನು ನಿಂತು ಹೋಗುವ ಮುಂಚೆ ಆತನು ತನ್ನ ಓಟವನ್ನು ತೀರಿಸುವದಕ್ಕೆ ಜಾಗ್ರತೆ ವಹಿಸಿದ್ದನು. ಯೇಸುವಿನ ಮಾದರಿಯನ್ನು ಅನುಸರಿಸುವದರಲ್ಲಿ ನಾವೆಲ್ಲರೂ ಇದನ್ನೇ ಮಾಡಬೇಕಾಗಿರುತ್ತದೆ. ಅಂತ್ಯದ ವರೆಗೂ ಸಹಿಸಿಕೊಳ್ಳುವದು ನಿತ್ಯವಾದ ರಕ್ಷಣೆಯ ಅಂತಿಮ ನಿಶ್ಚಯತ್ವವನ್ನು ಒದಗಿಸುತ್ತದೆ. ಕ್ರಿಸ್ತನು "ಸಹಿಸಿಕೊಂಡನು," ಮತ್ತು ಆತನ ವಿಜಯವು ನಮಗೆ ಮುನ್ನಡೆಯುತ್ತಲೇ ಇರುವಂತೆ ಪ್ರೋತ್ಸಾಹಿಸತಕ್ಕದ್ದು.

## ಹಿಂಸೆಯನ್ನು ಅನುಭವಿಸದಂತೆ ದೂರವಿರುವದು (12:4)

ಇಬ್ರಿಯರಿಗೆ ಪತ್ರಿಕೆಯ ಮೂಲ ವಾಚಕರು ಮರಣದಿಂದ ದೂರವಿರುವದಕ್ಕಾಗಿ ತಮ್ಮ ತಂದೆತಾಯಿಗಳು ತಾರ್ಸದ ಸೌಲನ ಕೈಗಳಲ್ಲಾದ ಹಿಂಸೆಯಿಂದ ಅವರ ತಂದೆತಾಯಿಗಳು ತಪ್ಪಿಸಿಕೊಂಡು ಓಡಿದ ವೇಳೆ ಇನ್ನೂ ಮಕ್ಕಳಾಗಿದ್ದಿರಬಹುದು (ಅಪೊಸ್ತಲರ ಕೃತ್ಯಗಳು 8:1-4; 9:1; 22:4). 10:32-34ರಲ್ಲಿ ಪ್ರಸ್ತಾಪಿಸಲಾಗಿರುವ ಬಹು ಸಂಕಷ್ಟದ ಹೊರತಾಗಿಯೂ, ರಕ್ತಸಾಕ್ಷಿಗಳಾಗಿ ಸಾಯುವ ಗಂಡಾಂತರವು ಈ ಸಂದೇಶವನ್ನು ಕೇಳಿಸಿಕೊಳ್ಳುವವರಿಗೆ ಇನ್ನೂ ಬಂದಿರಲಿಲ್ಲ; ಆದರೆ ಇದೊಂದು ಸನ್ನಿಹಿತವಾಗಿದ್ದ ಸಾಧ್ಯತೆಯಾಗಿತ್ತದೆಂಬುದನ್ನು 12:4ನೇ ವಚನವು ಪರೋಕ್ಷವಾಗಿ ಸೂಚಿಸುತ್ತಿರಬಹುದಾಗಿದೆ. ಮನುಷ್ಯರು ದೇಹವನ್ನು ಕೊಲ್ಲಬಹುದು, ಆದರೆ ಅದಷ್ಟನ್ನೇ ಅವರು ಮಾಡಲು ಶಕ್ತರು ಎಂಬುದನ್ನು ಈ ಕ್ರೈಸ್ತರು ನೆನಪಿಸಿಕೊಳ್ಳುವ ಅಗತ್ಯವಿತ್ತು (ಲೂಕ 12:4; ಮತ್ತಾಯ 10:28). ಯೇಸು ಹೀಗೆ ಹೇಳಿದ್ದನು, "ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು" (ಯೋಹಾನ 10:28). ನಮ್ಮನ್ನು ಹೊರತಾಗಿಸಿ ಬೇರೆ ಯಾವದೂ ನಮ್ಮ ಆತ್ಮಗಳನ್ನು ನಾಶಗೊಳಿಸಲು ಸಾಧ್ಯವಿಲ್ಲ. ಹೇಗೂ, ಕ್ರೈಸ್ತೀಯ ಓಟವನ್ನು

ಉತ್ತಮವಾಗಿ ಓಡುವದನ್ನು ನಾವು ನಿಲ್ಲಿಸುವದಾದರೆ, ನಾವು ನಮ್ಮ ನಿತ್ಯವಾದ ಆಶೀರ್ವಾದಗಳನ್ನು ಕಳೆದುಕೊಳ್ಳಬಹುದು (ಗಲಾತ್ಯ 5:4, 7).

ನಾವು ಜನರಿಗೆ ವಿರುದ್ಧವಾಗಿಲ್ಲ ಆದರೆ "ಪಾಪದ ವಿರುದ್ಧ ಪ್ರಯಾಸ ಪಡುತ್ತಿದ್ದೇವೆ" ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ನೈತಿಕ ಜೀವನ ನಡಿಸುವ ಮೂಲಕ ಮತ್ತು ಆತ್ಮೀಕ ಬೋಧನೆಯ ಮೂಲಕ ಮತಭ್ರಷ್ಟತೆಯ ಭಯಂಕರವಾದ ಕೆಟ್ಟತನದ ವಿರುದ್ಧ ಹೋರಾಟವನ್ನು ಮಾಡಬೇಕು.

## ಕ್ರಿಸ್ತನಿಗಾಗಿ ಬಾಧೆಯನ್ನನುಭವಿಸುವದು (12:4-6)

ಶಿಸ್ತಿನ ಕೊರತೆಯಿದ್ದಂಥ ಪರಿಸರದಲ್ಲಿ ಬೆಳೆಸಲ್ಪಟ್ಟವರು ಈ ಜೀವನದಲ್ಲಿ ತಾವು ಅನುಭವಿಸುವಂತೆ ದೇವರು ಅನುಮತಿಸುವ ಶಿಕ್ಷೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟವಾಗಿರುತ್ತದೆ. ಹೇಗೂ, ಈ ಪತ್ರಿಕೆಯನ್ನು ಸ್ವೀಕರಿಸಿಕೊಂಡವರು ಈ ಭಾವನೆಯನ್ನು ಸುಲಭವಾಗಿ ಅರ್ಥಮಾಡಿಕೊಂಡಿರಬೇಕಾಗಿತ್ತು.

Poland ದೇಶದಲ್ಲಿ, ಕಮ್ಯೂನಿಶಮ್ ಪತನಗೊಳ್ಳುವದಕ್ಕೆ ಮುನ್ನ, Walenty Dawidow ಎಂಬ ಸ್ವದೇಶಿ ಬೋಧಕನನ್ನು ತನ್ನ ಸೇವೆಯ ಬಗ್ಗೆ ವಿವರಿಸುವಂತೆ ಅಧಿಕಾರಗಳ ಮುಂದೆ ಕರೆಯಲಾಯಿತು. ಆತನು Poland ದೇಶದಲ್ಲಿರುವ ಸಭೆಯ ಮುಖ್ಯಸ್ಥನೋ ಎಂದು ಆತನಿಗೆ ಕೇಳಲಾಯಿತು. ಅದಕ್ಕೆ ಆತನು ಧೈರ್ಯವಾಗಿ, "ನಾನು Poland ದೇಶದಲ್ಲಿರುವ ಕ್ರಿಸ್ತನ ಸಭೆಯ ಮುಖ್ಯಸ್ಥನಲ್ಲ. ಕ್ರಿಸ್ತನೊಬ್ಬನೇ ಸಭೆಗೆ ಶಿರಸ್ಸಾಗಿದ್ದಾನೆ!" ಎಂದು ಉತ್ತರಿಸಿದನು. ಆತನಿಗೆ ಸರಳವಾದ ಸುವಾರ್ತೆಯನ್ನು ಸಾರುವದನ್ನು ಮುಂದುವರೆಸುವದಕ್ಕೆ ಅನುಮತಿಸಲಾಯಿತು. ನಾವು ಧೈರ್ಯವಂತರಾಗಿರುವ ಮತ್ತು "ಸಾತ್ವಿಕತ್ವದಿಂದಲೂ ಮನೋಭೀತಿಯಿಂದಲೂ" ಉತ್ತರವನ್ನು ಹೇಳುವದಕ್ಕೆ ಸಿದ್ಧರಾಗಿರುವ ಅಗತ್ಯವಿರುತ್ತದೆ (1 ಪೇತ್ರ 3:15) – ನಾವು ಅದಕ್ಕೋಸ್ಕರ ಬಾಧೆಯನ್ನನುಭವಿಸಬೇಕಾಗಿ ಬಂದರೂ ಸರಿಯೇ. ನಾವು ಆತ್ಮೀಕ ಜೀವನದ ಸತ್ಯವನ್ನು ಕಲಿಸತಕ್ಕದ್ದು: ಭಕ್ತಿವಂತರಾಗಿ ಜೀವಿಸುವವರೆಲ್ಲರೂ ಒಂದಿಲ್ಲಾ ಒಂದು ರೀತಿಯ ಹಿಂಸೆಯನ್ನು ಅನುಭವಿಸುವರು (2 ತಿಮೊಥೆ 3:12).

ನಾವು ದೇವರಿಗೆ ಅಧೀನರಾಗಿ ಮತ್ತು ಮೆಚ್ಚಿಕೆಯುಳ್ಳವರಾಗಿ ಜೀವಿಸಬೇಕಾದರೆ ಒಂದಿಲ್ಲಾ ಒಂದು ವಿಧದಲ್ಲಿ ಬಾಧೆಯನ್ನು ಅನುಭವಿಸಬೇಕಾಗಬಹುದು. ದೇವರು ತನ್ನ ಮಕ್ಕಳನ್ನು ಶಿಕ್ಷಿಸುತ್ತಾನೆ, ಮತ್ತು ಆ ಶಿಕ್ಷಿಸುವಿಕೆಯು ಬೇರೆಯವರ ಮೂಲಕ ಬರಬಹುದಾಗಿದೆ. ನಮ್ಮನ್ನು ಟೀಕಿಸುವ ಮೂಲಕ ನಮಗೆ ನೋವುಂಟು ಮಾಡುವವರೊಂದಿಗೆ ನಾವು ಹೇಗೆ ಹೊಂದಿಕೊಂಡು ಹೋಗುವೆವು? ಜೀವನದಲ್ಲಿ ನಮ್ಮ ಗುರಿಯು ನಾವು ಬಯಸುವಂತಹ ರೀತಿಯಲ್ಲಿ ಬೇರೆಯವರು ಪ್ರತಿಕ್ರಿಯಿಸುವಂತೆ ಮಾಡುವದಲ್ಲ, ಆದರೆ ದೇವರು ಇಷ್ಟ ಬಯಸುವ ರೀತಿಯಲ್ಲಿ ಪ್ರತಿಕ್ರಿಯಿಸುವದೇ ಆಗಿದೆ. ದೇವರು ನಮ್ಮ ನೋವುಗಳನ್ನು ಗುಣಪಡಿಸಬಲ್ಲನು ಮತ್ತು ನಾವು ಬೇರೆಯವರಿಗೆ ಉಂಟು ಮಾಡಿರುವ ನೋವುಗಳಿಗಾಗಿ ನಮ್ಮನ್ನು ಕ್ಷಮಿಸಬಲ್ಲನು. ನಾವು ಕ್ರಿಸ್ತನು "ಸಹಿಸಿಕೊಂಡ" ಪ್ರಕಾರವೇ ಸಹಿಸಿಕೊಳ್ಳತಕ್ಕದ್ದು (12:3).

## ಶಿಕ್ಷಿಸಲ್ಪಡುವದರ ಪ್ರಯೋಜನಗಳು (12:7-11)

ಶಿಕ್ಷಿಸುವದಕ್ಕೆ ಮೂರು ಉದ್ದೇಶಗಳಿರುತ್ತವೆ: ಅದು ನಮ್ಮ ತಪ್ಪುಗಳನ್ನ ತಿದ್ದಿ ಸರಿಪಡಿಸುತ್ತದೆ, ನಮ್ಮ ನಂಬಿಕೆಯನ್ನು ಬಲಗೊಳಿಸುತ್ತದೆ, ಮತ್ತು ನಮ್ಮ ನಿತ್ಯವಾದ ಹಿತಾಸಕ್ತಿಯನ್ನು ವೃದ್ಧಿಗೊಳಿಸುತ್ತದೆ.[58] ನಾವು ಈ ಜೀವನದಲ್ಲಿ ಯಶಸ್ವಿ ಮತ್ತು

ಸಂತೃಪ್ತಿಯುಳ್ಳವರಾಗಿರುವದಕ್ಕೆ ಏನೂ ಅಗತ್ಯವಿರುವದಿಲ್ಲ (ಮತ್ತಾಯ 6:25-34). ನಾವು ಶಿಕ್ಷಿಸಲ್ಪಡುವಂತೆ ಪ್ರಾರ್ಥಿಸತಕ್ಕದ್ದು, ಆದರೆ ನಾವು ಹಾಗೆ ಮಾಡುವದು ವಿರಳವಾಗಿರುತ್ತದೆ. ಬಹುಶಃ ಅದೇ ಕಾರಣಕ್ಕಾಗಿಯೇ ಪೌಲನು ಹೀಗೆ ಹೇಳಿದನು, "ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲ" (ರೋಮಾ 8:26). ಆತ್ಮೀಕವಾಗಿ ಹೆಚ್ಚು ಬಲಿಷ್ಠರಾಗಿರಬೇಕಾದರೆ, ನಾವು ನಮಗೆ ಬೆಳೆಯುವದಕ್ಕೆ ಸಹಾಯ ಮಾಡುವಂತಹ ಸಂಗತಿಗಳಿಗೋಸ್ಕರ ಪ್ರಾರ್ಥಿಸುವದನ್ನು ಕಲಿತುಕೊಳ್ಳಬೇಕು, ಅವಶ್ಯಕವಾಗಿ ನಾವು ಅವುಗಳನ್ನು ಇಷ್ಟೊಡದಿದ್ದಾಗ್ಯೂ ಅವುಗಳಿಗೋಸ್ಕರ ಬೇಡಿಕೊಳ್ಳಬೇಕು. ದೇವರ ಶಿಕ್ಷಿಸುವಿಕೆಗೆ ನಾವು ಕಿವಿಗೊಡದಿದ್ದರೆ, ಆತನು ನಮ್ಮನ್ನು ಪದೇ ಪದೇ ಶಿಕ್ಷಿಸಬಹುದು.

ಬಾಧೆಯನ್ನನುಭವಿಸುವಿಕೆ ದೇವರ ಕೋಪದ ಒಂದು ಸಂಕೇತವಲ್ಲ ಎಂದು ಹೇಳುವದರಲ್ಲಿ ಕ್ರೈಸ್ತತ್ವವು ಲೋಕದ ಧರ್ಮಗಳೊಳಗೆ ವಸ್ತುತಃ ವಿಶಿಷ್ಠವಾದದ್ದು. ಬಹುಪಾಲು ಧರ್ಮಗಳು ದೇವರುಗಳನ್ನು ಮೆಚ್ಚಿಸುವವನು ಕಷ್ಟಗಳನ್ನು ಅನುಭವಿಸುವದಿಲ್ಲ ಎಂದು ಕಲಿಸುತ್ತವೆ. ಅದಕ್ಕೆ ತದ್ವಿರುದ್ಧವಾಗಿ, ಹಳೆಯ ಮತ್ತು ಹೊಸ ಎರಡೂ ಒಡಂಬಡಿಕೆಗಳು ಬಾಧೆಯು ಪವಿತ್ರ ಮಾಡುತ್ತದೆ ಮತ್ತು ಶುದ್ಧೀಕರಿಸುತ್ತದೆಂಬುದಾಗಿ ಕಲಿಸುತ್ತವೆ. 11ನೇ ವಚನವು ಈ "ಶಿಕ್ಷಿಸು"ವಿಕೆಯನ್ನು ಸೂಚಿಸುತ್ತದೆ. ಬಾಧೆಯನ್ನು ಅನುಭವಿಸುವಿಕೆಯು ದೇವರಿಂದ ಬರು ಶಿಕ್ಷಿಸುವಿಕೆ ಎಂದು ನಾವು ಹೇಗೆ ಖಚಿತವಾಗಿ ತಿಳುಕೊಳ್ಳಬಲ್ಲೆವು? ನಮಗೆ ಸಾಧ್ಯವಿಲ್ಲ, ಯಾಕೆಂದರೆ ಇಂದು ವೈಯಕ್ತಿಕವಾಗಿ ಪ್ರಕಟನೆಗಳು ಕೊಡಲ್ಪಡುವದಿಲ್ಲ. ಸಮಸ್ಯೆಗಳು ಒಂದು ಶಿಸ್ತುಗೊಳಿಸುವಿಕೆಯಾಗಿ ಪ್ರಯೋಜನ ಹೊಂದಿವೆ ಎಂಬುದನ್ನು ಅಂಗೀಕರಿಸಿಕೊಳ್ಳಬಹುದಷ್ಟೇ. ಕೆಲ ಕಾಲದ ಬಳಿಕ ನಾವು ಮರಳಿ ನೋಡಬಹುದು ಮತ್ತು ಕಷ್ಟಗಳು ಹೇಗೆ ನಮ್ಮ ಹಿತಕ್ಕಾಗಿ ಅನುಕೂಲವಾದವೆಂಬುದನ್ನು ಅರ್ಥಮಾಡಿಕೊಳ್ಳಬಹುದು. ಖಂಡಿತವಾಗಿಯೂ, ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ದೇವರು ನಮ್ಮ ಸಂಗಡ ಇದ್ದಾನೆಂಬ ನಿಶ್ಚಯತ್ವವನ್ನು ಹೊಂದಿರಬಲ್ಲೆವು.

## ತಪ್ಪಾದ ಶಿಕ್ಷಿಸುವಿಕೆ (12:9-11)

"ಬೆತ್ತವನ್ನು ಬಳಸದೆ, ಮಗುವನ್ನು ಹಾಳು ಮಾಡು" ಎಂಬುದು ಬೈಬಲ್ ಹೇಳಿಕೆಯಲ್ಲ, ಆದರೆ ಅದರ ಪರೋಕ್ಷ ಸೂಚನೆಯು ಇರುತ್ತದೆ: "ಹುಡುಗನಿಗೆ ಶಿಕ್ಷೆಗೆ ಹಿಂತೆಗೆಯಬೇಡ; ಬೆತ್ತ ಏಟಿಗೆ ಸಾಯನು. ಬೆತ್ತದಿಂದ ಹೊಡೆ; ಅವನ ಆತ್ಮವನ್ನು ಪಾತಾಳಕ್ಕೆ ಬೀಳದಂತೆ ಕಾಪಾಡು" (ಜ್ಞಾನೋಕ್ತಿ 23:13, 14). ಒಬ್ಬ ಹಗೆತನವುಳ್ಳ ತಂದೆ ಅಥವಾ ತಾಯಿಯು ವಿಪರೀತ ದೂರಕ್ಕೆ ಹೋಗಬಹುದು, ಮತ್ತು ಬೈಬಲ್ ಅದನ್ನು ಖಂಡಿಸುತ್ತದೆ (ಜ್ಞಾನೋಕ್ತಿ 19:18). ಒಬ್ಬ ಪ್ರೀತಿಯುಳ್ಳ ತಂದೆ ಅಥವಾ ತಾಯಿಯು ಪರಿಣಾಮಕಾರಿಯಾಗಿ ಹೇಗೆ ಪ್ರೋತ್ಸಾಹಿಸಬೇಕು ಮತ್ತು ದಂಡಿಸಬೇಕೆಂಬುದನ್ನು ಬಲ್ಲವನಾಗಿರುತ್ತಾನೆ. ಸಮರ್ಪಕವಾಗಿ ಶಿಕ್ಷಿಸುವ ತಂದೆ/ತಾಯಿಯ ಸಾಕಷ್ಟು ಪ್ರಶಂಸೆಯನ್ನು ಸಹ ಕೊಡುವವನಾಗಿರುತ್ತಾರೆ. ಶಿಕ್ಷೆಯ ಕೊರತೆಯು ನಿಶ್ಚಯವಾಗಿಯೂ ನಮ್ಮ ಲೋಕದಲ್ಲಿ ಇಂದಿರುವ ಅಪರಾಧ ಹಾಗೂ ಕರ್ತವ್ಯಭ್ರಷ್ಟತೆಯಲ್ಲಿ ಪ್ರಮುಖ ಕಾರಣಾಂಶವಾಗಿರುತ್ತದೆ.

## "ಶಿಕ್ಷಿಸುವಿಕೆ ಆದರೆ ನಾಶನಕ್ಕೆ ಗುರಿಪಡಿಸುವಿಕೆ ಅಲ್ಲ" (12:9-11)

ಕ್ಯಾಲ್ವಿನ್‌ವಾದದ ಸಿದ್ಧಾಂತದಲ್ಲಿ ನಂಬಿಕೆಯುಳ್ಳವರು ಹೀಗೆ ಹೇಳುತ್ತಾರೆ, "ದೇವರು ತನ್ನ ಮಕ್ಕಳನ್ನು ಶಿಕ್ಷಿಸುವನು ಆದರೆ ಅವರನ್ನು ನಾಶನಕ್ಕೆ ಗುರಿಪಡಿಸುವದಿಲ್ಲ, ಯಾಕೆಂದರೆ ಆತನು ಹಾಗೆ ಮಾಡುವದಕ್ಕೆ ಸಾಧ್ಯವಿಲ್ಲ." ಕೇವಲ ದೇವರ ಪ್ರೀತಿ ಹಾಗೂ ಕರುಣೆಗಳ ಮೇಲೆಯೇ

ಮುಖ್ಯ ಗಮನವನ್ನು ಕೊಡುವವನು (ರೋಮಾ 8:33ರಲ್ಲಿರುವಂತೆ) ಶಿಕ್ಷಿಸಲ್ಪಡುವಿಕೆಯು ಮುಂದೆ "ಕಡಿದು ಹಾಕಲ್ಪಡುವನು" (ರೋಮಾ 11:22) ಎಂಬುದನ್ನು ನಿರ್ಲಕ್ಷಿಸುವವರಾಗುತ್ತಾರೆ. "ಕೃಪೆಯು ಎಲ್ಲವನ್ನೂ ಗೆದ್ದುಕೊಳ್ಳುತ್ತದೆ" ಎಂದು ಹೇಳುವದು ಇಬ್ರಿಯರಿಗೆ ಪತ್ರಿಕೆಯ ವಾಕ್ಯವನ್ನು ವಿಕೃತಗೊಳಿಸಿದಂತೆ ಮತ್ತು 6:4-6 ಮತ್ತು 10:26-29ರಲ್ಲಿರುವ ಅದರ ಬೋಧನೆಯನ್ನು ಉಲ್ಲಂಘನೆ ಮಾಡುವಂತೆ ಆಗುತ್ತದೆ.

ದಾವೀದನು ಮರಣ ಹೊಂದುವವನಾಗಬಾರದೆಂದು ಆತನ ಪಾಪವನ್ನು ಕ್ಷಮಿಸಲಾಯಿತು, ಆದರೆ ಆತನ ಪಾಪದ ಫಲಿತವಾಗಿ ಬಂದಂತಹ ವಿನಾಶತೆಗಳನ್ನಂತೂ ಆಗಲೂ ಅನುಭವಿಸಿದನು (2 ಸಮುವೇಲ 12:11-15; ಗಲಾತ್ಯ 6:7). ಆತನ ಕೂಸು ಸತ್ತಿತು, ಅಮ್ನೋನನು ತಾಮರಳನ್ನು ಕೇಡಿಸಿದನು, ಅಬ್ಷಾಲೋಮನು ಅಮ್ನೋನನನ್ನು ಕೊಂದನು, ಅಬ್ಷಾಲೋಮನು ದಾವೀದನನ್ನು ಸಿಂಹಾಸನದಿಂದ ಓಡಿಸಿದನು, ಮತ್ತು ಅಬ್ಷಾಲೋಮನು ಕೊಲ್ಲಲ್ಪಟ್ಟನು.

ಬಹಳಷ್ಟು ನಂಬಿಗಸ್ತರಾದ ದೇವಜನರು ಒಂದು ದೊಡ್ಡ ಪ್ರಮಾಣದಲ್ಲಿ ಕಷ್ಟವನ್ನು ಅನುಭವಿಸುವಂತೆ ತೋರುತ್ತದೆ, ಮತ್ತು ಕೆಲವರು ಬಾಧೆಯು ಅವರನ್ನು ಪೂರ್ಣ ಅಧೀನಕ್ಕೊಳಪಡಿಸುವಂತೆ ಮಾಡಿದ್ದರ ಕಾರಣದಿಂದಾಗಿ ದೀನತೆಯುಳ್ಳವರಾಗಿರಬಹುದು. ನೀವು ಬಾಧೆ ಅನುಭವಿಸಬೇಕಾದ ಸಮಯವು ಬರುತ್ತಿರಬಹುದಾಗಿದೆ. ಸೂರ್ಯನು ಯಾವಾಗಲೂ ನೀತಿಯ ಮೇಲೆ ಪ್ರಕಾಶಿಸುವದಿಲ್ಲ; ಈ ಜೀವನದಲ್ಲಿ ನಿರಪರಾಧಿಗಳು ಮತ್ತು ಅಪರಾಧಿಗಳು ಇಬ್ಬರೂ ಬಾಧೆಯನ್ನನುಭವಿಸುವರು. ಶೀಘ್ರವಾಗಿಯಾಗಲಿ ಅಥವಾ ತಡವಾಗಿಯಾಗಲಿ, ಈ ಶಾಸ್ತ್ರಗಳು ಪ್ರತಿಯೊಬ್ಬ ವ್ಯಕ್ತಿಗೂ ಅನ್ವಯವಾಗುವವು. ದೇವರಿಗೆ ಪಾಪವಿಲ್ಲದ ಒಬ್ಬನೇ ಮಗನಿದ್ದನು, ಆದರೆ ಬಾಧೆಯನ್ನನುಭವಿಸದೆ ಇರುವ ಯಾವ ಮಗನೂ ದೇವರಿಗೆ ಇರುವದಿಲ್ಲ.

### ಸಂತೋಷ ಮತ್ತು ಕ್ರೈಸ್ತತ್ವ (12:11)

ಕೆಲವು ಧಾರ್ಮಿಕ ಗುಂಪುಗಳವರು ಕರ್ತನಲ್ಲಿ ತಾವು ಎಷ್ಟೊಂದು ಸಂತೋಷವಾಗಿದ್ದಾರೆಂಬ ಬಗ್ಗೆ ಮಾತಾಡುತ್ತಾರೆ. ಅವರು ಜೀವನವನ್ನು ಆನಂದಕರವಾದದ್ದು ಮತ್ತು ಚಿಂತೆಯಿಲ್ಲದ್ದು ಎಂಬುದಾಗಿ ಬಿಂಬಿಸುತ್ತಾರೆ. ಖಂಡಿತವಾಗಿಯೂ, ನಾವು "ಧನ್ಯರು" (ಮತ್ತಾಯ 5:3-11) ಆಗಿರಬೇಕೆಂದು ನಮ್ಮ ಕರ್ತನು ಬಯಸುತ್ತಾನೆ, ಕೆಲವರು ಅದನ್ನು "ಸಂತೋಷ" ಎಂದು ವ್ಯಾಖ್ಯಾನಿಸುತ್ತಾರೆ, ಆದರೆ ಇದು ಅದರ ಅರ್ಥವನ್ನು ಒಂದು ರೀತಿಯಲ್ಲಿ ಹಿಗ್ಗಿಸುವಂತೆ ತೋರುತ್ತದೆ. ಒಬ್ಬನು ಭಾರಗಳು, ದುಃಖ, ಅಥವಾ ಜೀವನದಲ್ಲಿ ಶಿಕ್ಷೆಯಿರುವ ಯಾವ ಸೂಚನೆಗಳನ್ನು ತೋರ್ಪಡಿಸಿದರೆ ಯಾವಾಗಲೂ ನಗುವನ್ನು ಹೊಂದಿರಬೇಕು ಎಂದು ಯೋಚಿಸುವಂತದ್ದು ಒಂದು ಆಳವಿಲ್ಲದ ಮತ್ತು ಸುಳ್ಳು ಧರ್ಮವಾಗಿದೆ. ಅಂಥ ಯೋಚನೆಯ ಪ್ರಭಾವಕ್ಕೆ ಒಳಗಾಗಿ, ಕೆಲವು ಸಭೆಗಳು ಸಭಿಕರನ್ನು ಸಂತೋಷದಿಂದ ಇರಿಸುವದಕ್ಕಾಗಿ ಮತ್ತು ಹೆಚ್ಚು ಸದಸ್ಯರನ್ನು ಆಕರ್ಷಿಸುವದಕ್ಕಾಗಿ "ನಾವು ಯಾವಾಗಲೂ ಒಂದು ಕೊಂಡಾಟವನ್ನು ಹೊಂದಿದ್ದೇವೆ" ಎಂಬ ಧ್ಯೇಯವಾಕ್ಯವನ್ನು ಅಳವಡಿಸಿಕೊಂಡಿರುತ್ತಾರೆ. ಜನರು ಸಂತೋಷವಾಗಿ ಇಲ್ಲದಿರುವಾಗ ಸಂತೋಷವಾಗಿರುವಂತೆ ನಟಿಸುವ ಮೂಲಕ ತಮ್ಮನ್ನು ತಾವೇ ವಂಚಿಸಿಕೊಳ್ಳಬಲ್ಲರು.

ನಮ್ಮ ಆತ್ಮದ ಬಡತನವನ್ನು ಒಪ್ಪಿಕೊಂಡು ಅದರ ಬಗ್ಗೆ ದುಃಖಪಟ್ಟ ಬಳಿಕ ನಿಜವಾದ ಧನ್ಯತೆಯು ಬರುವದಾಗಿದೆ (ಮತ್ತಾಯ 5:3, 4). ನಮ್ಮ ಶಿಲುಬೆಯನ್ನು ಹೊತ್ತುಕೊಳ್ಳುವದಕ್ಕೆ

ಕಲಿತ ಬಳಿಕ ಅದು ಬರುತ್ತದೆ (ಮತ್ತಾಯ 16:24). ಈಗ ನಾವು ದುಃಖಪಡಬೇಕಾಗಿರುತ್ತದೆ: "ಈಗ ನಗುವವರೇ, ನಿಮ್ಮ ಗತಿಯನ್ನು ಏನು ಹೇಳಲಿ! ನೀವು ದುಃಖಪಟ್ಟು ಅಳುವಿರಿ" (ಲೂಕ 6:25). ನಾವು ದೇವರ ಅನುಮತಿಯೊಂದಿಗೆ ಪಡೆದುಕೊಳ್ಳುವಂತಹ ಶಿಕ್ಷಿಸುವಿಕೆಯೆಲ್ಲಾ ಇರುವಾಗ, ಕೆಲವು ಸಂದರ್ಭಗಳಲ್ಲಿ ಸಂತೋಷ ಪಡುವದಕ್ಕಾಗಿ ಏನೂ ಇಲ್ಲದಿರಬಹುದು. ಖಂಡಿತವಾಗಿಯೂ, ಸುಳ್ಳಾಗಿ ಶೋಕವಿರುವವರಂತೆ ತೋರ್ಪಡಿಸಿಕೊಳ್ಳುವಿಕೆ ಸಹ ಸಂಭವಿಸುತ್ತದೆ. ಕೆಲವರು ದುಃಖವಿರುವಂತೆ ತೋರಿಸಿಕೊಳ್ಳುವ ಮೂಲಕ ಹೆಚ್ಚು ಭಕ್ತಿಯುಳ್ಳವರೆಂದು ಯೋಚಿಸುತ್ತಾರೆ, ಆದರೆ ಅದು ಸಹ ನಿಜವಾದ ಕ್ರೈಸ್ತತ್ವ ಆಗಿರುವದಿಲ್ಲ.

". . . ಶಿಕ್ಷೆಯು . . . ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ"ಯಾದ ಕಾರಣ (ಇಬ್ರಿಯ 12:11), ನಾವು ಸಂತೋಷವಿರುವವರಂತೆ ಕಾಣಿಸಿಕೊಳ್ಳಬೇಕೆಂದು ಭಾವಿಸುತ್ತೇವೆ. ನಾವು ಪರಿಪೂರ್ಣವಾಗಿ ನೀತಿವಂತರಾಗಿರುವದಕ್ಕೆ ಶಕ್ತರಾಗಿದ್ದರೆ, ಇದನ್ನು ದೇವರು ನಮ್ಮಿಂದ ಅಪೇಕ್ಷೆ ಪಟ್ಟಿರುತ್ತಿದ್ದನು, ಆದರೆ ತತ್ಕಾಲಿಕವಾದ ಬಾಧೆಯನ್ನನುಭವಿಸುವ ಮೂಲಕ ಅತ್ಯಂಥ ದೊಡ್ಡದಾದ ಆತ್ಮೀಕ ಪ್ರಯೋಜನವು ಬರುತ್ತದೆಂಬುದನ್ನು ಆತನು ಬಲ್ಲವನಾಗಿದ್ದಾನೆ.

ನಮ್ಮ ಬಾಧೆಯು ದೇವರಿಂದ ಪ್ರಯೋಜನಗಳನ್ನು ತರುತ್ತದೆಂಬುದನ್ನು ಒಪ್ಪಿಕೊಳ್ಳುವ ಮೂಲಕವಾಗಿ ಮತ್ತು ನಮ್ಮ ನಿತ್ಯವಾದ ಸಂತೋಷಕ್ಕೆ ಹೋಲಿಸಿದರೆ ಇದು ತತ್ಕಾಲಿಕವೆಂಬುದನನ್ನು ತಿಳಿದುಕೊಳ್ಳುವ ಮೂಲಕವಾಗಿ ಅತ್ಯಂತ ಉನ್ನತವಾದ ಸಂತೋಷವು ಬರುತ್ತದೆ (2 ಕೊರಿಂಥ 4:16, 17). ಮೊದಲನೆಯದಾಗಿ, ನಮ್ಮ ಜೀವಿತಗಳನ್ನು ಮತ್ತು ನಮ್ಮ ಸುತ್ತಲಿನ ಜಗತ್ತನ್ನು ಒಳವ್ಯಾಪಿಸುವಂತಹ "ಸಂಪೂರ್ಣ ಪಾಪಮಯ" ("ಅತ್ಯಂಥ ಪಾಪಮಯ"; ASV) ಕೃತ್ಯಗಳ ಮೇಲೆ ನೆಲೆಸತಕ್ಕದ್ದು (ರೋಮಾ 7:13). ಈ ಹೆಜ್ಜೆಯನ್ನು ತೆಗೆದುಕೊಳ್ಳುವ ಹೊರತು, ಸಂತೋಷಕರವಾದ ರಕ್ಷಣೆಯ ಕಡೆಗೆ ಹೆಚ್ಚಿನ ಪ್ರಗತಿಯನ್ನು ನಾವು ಹೊಂದಲಾರೆವು. ಯೇಸು ಧನ್ಯನುಡಿಗಳಲ್ಲಿ ಬೇರೆ ಯಾವದಕ್ಕಿಂತಲೂ ಮುಂದಾಗಿ "ದುಃಖಪಡುವದನ್ನು" ಇಟ್ಟನು ಎಂಬುದರಲ್ಲಿ ಆಶ್ಚರ್ಯವೇನಿಲ್ಲ (ಮತ್ತಾಯ 5:4).

ಕಷ್ಟಗಳು ಹಾಗೂ ನಷ್ಟಗಳ ವಿಷಯದಲ್ಲಿ ದುಃಖಪಡುವದನ್ನು ನಾವು ಒಂದು ದುರ್ಬಲತೆ ಎಂದು ಎಣಿಸಬಾರದು. ನಮ್ಮ ದುಃಖಿಸುತ್ತೇವೆ, ಆದರೆ "ನಿರೀಕ್ಷೆಯಿಲ್ಲದಿರುವ ಇತರರಂತೆ" ಅಲ್ಲ (1 ಥೆಸಲೋನಿಕ 4:13). ಹೆಚ್ಚು ದೀನತೆಯುಳ್ಳ ಮಕ್ಕಳಾಗಿ ಬೆಳೆಯುವದಕ್ಕಾಗಿ ಶಿಕ್ಷೆಯನ್ನನುಭವಿಸುವದರ ನೋವನ್ನು ತಿಳಿಯುವದು ಒಂದು ಬಲಹೀನತೆಯಾಗಿರುವದಿಲ್ಲ. ಅದನ್ನು ಅನುಭವಿಸುವವರಿಗೆ ಸಂತೋಷವು ಹಿಂದೆ ಬರುತ್ತದೆ ಮತ್ತು ಅದರ ಫಲವನ್ನು ಕೊಯ್ಯುವಂತೆ ಸಜ್ಜುಗೊಳಿಸಲ್ಪಡುತ್ತಾರೆ.

ಸಮಸ್ಯೆಯು ಏನೆಂದರೆ ಸಂಗತಿಗಳು ಹೇಗೆ ಕಾಣಿಸುವ ಅದೇ ರೀತಿಯಲ್ಲಿಯೇ ಯಾವಾಗಲೂ ಇರುವದಿಲ್ಲ. ನಮ್ಮ ಈಗಿನ ಬಾಧೆಯು ಒಂದು ಉಲ್ಲಾಸ ಮತ್ತು ಸಂಭ್ರಮ ಜೀವನವಾಗಿ ಮಾರ್ಪಡುತ್ತದೆಂದು ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಲಿಲ್ಲ, ಆದರೆ ಅದು "ಸಮಾಧಾನದ ಫಲ"ವನ್ನು ಉಂಟು ಮಾಡುತ್ತದೆಂದು ಹೇಳಿದನು (12:11). ಪರೀಕ್ಷೆ ಮತ್ತು ಪರಿಶೋಧನೆಗೊಳಗಾದ ನಮ್ಮ ನಂಬಿಕೆಯಿಂದ ಒಂದು ಸಮಾಧಾನದ ಶಾಂತ ನಿಶ್ಚಯತ್ವವು ಬರುವದು. ಅದು ಎಂಥ ಒಂದು ರಸಭರಿತ ಫಲವಾಗಿರುತ್ತದೆ! ನಂತರ, ನಂಬಿಕೆಯ ಮೂಲಕ, ಆ ಸಮಾಧಾನದಲ್ಲಿ ನಮ್ಮ ಸಮಸ್ಯೆಗಳು ಹಸ್ತಕ್ಷೇಪ ಮಾಡದಂತೆ ತಡೆಯುವೆವು.

## ಈ ಲೋಕದಲ್ಲಿ ಮೂರು ಸಂಬಂಧಗಳು (12:14-17)

ನಮ್ಮ ವಾಕ್ಯಭಾಗವು ಕ್ರೈಸ್ತನು ಅನುಸರಿಸಬೇಕಾದ (ಬೆನ್ನತ್ತಬೇಕಾದ) ಮೂರು ಅಮೂಲ್ಯವಾದ ಸಂಬಂಧಗಳ ಕುರಿತು ಹೇಳುತ್ತದೆ. ಮೊದಲನೆಯದಾಗಿ, ನಾವು *ದೇವರ ಸಂಗಡ "ಪರಿಶುದ್ಧಗೊಂಡ"* ಸಂಬಂಧವನ್ನು ಹೊಂದಬಹುದು (ವ. 14). ದೇವರೊಬ್ಬನೇ ಪರಿಪೂರ್ಣವಾಗಿ ಪರಿಶುದ್ಧನು, ಆದ್ದರಿಂದ ಆತನೊಂದಿಗಿನ ಸಂಬಂಧಕ್ಕೆ ಇದು ಜೀವಾಳವಾಗಿರತಕ್ಕದ್ದು. "ಶುದ್ಧೀಕರಣ"ವು "ಪರಿಶುದ್ಧತೆ" ಎಂಬ ಭಾವನೆಯಂತೆಯೇ ಆಗಿರುತ್ತದೆ, ಅದರರ್ಥವು "ವ್ಯತ್ಯಾಸವಾಗಿ," "ಪ್ರತ್ಯೇಕವಾಗಿ," ಅಥವಾ "ಸಂಪೂರ್ಣವಾಗಿ" ಸಹ ಇರಬೇಕು ಎಂದಾಗಿರುತ್ತದೆ. "ಪರಿಶುದ್ಧನಾಗಿರುವ ಪ್ರಕಾರವೇ ನೀವೂ . . . ಪರಿಶುದ್ಧರಾಗಿರಿ" (1 ಪೇತ್ರ 1:14, 15)[59] ಬೈಬಲಿನಲ್ಲಿಯೇ ಅತ್ಯಂಥ ಕಠಿಣವಾದ ಆಜ್ಞೆಯಾಗಿರುತ್ತದೆ. ನಾವು ಹೇಗೆ ಪರಿಶುದ್ಧರಾಗುತ್ತೇವೆ? ನಮ್ಮ ಜೀವಿತಗಳನ್ನು ಸಂಪೂರ್ಣವಾಗಿ ದೇವರಿಗೆ ಒಳಪಡಿಸಿಕೊಳ್ಳುವ ಮೂಲಕವೇ.

ಎರಡನೆಯದಾಗಿ, ನಾವು *ಬೇರೆಯವರ ಸಂಗಡ ಸಮಾಧಾನದಿಂದಿರುವದಕ್ಕೆ ಪ್ರಯತ್ನ ಮಾಡಬೇಕು* (ವ. 14). ಕ್ರಿಸ್ತನ ಹೊರಗಿರುವವರ ಸಂಗಡದ ನಮ್ಮ ಸಂಬಂಧವು ಅವರನ್ನು ಆತನ ಬಳಿಗೆ ಬರುವಂತೆ ಪ್ರಭಾವಿತಗೊಳಿಸಬಹುದಾಗಿದೆ (ನೋಡಿರಿ ರೋಮಾ 12:18). ಒಂದು ಜಗಳವನ್ನು ಮಾಡಬೇಕಾದರೆ ಇಬ್ಬರ ಅಗತ್ಯವಿರುತ್ತದೆ; ಆದರೆ ನಾವು ಸಮಾಧಾನ ಮಾಡಿಕೊಳ್ಳಲು ಕೆಲಸ ಮಾಡುವಾಗ, ನಾವು ಕ್ಷುಲ್ಲಕ ವಾಗ್ವಾದಗಳಲ್ಲಿ ತೊಡಗಿಸಿಕೊಳ್ಳುವದಿಲ್ಲ. ಪ್ರತಿಯೊಂದು ಹಿರಿಯ ನಾಯಕತ್ವಲ್ಲಿಯೂ ಸಮಾಧಾನದ ಬಗ್ಗೆ ಬಹುವಾಗಿ ಕಳಕಳಿಯಿರುವಂಥ ಕನಿಷ್ಠ ಒಬ್ಬನನ್ನಾದರೂ ತಮ್ಮೊಳಗೆ ಹೊಂದಿರುವ ಅಗತ್ಯವಿರುತ್ತದೆ. ಖಂಡಿತವಾಗಿಯೂ, ಪ್ರತಿಯೊಬ್ಬ ಹಿರಿಯನು – ಮತ್ತು ಪ್ರತಿಯೊಬ್ಬ ಕ್ರೈಸ್ತನು – ರಾಜಿ ಮಾಡಿಕೊಳ್ಳದೆಯೇ ದೇವರ ಸತ್ಯಕ್ಕೋಸ್ಕರ ನಿಲ್ಲಬೇಕು; ಆದರೆ ಒಬ್ಬನು ಸತ್ಯವನ್ನು ಪ್ರೀತಿಸುವವನಾಗಿ ಅದೇ ವೇಳೆಯಲ್ಲಿ ದಾರಿ ತಪ್ಪಿರುವವರ ಕಡೆಗೆ ಬಹಳವಾದ ಕಳಕಳಿಯನ್ನು ಹೊಂದಿರುವದಕ್ಕೆ ಸಾಧ್ಯವಿದೆ.

ಮೂರನೆಯದಾಗಿ, ಒಬ್ಬನೂ "ದೇವರ ಕೃಪೆಗೆ ತಪ್ಪಿ ಹಿಂಜರಿಯದಂತೆ ನೋಡಿಕೊಳ್ಳು[ವ]" ಮೂಲಕ *ನಮ್ಮ ಜೊತೆಯ ಕ್ರೈಸ್ತರಿಗೆ ಸಹಾಯವನ್ನು ಒದಗಿಸಬೇಕು* (ವ. 15). ನಾವು ಬೇರೆ ಕ್ರೈಸ್ತರ ಭಾರವನ್ನು ಹೊತ್ತುಕೊಳ್ಳುವದಕ್ಕೆ ಸಹಾಯ ಮಾಡತಕ್ಕದ್ದು (ಗಲಾತ್ಯ 6:2). ದೇವರ ಜನರಾಗಿ ನಮ್ಮ ಯಶಸ್ಸು ಈ ಮೂರು ಸಂಬಂಧಗಳ ಮೇಲೆ ಅವಲಂಭಿತವಾಗಿರುತ್ತದೆ.

## ಏಸಾವನು, ಒಬ್ಬ ಜಾರನು ಮತ್ತು ಪ್ರಾಪಂಚಿಕ ಮನುಷ್ಯನು (12:15-17)

ಏಸಾವನು ಭಕ್ತಿಹೀನನಾಗಿದ್ದನು ಯಾಕೆಂದರೆ ಒಂದು ತಾತ್ಕಾಲಿಕವಾ ಶಾರೀರಿಕ ತೃಪ್ತಿಗೋಸ್ಕರ ಆತ್ಮೀಕ ಹಿತಾಸಕ್ತಿಗಳನ್ನು ಕೈ ಬಿಟ್ಟು ಬಿಟ್ಟನು. ಇಬ್ರಿಯ ಕ್ರೈಸ್ತರು ಹಿಂಸೆಯಲ್ಲಿರುವ ಅನಾನುಕೂಲತೆಯನ್ನು ಸಡಿಲಿಸಿಕೊಳ್ಳುವದಕ್ಕೋಸ್ಕರ ದೇವರ ವಾಗ್ದಾನವನ್ನು ಬಿಟ್ಟು ಬಿಡುವ ತುದಿಯಂಚಿನಲ್ಲಿದ್ದಿರುವ ಸಾಧ್ಯತೆಯಿರುತ್ತದೆ.

ಸ್ಪಷ್ಟವಾಗಿ ತೋರುವ ಪ್ರಕಾರ, ಏಸಾವನು ಜಾರನು (ಒಬ್ಬ "ಹಾದರ ಮಾಡುವವನು"; NKJV) ಸಹ ಆಗಿದ್ದನು. ಆತನ ಕಾಮಾಭಿಲಾಷೆಯು ಆತನನ್ನು ನಿರಂತರವಾದ ಅದೋಗತಿಯ ದಾರಿಯಲ್ಲಿ ನಡೆಸಿತು. "ನೀವು ವ್ಯಭಿಚಾರ ಮಾಡಬಾರದು" (ವಿಮೋಚನಕಾಂಡ 20:14) ಎಂಬ ದೇವರ ಆಜ್ಞೆಯು ಮೋಶೆಯು ಸಿನಾಯ್ ಪರ್ವತವನ್ನು ಹತ್ತಿ ಹೋಗುವದಕ್ಕೆ ಮುಂಚಿನ ಬಹಳ ಕಾಲದಿಂದಲೂ ಜಾರಿಯಲ್ಲಿತ್ತು. "ಹಾದರ" ದ ಪಾಪವನ್ನು ಯಾವದೂ ನ್ಯಾಯವೆಂದು ಸಮರ್ಥಿಸಲು ಸಾಧ್ಯವಿಲ್ಲ, ಅದರರ್ಥವು ಯಾವದೇ ರೀತಿಯ ಅಸಮರ್ಪಕವಾದ ಲೈಂಗಿಕ

ಚಟುವಟಿಕೆ ಎಂದಾಗಿರುತ್ತದೆ. ಈ ಕೃತ್ಯವನ್ನು ಖಂಡಿಸುವ ಪದವು πορνεία (*porneia*) ಎಂದಾಗಿದ್ದು, ಅದು ಎಲ್ಲಾ ವಿಧವಾದ ಲೈಂಗಿಕ ಅಶುದ್ಧತೆಗಳನ್ನು ಒಳಗೊಂಡಿರುತ್ತದೆ: ಸೂಳೆಗಾರಿಕೆ, ರಕ್ತಸಂಬಂಧಿಗಳೊಂದಿಗೆ ಸಂಭೋಗ, ಮತ್ತು ಸಲಿಂಗಕಾಮದ ಚಟುವಟಿಕೆಗಳು, ಮಾತ್ರವಲ್ಲದೆ ವಿವಾಹ ಬಂಧದ ಹೊರಗೆ ವಿರುದ್ಧ ಲಿಂಗಗಳ ನಡುವಿನ ಲೈಂಗಿಕ ಸಂಬಂಧಗಳು ಸಹ ಸೇರಿರುತ್ತವೆ. ಕೆಲವು ಆವೃತ್ತಿಗಳು *porneia* ಎಂಬುದಕ್ಕೆ "ಲೈಂಗಿಕ ಅನೈತಿಕತೆ" ಅಥವಾ ಕೇವಲ "ಹಾದರ" ಎಂದಷ್ಟೆ ಅನುವಾದ ನೀಡುತ್ತವೆ. ಶಬ್ದಕೋಶಗಳು ಅದಕ್ಕೆ "ಕಾನೂನುಭಾಹಿರ ಲೈಂಗಿಕ ಸಂಭೋಗ" ಎಂದು ಅರ್ಥನಿರೂಪಣೆ ಮಾಡುತ್ತವೆ. ಅದು KJVಯಲ್ಲಿ ಇಪ್ಪತ್ತುಕ್ಕೂ ಹೆಚ್ಚು ಸಾರಿ "ಜಾರತ್ವ" ಎಂದು ಅನುವಾದಿಸಲ್ಪಟ್ಟಿದೆ. NASBವು ಮತ್ತಾಯ 5:32ರಲ್ಲಿ "ಶೀಲವಿಲ್ಲದಿರುವಿಕೆ" ಎಂದು ಮತ್ತು ಮತ್ತಾಯ 19:9ರಲ್ಲಿ "ಅನೈತಿಕತೆ" ಎಂದು ಹೊಂದಿರುತ್ತದೆ.

ಕೆಲವರು, "ಆದರೆ ಇಬ್ಬರೂ ಅದಕ್ಕೆ ಸಮ್ಮತಿಯನ್ನು ಸೂಚಿಸಿದ್ದರು" ಎಂದು ಹೇಳುವ ಮೂಲಕ ಅನೈತಿಕತೆಯನ್ನು ಸಮರ್ಥಿಸುತ್ತಾರೆ. ಒಬ್ಬ ಅಪ್ರಾಮಾಣಿಕನಾದ ಉದ್ಯೋಗಿಯು ಒಬ್ಬ ಗದಾಕೋರನಿಗೆ ಬ್ಯಾಂಕವೊಂದನ್ನು ದೋಚುವಂತೆ ಸಹಾಯ ಮಾಡುವದಾರೆ, ಅದನ್ನು ಸರಿ ಎಂದಾಗಿಸುವದಿಲ್ಲ. ಜಾರತ್ವವು ಸಂಭವಿಸುವಾಗ, ಇಬ್ಬರಲ್ಲಿ ಒಬ್ಬರಾದರೂ ಮೋಸಕ್ಕೊಳಗಾಗಿರುವದು ಯಾವಾಗಲೂ ನಡೆಯುತ್ತದೆ. ಪೌಲನು ಅದನ್ನು ವಾಸ್ತವಾಂಶವೆಂದು ಘೋಷಿಸಿದನು (1 ಥೆಸಲೋನಿಕ 4:3-8). ಇಬ್ಬರೊಳಗೆ ಯಾರೊಬ್ಬರೂ ಹಾನಿಗೊಳಗಾದ ಭಾವವನ್ನು ಅನುಭವಿಸಿದಿದ್ದಾಗ್ಯೂ, ದೇವರು ಒಂದು ನೀತಿಯುಳ್ಳ ಆತ್ಮದಿಂದ ವಂಚಿತನಾಗುತ್ತಿದ್ದಾನೆ. ಅಂಥ ಪಾಪವು ಒಬ್ಬ ವ್ಯಕ್ತಿಯನ್ನು ಉಳಿದ ಜೀವಿತ ಕಾಲವೆಲ್ಲಾ ಪ್ರತಿಬಂಧಗೊಳಿಸಬಹುದು ಮತ್ತು ರಾಜ್ಯದಲ್ಲಿ ಆತನು ಸಾಧಿಸಿಕೊಳ್ಳಬಹುದಾಗಿದ್ದ ಉನ್ನತವಾದ ಮಟ್ಟಕ್ಕೆ ಏರದಂತೆ ತಡೆಯಬಹುದಾಗಿದೆ. ಆತನು ದೇವರಿಂದ ಸಂಪೂರ್ಣವಾಗಿ ಕ್ಷಮಿಸಲ್ಪಡಬಹುದಾದರೂ, ಇದಂತೂ ಸತ್ಯವಾಗಿರುತ್ತದೆ, ದಾವೀದನ ಕಥನವು ತೋರಿಸಿ ಕೊಡುವ ಪ್ರಕಾರವೇ ಸಂಭವಿಸುವದು (ನೋಡಿರಿ 2 ಸಮುವೇಲ 12). ಯೋಸೇಫನು ಜಾರತ್ವವನ್ನು ಒಂದು ಪಾಪವೆಂದು ಗುರುತಿಸಿಕೊಂಡನು ಮತ್ತು ಪೋಟೀಫರನ ಹೆಂಡತಿಯ ಕಡೆಯಿಂದ ಓಡಿ ಹೋದನು (ಆದಿಕಾಂಡ 39:9). ಲೈಂಗಿಕ ಪಾಪವು ದೇವರಿಗೆ ವಿರುದ್ಧವಾದದ್ದು, ಒಬ್ಬನ ದೇಹಕ್ಕೆ ವಿರುದ್ಧವಾದದ್ದು (1 ಕೊರಿಂಥ 6:18), ಸಭೆಯ ವಿರುದ್ಧ, ಒಬ್ಬನ ದಾಂಪತ್ಯದ ವಿರುದ್ಧವಾದದ್ದು ಆಗಿದೆ, ಮತ್ತು ಅದು ಎಷ್ಟೊಂದು ವಿನಾಶಕರವೆಂದರೆ ದೇವರು ಕೆಲವು ಸಾರಿ ವಿಚ್ಛೇದನಕ್ಕೆ ಅವಕಾಶವನ್ನು ಕೊಡುತ್ತಾನೆ (ಮತ್ತಾಯ 19:9). ಅದು ದೇಶವೊಂದರ ಹಿತಾಸಕ್ತಿಯ ವಿರುದ್ಧದ ಮತ್ತು ಸ್ವತಃ ಒಬ್ಬನ ಆತ್ಮದ ವಿರುದ್ಧವಾಗಿರುವ ಪಾಪವಾಗಿದೆ (ಜ್ಞಾನೋಕ್ತಿ 6:32).[60]

## ಏಸಾವನು ಕಣ್ಣೀರು ಸುರಿಸುತ್ತಾ ಪಶ್ಚಾತ್ತಾಪವನ್ನು ಅಪೇಕ್ಷಿಸಿದನು (12:17)

ಏಸಾವನು ಅಸಮಾಧಾನದಿಂದ ಗೋಳಾಡುವವನಾಗಿ ಬೇಡಿಕೊಂಡಿರಬಹುದಾಗಿದೆ, ಆದರೆ ಆತನ ಮನವಿಗಳಿಗೆ ಯಾವ ಪ್ರತ್ಯುತ್ತರಗಳೂ ಸಿಕ್ಕಲಿಲ್ಲ. ಯೇಸುವಿನ ವಿರುದ್ಧವಾಗಿ ಹೋಲಿಸಿ ಯೋಚಿಸಿರಿ, ಆತನು ಗೆತ್ಸೇಮನೆ ತೋಟದಲ್ಲಿ ಕಣ್ಣೀರು ಸುರಿಸುವವನಾಗಿ ಸಹಾಯಕ್ಕಾಗಿ ಬೇಡಿಕೊಂಡಾಗ (ಲೂಕ 22:44) ತನ್ನ "ಭಕ್ತಿಯ ನಿಮಿತ್ತ ಕೇಳಲ್ಪಟ್ಟನು" (ಇಬ್ರಿಯ 5:7). ಯೇಸುವಿನ ಪ್ರಾರ್ಥನೆಯು ಕೇಳಲ್ಪಟ್ಟಿತು (ಮತ್ತು ಉತ್ತರಿಸಲ್ಪಟ್ಟಿತು). ಏಸಾವ ಮತ್ತು ಯೇಸು ಇಬ್ಬರೂ ಕಣ್ಣೀರಿಟ್ಟರು; ಆದರೆ ಯೇಸುವು ಪ್ರಾರ್ಥನೆಗಳಿಗೆ ಉತ್ತರಿಸಬಲ್ಲ ಪರಲೋಕದ ತಂದೆಯ ಕಡೆಗೆ ಗಹನವಾದ ಗೌರವವುಳ್ಳವನಾಗಿ ಹಾಗೆ ಮಾಡಿದರೆ, ಏಸಾವನಾದರೋ ತನ್ನ

ಸ್ವಂತ ಸ್ವಾರ್ಥ ಇಚ್ಛೆಗಳ ಕಾರಣದಿಂದ ಕಣ್ಣೀರಿಟ್ಟನು. ಕೆಲವು ಪ್ರಕರಣಗಳಲ್ಲಿ, ಇದು "ನನ್ನ ಪ್ರಾರ್ಥನೆಗಳು ಏಕೆ ಕೇಳಲ್ಪಡುತ್ತಿಲ್ಲ?" ಎಂಬ ಪ್ರಶ್ನೆಗೆ ಉತ್ತರವನ್ನು ಕೊಡಬಲ್ಲದು (ನೋಡಿರಿ ಯಾಕೋಬ 4:2, 3.)

## ಗುಡುಗು, ಬೆಂಕಿ, ಕತ್ತಲು, ಮತ್ತು ಬಿರುಗಾಳಿ (12:18-21)

ಸಿನಾಯ್ ಪರ್ವತದ ಬಳಿಯಲ್ಲಿ ಭಯ ಹುಟ್ಟಿಸುವಂತಹ ದೃಶ್ಯಗಳು ಮತ್ತು ಶಬ್ದಗಳು ಸಂಭವಿಸಿದವು. ಇವುಗಳು ಆ ದಿನ ಮೊದಲ್ಗೊಂಡು ದೇವರ ಮಾತಿಗೆ ಕಿವಿಗೊಡುವಂತೆ ಜನರನ್ನು ಸ್ಫೂರ್ತಿಗೊಳಿಸುವ ಉದ್ದೇಶ ಹೊಂದಿದ್ದವು. ಗುಡುಗು, ಬೆಂಕಿ, ಕತ್ತಲು, ಮತ್ತು ತೀಕ್ಷ್ಣವಾದ ಬಿರುಗಾಳಿಯು ಮರಣದ ಭಯವನ್ನು ನಿಕಟಕ್ಕೆ ಬರಮಾಡಿದವು. ಹಳೆಯ ಒಡಂಬಡಿಕೆಯು "ಮರಣವಿಧಿಸುವ ನಿಯಮದ ಸೇವೆ" ಎಂದು ಕರೆಯಲ್ಪಟ್ಟದ್ದರಲ್ಲಿ ಆಶ್ಚರ್ಯವೇನಿಲ್ಲ (2 ಕೊರಿಂಥ 3:7)! ಅದು ಪಾಪದ ಫಲಿತವಾಗಿ ಮರಣವು ಬರುತ್ತದೆಂಬುದನ್ನು ತೋರ್ಪಡಿಸಿತು. ಮೋಶೆಯು ಸಹ ನಡುಗಿ ಹೋಗಿದ್ದನು (ವ. 21).

ಈ ಎಲ್ಲಾ ಮೊಬ್ಬು ಮತ್ತು ಅಳಿವು ಬಗ್ಗೆ ತನ್ನ ವಾಚಕರಿಗೆ ತಿಳಿಸುವದರಲ್ಲಿ ಲೇಖಕನ ಉದ್ದೇಶವೇನಾಗಿತ್ತು? ಆತನು ಸಿನಾಯ್ ಪರ್ವತದಲ್ಲಿ ಯೆಹೂದ್ಯರು (ತಮ್ಮ ಪೂರ್ವಜರ ಮುಖಾಂತರ) ಬಳಿಗೆ ಬಂದಿದ್ದರ ಹಾಗೂ ಕ್ರೈಸ್ತರ ಮೂಲಕ ಬಳಿಗೆ ಬಂದಿರುವದರ ನಡುವಿನ ವಿರುದ್ಧತೆಯನ್ನು ತೋರ್ಪಡಿಸುತ್ತಿದ್ದಾನೆ. ಆತ್ಮೀಕವಾಗಿ ಶಿಶುತ್ವದ ಹಿಂದಿನ ಕಾಲದಲ್ಲಿ, ದೇವರು ಪಾಪ ಮತ್ತು ಅದರ ಪರಿಣಾಮದ ಕುರಿತು ಒತ್ತಿ ಹೇಳಿದನು (ಗಲಾತ್ಯ 3:19). ಹೊಸ ಒಡಂಬಡಿಕೆಯು ವ್ಯತ್ಯಾಸವಾಗಿರುತ್ತದೆ.

ಹಳೆಯ ಒಡಂಬಡಿಕೆಯನ್ನು ಕೊಡುವ ವೇಳೆ ತೋರ್ಪಟ್ಟ ಬಾಹ್ಯ ಕುರುಹುಗಳು ಆ ಒಡಂಬಡಿಕೆಯ ಹೃದಯಸ್ಪರ್ಶಿ ಉದ್ದೇಶವನ್ನು – ಜನರಿಗೆ ಪಾಪದ ಕುರಿತು, ಅದು ಹೇಗೆ ನಡೆದುಕೊಳ್ಳುತ್ತದೆ, ಮತ್ತು ಅದರಿಂದ ಹೇಗೆ ದೂರವಿರಬೇಕು ಎಂಬುದನ್ನು ಉಪದೇಶಿಸುವದು – ಪ್ರತಿಬಿಂಬಿಸಿತು. ಹಳೆಯ ಒಡಂಬಡಿಕೆಯ ಪ್ರಧಾನ ಉದ್ದೇಶವು ದೇವರಿಗೆ ಹೇಗೆ ವಿಧೇಯರಾಗಬೇಕೆಂಬುದನ್ನು ತೋರಿಸಿ ಕೊಡುವದಾಗಿತ್ತು; ಹೊಸ ಒಡಂಬಡಿಕೆಯ ಮುಖ್ಯ ಗುರಿಯು ಕ್ರಿಸ್ತನಿಗೆ ಹೇಗೆ ವಿಧೇಯರಾಗಬೇಕೆಂಬುದನ್ನು ತೋರಿಸುವದಾಗಿದೆ. ಅನೇಕ ಅನ್ಯಜನಾಂಗದ ಸದಸ್ಯರನ್ನೊಳಗೊಂಡಿದ್ದ ಸಭೆಗಳಿಗೆ, ಪೌಲನು ಹೀಗೆ ಹೇಳಿದನು, "ಧರ್ಮಶಾಸ್ತ್ರವು ನಮ್ಮನ್ನು ಕಾಯುವ ಆಳಿನಂತಾಗಿದೆ" (ಗಲಾತ್ಯ 3:24). ಅದೊಂದು ಆಘಾತಕಾರಿ ಸತ್ಯವಾಗಿರುತ್ತದೆ: ನಾವು ದೇವರ ಮೊದಲ ಸಂಪುಟದಿಂದ ಕ್ರಿಸ್ತನ ಬಳಿಗೆ ಹೇಗೆ ಬರಬೇಕೆಂಬುದನ್ನು ಕಲಿತುಕೊಳ್ಳುತ್ತೇವೆ! ಹಳೆಯ ಒಡಂಬಡಿಕೆಯು ದೇವರ ಘನಗಾಂಭೀರ್ಯವನ್ನು ಚಿತ್ರಿಸುತ್ತದೆ, ಆತನು ಅಪನಂಬಿಗಸ್ತರಿಗೆ ಏನು ಮಾಡಿದ್ದಾನೆ, ಮತ್ತು ನಾವು ಅಪನಂಬಿಗಸ್ತರಾಗಿದ್ದರೆ ಆತನು ನಮಗೆ ಏನು ಮಾಡಬಲ್ಲನು ಎಂಬುದನ್ನು ಬಣ್ಣಿಸುತ್ತದೆ. ಧರ್ಮಶಾಸ್ತ್ರವು ತನ್ನ ಉದ್ದೇಶಕ್ಕಾಗಿ ಪರಿಣಾಮಕಾರಿಯಾಗಿತ್ತು, ಆದರೆ ನಮಗೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ಮೀರುವಂಥದ್ದೊಂದು ಇರುತ್ತದೆ.

## ನಮ್ಮ ದೇವರು ಘನಗಾಂಭೀರ್ಯವುಳ್ಳ ದೇವರು (12:18-24)

ಪರ್ವತದ ಸುತ್ತಲು ಇದ್ದ ಗುಡುಗು ಮತ್ತು ಸಿಡಿಲುಗಳಿಂದ ಕೂಡಿದ ಭಯಾನಕವಾದ ಕತ್ತಲು ಯಾವದೇ ಆತ್ಮವನ್ನು ಭಯಭೀತಗೊಳಿಸುವದಕ್ಕೆ ಸಾಕಾಗಿತ್ತು. ಆಗ ಸಂಭವಿಸಿದ ಒಂದು ಭೂಕಂಪನದ ಕದಲುವಿಕೆಯು ಜನರು ಅನುಭವಿಸಬಲ್ಲ ಅತ್ಯಂಥ ಘನಗಂಭೀರವಾದ

ಹಾಗೂ ಭಯಾನಕ ಘಟನೆಗಳಲ್ಲೊಂದಾಗಿತ್ತು. ಅಲ್ಲಿ ಹೋಗುವದಕ್ಕೆ, ಬಚ್ಚಿಟ್ಟುಕೊಳ್ಳುವದಕ್ಕೆ ಯಾವ ದಾರಿಯೂ ಇಲ್ಲ, ಮತ್ತು ಅದನ್ನು ತಡೆಯುವದಕ್ಕೆ ಯಾವ ಸಾಧ್ಯತೆಯೂ ಇಲ್ಲ. ಪ್ರಾಚೀನ ಜನರು ಭೂಕಂಪವನ್ನು ದೇವರ ಕ್ರಿಯೆಗಳೆಂದು ಪರಿಗಣಿಸಿದರೆಂಬುದರಲ್ಲಿ ಆಶ್ಚರ್ಯವೇನಿಲ್ಲ! ತುತೂರಿಯ ಮೊಳಗುವ ಶಬ್ದ, ಬಿರುಗಾಳಿ, ಮತ್ತು ಬೆಟ್ಟವನ್ನು ಯಾವದೂ ಮುಟ್ಟುವದಕ್ಕೆ ಸಾಧ್ಯವಿಲ್ಲ ಎಂಬ ಎಚ್ಚರಿಕೆ ಇವೆಲ್ಲವೂ ಇನ್ನಷ್ಟು ಭಯವನ್ನು ಸೃಷ್ಟಿಸಿದ್ದವು. ಮೋಶೆಯು ಸಹ ಹೀಗೆ ಹೇಳಿದನು, “ನನಗೆ ಬಹು ಭಯವಾಗುತ್ತದೆ, ನಡುಗುತ್ತೇನೆ” (ವ. 21).

ಇದೆಲ್ಲವು ಏಕೆ ಸಂಭವಿಸಿತು? ದೇವರಿಗೆ ಮತ್ತು ಆತನ ಕಟ್ಟಳೆಗಳಿಗೆ ಗೌರವವನ್ನುಂಟು ಮಾಡುವದಕ್ಕೆ, ಪಾಪದ ವಿರುದ್ಧ ಆತನ ಭಯಂಕರ ತೀರ್ಪುಗಳ ಕುರಿತು ಜನರಿಗೆ ತಿಳಿಯಪಡಿಸುವದಕ್ಕೆ, ಮತ್ತು ಆತನ ಆಜ್ಞೆಗಳಿಗೆ ಪೂರ್ಣವಾಗಿ ವಿಧೇಯರಾಗುವಂತಹ ಭಯವನ್ನು ಹುಟ್ಟಿಸುವದಕ್ಕಾಗಿಯೇ ಸಂಭವಿಸಿತು. ದೇವರು ನಾಶನಕ್ಕೆ ಗುರಿಪಡಿಸುವದರ ಭಯವನ್ನು ನಾಶನಮಾರ್ಗದಲ್ಲಿರುವ ಜನರು ಅರ್ಥಮಾಡಿಕೊಂಡರೆ ಅದನ್ನು ತಡೆದುಕೊಳ್ಳಲಾರರು. ಅವರು ಜೀವಿತ ಕಾಲವೆಲ್ಲಾ ಅಂತ್ಯದ ಹತ್ತಿರಕ್ಕೆ ಬರುವ ತನಕ ಅದನ್ನು ತಲೆಯೆತ್ತದಂತೆ ಮಾಡಬಹುದು. ಅನೇಕ ನಾಸ್ತಿಕರು ದೇವರ ಅಸ್ತಿತ್ವದ ವಿಷಯದಲ್ಲಿ ತಾವು ತಪ್ಪು ಭಾವನೆ ಹೊಂದಿದ್ದೇವೆಂಬುದನ್ನು ಯೋಚಿಸಿ ಕಂಪಿಸಿರುತ್ತಾರೆ ಮತ್ತು ನಡುಗಿ ಹೋಗಿರುತ್ತಾರೆ. ತಮ್ಮ ಮೊಂಡು ಚಿತ್ತಗಳನ್ನು ಕಠಿಣಪಡಿಸಿಕೊಂಡಿರುವವರು ಮತ್ತು ಪಾಪದಿಂದ ವಂಚಿಸಲ್ಪಟ್ಟವರಾಗಿ ವರ್ಷಗಳ ಗಟ್ಟಲೆ ಜೀವಿಸಿರುವವರು ಮರಣವು ಸಮೀಪಿಸುತ್ತಿರುವದನ್ನು ಕಂಡಾಗ ಒಂದು ಅವಕಾಶಕ್ಕೋಸ್ಕರ ಹಂಬಲಿಸುತ್ತಾರೆ. ಯಾಕೆಂದರೆ ಜೀವಿಸ್ವರೂಪನಾದ ದೇವರ ಕೈಗಳಲ್ಲಿ ಸಿಕ್ಕಿ ಬೀಳುವದು ಭಯಂಕರವಾದದ್ದು (10:31).

## ನಾವು ಕ್ರಿಸ್ತನ ಬಳಿಗೂ ಆತನ ಸಭೆಯ ಬಳಿಗೂ ಬಂದಿದ್ದೇವೆ (12:22-24)

ಇಬ್ರಿಯ ಕ್ರೈಸ್ತರು ನೋಡುವದಕ್ಕೆ ಮತ್ತು ಮುಟ್ಟುವದಕ್ಕೆ ಸಾಧ್ಯವಿಲ್ಲ ಆತ್ಮೀಕ ಪರ್ವತವೊಂದರ ಬಳಿಗೆ ಬಂದಿದ್ದರು ಮತ್ತು ಅದು ಯಾವ ಭಯವನ್ನು ಸೃಷ್ಟಿಸಲಿಲ್ಲ. ಇನ್ನು ಮೇಲೆ ದೇವರ ಬಳಿಗೆ ಬರುವದಕ್ಕೆ ನಾವು ಭಯ ಪಡುವ ಅಗತ್ಯವಿರುವದಿಲ್ಲ (4:15, 16). ನಾವು ಕ್ರಿಸ್ತನಲ್ಲಿ ಯಾವದರ ಬಳಿಗೆ ಬಂದಿರುತ್ತೇವೋ ಅದರ ಮಹಿಮೆಯು ಊಹಿಸಿಕೊಳ್ಳಲಾಗದಂಥದ್ದು. ದೇವರ ರಾಜ್ಯವು ಒಂದು ಶಾಂತವಾದ, ಆತ್ಮೀಕ ಪಟ್ಟಣವಾಗಿದೆ, ಹೊರತು ತುತೂರಿಗಳು ಮೊಳಗುವ ಗದ್ದಲವಿರುವ ಪಟ್ಟಣವಲ್ಲ. ಅಲ್ಲಿ ಎಲ್ಲಾ ಯುಗಗಳ ದೇವಜನರು ಕೂಡಿ ಬರುತ್ತಾರೆ, ಮತ್ತು ನಾವು ಅವರೊಂದಿಗೆ ಸೇರಿಕೊಳ್ಳುತ್ತೇವೆ. ರಾಜ್ಯವನ್ನು ಪ್ರವೇಶಿಸಿರುವವರಾಗಿ, ನಮ್ಮ ಹೆಸರುಗಳು ಈಗ ಪರಲೋಕದಲ್ಲಿ ಬರೆಯಲ್ಪಟ್ಟಿರುತ್ತವೆ. ನಾವು ಯಾವ ಮನುಷ್ಯನಾದರೂ ಎಣಿಸುವದಕ್ಕೆ ಸಾಧ್ಯವಿರುವದಕ್ಕಿಂತಲೂ ಅಸಂಖ್ಯಾತ ದೇವದೂತರಿಂದ ಆಶೀರ್ವದಿಸಲ್ಪಟ್ಟಿದ್ದೇವೆ: “ಕೋಟ್ಯಾನುಕೋಟಿ ದೇವದೂತರು” (ಪ್ರಕಟನೆ 5:11).

ನಿಮ್ಮ ಹೆಸರುಗಳು ಹೇಗೆ ಬರೆಸಲ್ಪಟ್ಟಿವೆ? ನಾವು ನೋಡಲಿಕ್ಕಾಗದ ದೇವರ ಬಳಿಗೆ ಹೇಗೆ ಬಂದಿದ್ದೇವೆ? ನಾವು ಯೇಸುವಿನ ಬಳಿಗೆ ಬಂದಿದ್ದೇವೆ, ಮತ್ತು ಈಗ ಆತನು ನಮ್ಮ ಸಂಗಡ ಇರುತ್ತಾನೆ; ಆದರೆ ನಂಬಿಕೆಗೆ ಸಂಬಂಧಿಸಿದ ವಿಷಯವಾಗಿದೆ. ಆತನ ಸಾಮೀಪ್ಯವು ಬೈಬಲಿನಲ್ಲಿ ಪ್ರಕಟಿಸಲ್ಪಟ್ಟಿದೆ, ಮತ್ತು ನಾವು ಅದನ್ನು ನಂಬಬೇಕು. ನಾವು ಬೆಳಕಿನಲ್ಲಿ ನಂಬುತ್ತೇವೆ, ಹೊರತು ಅಜ್ಞಾನದ ಕತ್ತಲೆಯಲ್ಲಿ ಅಲ್ಲ. ದೇವರ ಮತ್ತು ಯೇಸುವಿನ ಕುರಿತು ತಿಳಿದುಕೊಳ್ಳುವದಕ್ಕೆ ಅವಶ್ಯವಿರುವದನ್ನೆಲ್ಲಾ ಪ್ರಕಟಿಸಲ್ಪಟ್ಟಿರುವದರ ಮೂಲಕವಾಗಿ ತಿಳಿದುಕೊಳ್ಳಬಲ್ಲೆವು.

ಇದೆಲ್ಲವೂ ಸತ್ಯವಾದದ್ದು ಯಾಕೆಂದರೆ ಕ್ರಿಸ್ತನ ಬಳಿಗೆ ಬಂದಿದ್ದೇವೆ, ಆತನ ದೇಹವಾದ ಸಭೆಯೊಳಗೆ ಸೇರಿಸಲ್ಪಟ್ಟಿದ್ದೇವೆ, ಅದು ಪರಲೋಕದ ರಾಜ್ಯವಾಗಿದೆ. ನಾವು ನಂಬಿಕೆಯ ಮೂಲಕ, ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡು ದೇವರ ಮಕ್ಕಳಾದ ವೇಳೆ ಇದು ಸಂಭವಿಸಿತು (ಗಲಾತ್ಯ 3:26, 27).

## ಪರಲೋಕದಲ್ಲಿ ಹೆಸರುಗಳು ಬರೆಸಲ್ಪಟ್ಟಿವೆ (12:23)

ಪೌಲನಿಗೆ ಪರಲೋಕದಲ್ಲಿ ಹೆಸರು ಬರಸಿಕೊಂಡಿದ್ದ ಕನಿಷ್ಠ ಕೆಲವರಾದರೂ ಗೊತ್ತಿತ್ತು (ಫಿಲಿಪ್ಪಿ 4:3). ಆತನು ಬಹುಶಃ 2 ಕೊರಿಂಥ 12:1–4ರಲ್ಲಿ ವರದಿ ಮಾಡಿರುವ ದರ್ಶನವೊಂದರಲ್ಲಿ ಅವರ ಹೆಸರುಗಳನ್ನು ಆ ಪುಸ್ತಕದಲ್ಲಿ ಓದಿದನೋ? ಪೌಲನು ಮಾತುಗಳಲ್ಲಿ ಒಂದು ಪ್ರಕಟನೆಯನ್ನು ಪಡೆದುಕೊಂಡಿರಬಹುದು, ಅಥವಾ ಆತನಿಗೆ ಯುವೊದ್ಯಳ, ಸಂತುಕೆ, ಕ್ಲೇಮೆನ್ಸ್ ಇವರ ಗುಣಸ್ವಭಾವಗಳ ಬಗ್ಗೆ ಗೊತ್ತಿದ್ದಿರುವ ಸಾಧ್ಯತೆಯಿದೆ. ಜೀವನದಲ್ಲಿ ಅವರ ನಡೆಯ ಬಗ್ಗೆ ಆತನಿಗೆ ಗೊತ್ತಿದ್ದ ಕಾರಣದಿಂದ ಅವರ ನಿತ್ಯವಾದ ಅಂತ್ಯಸ್ಥಿತಿಯ ಬಗ್ಗೆ ಖಚಿತತೆಯುಳ್ಳವನಾಗಿರಬಹುದು. ಪೌಲನು "ಮಾರ್ಟೆಲ್, ನಿನ್ನ ಹೆಸರು ಪರಲೋಕದಲ್ಲಿ ಬರೆಯಲ್ಪಟ್ಟಿದೆ" ಎಂದು ಹೇಳುವದನ್ನು ಕೇಳಿಸಿಕೊಳ್ಳುವದು ಎಷ್ಟು ಸಂತೋಷಕರವಾದದ್ದು! ನಮಗೆ ಆ ವಿಧವಾದ ನಿಶ್ಚಯತ್ವವು ಕೊಡಲ್ಪಟ್ಟಿಲ್ಲ, ಆದರೆ ನಾವು ಸುವಾರ್ತೆಗೆ ವಿಧೇಯರಾಗಿದ್ದರೆ (ಮಾರ್ಕ 16:16; ಅಪೋಸ್ತಲರ ಕೃತ್ಯಗಳು 2:38) ಮತ್ತು ನಂಬಿಕೆಯಲ್ಲಿ ಪರಿಶುದ್ಧ ಜೀವಿತವನ್ನು ಜೀವಿಸುವದಕ್ಕಾಗಿ ಅನುದಿನವೂ ಪರಿಶ್ರಮ ಪಡುತ್ತಿರುವದಾದರೆ "[ನಮಗೆ] ನಿತ್ಯಜೀವ ಉಂಟೆಂದು ಗೊತ್ತಾಗಿದೆ" (1 ಯೋಹಾನ 5:13).

## ವಿರುದ್ಧ ಹೋಲಿಕೆಯಲ್ಲಿ: ಕ್ರೈಸ್ತರಿಗಾಗಿ ಒಂದು ಕೊಂಡಾಟ (12:22-24)

ಹೊಸ ಒಡಂಬಡಿಕೆಯು ಭಯವನ್ನು ತೆಗೆದು ಹಾಕುತ್ತದೆ ಮತ್ತು ಸಂತೋಷವನ್ನು ಉಂಟು ಮಾಡುತ್ತದೆ. ಏಕೆ? ಏಕೆಂದರೆ ಕ್ರೈಸ್ತರು ಸಿನಾಯ್ ಪರ್ವತದ ಭಯ ಹಾಗೂ ನಡುಗುವಿಕೆಗಳಿಂದ ಬಿಡಿಸಲ್ಪಟ್ಟಿರುತ್ತಾರೆ:

> ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನೆಂದರೆ ಆತನು ಪಾಪನಿವಾರಣೆಗಾಗಿ ತನ್ನ ಗಮನವನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು. ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು (ರೋಮಾ 8:3, 4).

ನಾವು ಪಾಪಕ್ಕೆ ದಾಸತ್ವದಲ್ಲಿರುವದನ್ನು ಪ್ರತಿನಿಧಿಸುವಂತಹ ಒಂದು ಪರ್ವತದ *ಬಳಿಗೆ ಬಂದಿರುವದಿಲ್ಲ* (ಗಲಾತ್ಯ 4:21–26). ಅದಕ್ಕೆ ತದ್ವಿರುದ್ಧವಾಗಿ, ನಾವು ಸಿನಾಯ್ ಪರ್ವತದ *ಬಳಿಗೆ* ಬಂದಿದ್ದೇವೆ, ಅದು ಜೀವಸ್ವರೂಪನಾದ ದೇವರ ಸ್ವತಂತ್ರ ಪಟ್ಟಣ, ಪರಲೋಕದ ಯೆರೂಸಲೇಮ್ ಆಗಿರುತ್ತದೆ. ನಾವು ಸಹಾಯವನ್ನು ಮಾಡುವ ಕೋಟ್ಯಾನುಕೋಟಿ ದೇವದೂತರ *ಬಳಿಗೆ ಬಂದಿದ್ದೇವೆ*, ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಚೊಚ್ಚಲಮಕ್ಕಳ ಸಭೆಗೆ ಬಂದಿದ್ದೇವೆ. ಯೇಸುವಿನ ಆಮಂತ್ರಣಕ್ಕೆ ಪ್ರತ್ಯುತ್ತರವನ್ನು ಕೊಡುವವರಾಗಿ ಆತನ *ಬಳಿಗೆ ಬಂದಿದ್ದೇವೆ* (ಮತ್ತಾಯ 11:28–30; ಪ್ರಕಟನೆ 22:17). ಆತನಲ್ಲಿ ನಾವು ಪಾಪದಿಂದ ಮತ್ತು ಅದರ

ಪರಿಣಾಮಗಳಿಂದ ವಿಶ್ರಾಂತಿಯನ್ನು ಅನುಭವಿಸುವದರ ಜೊತೆಗೆ, ನಮ್ಮ ಶ್ರೇಷ್ಠ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೆ ಬಂದಿರುತ್ತೇವೆ. ಸಭೆಯಲ್ಲಿ ನಾವು ಕುರಿಯ ರಕ್ತದಿಂದ ಪರಿಪೂರ್ಣಗೊಳಿಸಲ್ಪಟ್ಟಿರುವ ಎಲ್ಲಾ ಯುಗಗಳಲ್ಲಿನ ವ್ಯಕ್ತಿಗಳ ಆತ್ಮಗಳೊಂದಿಗೆ ಕೂಡಿಕೊಂಡಿರುತ್ತೇವೆ (ಪ್ರಕಟನೆ 7:13, 14). ಆ ರಕ್ತವು ಹೀಗೆ ಕೂಗುತ್ತದೆ, "ನೀನು ಕ್ಷಮಿಸಲ್ಪಟ್ಟಿರುವಿ! ಈಗ ನೀನು ಪರಿಪೂರ್ಣಗೊಳಿಸಲ್ಪಟ್ಟಿರುವ ಯಾಕೆಂದರೆ ನನ್ನ ರಕ್ತವು ನಿನಗಾಗಿ ಪಾಪಪರಿಹಾರವನ್ನುಂಟು ಮಾಡಿತು."

ನಾವು ಸಭೆಯಲ್ಲಿ ಹೊಂದಿರುವ ಎಲ್ಲಾ ಆಶೀರ್ವಾದಗಳನ್ನು ಗ್ರಹಿಸಿಕೊಳ್ಳುವದಾದರೆ, ಪ್ರತಿ ದಿನವೂ ಒಂದು ಸಂಭ್ರಮಿಸುವ ದಿನವಾಗುವದು. ಕೆಲವರು ಈ ಆಶೀರ್ವಾದಗಳು ಕೇವಲ ಭವಿಷ್ಯದಲ್ಲಿ ಮಾತ್ರವೇ ಇರುವಂಥವುಗಳೆಂಬ ರೀತಿಯಲ್ಲಿ, ನಾವು "ಪರಲೋಕದ ಪಟ್ಟಣದ ಬಳಿಗೆ" ಬಂದಿರುವದಿಲ್ಲವೇನೋ ಎಂಬಂತೆ ಮಾತಾಡುತ್ತಾರೆ. ಹೇಗೂ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೀಗೆ ಹೇಳಿದನು, "ನೀವು . . . *ಬಂದಿದ್ದೀರಿ"* (ವ. 22; ಒತ್ತಿ ಹೇಳಿದ್ದು ನನ್ನದು). ಈ ಭೂಮಿಯ ಮೇಲೆ ದೇಹದಲ್ಲಿರುವ ವೇಳೆಯಲ್ಲಿ ಸಹ, ನಾವು ಈಗಾಗಲೇ ಪರಲೋಕದಲ್ಲಿ ಪೌರತ್ವವನ್ನು ಹೊಂದಿರುತ್ತೇವೆ (ಫಿಲಿಪ್ಪಿ 3:20). ನಮ್ಮ ರಕ್ಷಕನು ಪ್ರತ್ಯಕ್ಷನಾಗುವದನ್ನು ನಾವು ಕಾತುರದಿಂದ ನಿರೀಕ್ಷಿಸಿಕೊಂಡಿರುತ್ತೇವೆ, ಆದರೆ ಈಗ ನಮಗೆ ಮಹಿಮೆಯ ಮಿನುಗುನೋಟವನ್ನು ಹೊಂದಿದ್ದೇವೆ.

## ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲೆನೆಂದು ಹೇಳದಿರಿ (12:25)

ದೇವರು ಹಳೆಯ ಒಡಂಬಡಿಕೆಯಲ್ಲಿ ಮಾತಾಡಿದನು; ಆದಾಗ್ಯೂ ಆತನು ಹೊಸ ಒಡಂಬಡಿಕೆಯಲ್ಲಿ ತನ್ನ ಮಗನ ಮೂಲಕವಾಗಿ ಇನ್ನೂ ಬಲವಾಗಿ ಮಾತಾಡಿದ್ದಾನೆ (1:1, 2). ಹೊಸ ಒಡಂಬಡಿಕೆಯ ದೇವರು ಹಳೆಯ ಒಡಂಬಡಿಕೆಯಲ್ಲಿದ್ದ ಅದೇ ದೇವರಾಗಿದ್ದಾನೆ, ಆದರೆ ಆತನು ಬೇರೆ ವಿಧದಲ್ಲಿ ಮಾತಾಡುತ್ತಾನೆ. ಈ ಹೇಳಿಕೆಯ ಇಬ್ರಿಯರಿಗೆ ಪತ್ರಿಕೆಯಲ್ಲಿ ಕೇಂದ್ರಿಕೃತವಾಗಿರುವ, ಮುಖ್ಯವಾದ ಯೋಚನೆಯಾಗಿರುತ್ತದೆ. ನಾವು ದೇವರಿಂದ ಬರುವ ಒಂದೇ ಒಂದು ಮಾತನ್ನಾದರೂ ನಿರ್ಲಕ್ಷ್ಯ ಮಾಡಬಾರದು. 12:25ರಲ್ಲಿ ಮಾತಾಡುವವನು ಯಾರೆಂದು ಹೇಳಲ್ಪಟ್ಟಿಲ್ಲವಾದರೂ, ಅದು ಸ್ವತಃ ದೇವರೇ ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ನಾವು ಆತನ ವಾಕ್ಯವನ್ನು ಅಸಡ್ಡೆ ಮಾಡುವದಾದರೆ ಅಥವಾ ಕೇಳಿಸಿಕೊಳ್ಳಲು ನಿರಾಕರಿಸುವದಾದರೆ, ನಾವು ಘೋರವಾದ ಪರಿಣಾಮಗಳನ್ನು ಅನುಭವಿಸುವೆವು. ಆತನು ತನ್ನ ಪ್ರೇರಿತ ವಕ್ತಾರರ ಮೂಲಕ, ಪ್ರಥಮ ಶತಮಾನದಲ್ಲಿ ಅವರ ಮೌಖಿಕ ಹಾಗೂ ಲಿಖಿತ ವಾಕ್ಯಗಳ ಮುಖಾಂತರವಾಗಿ ಪರಲೋಕದಿಂದ ಎಚ್ಚರಿಸಿರುತ್ತಾನೆ. ಇಬ್ರಿಯರಿಗೆ ಪತ್ರಿಕೆಯು ದೇವರಿಂದ ಬಂದ ಅಂಥ ಒಂದು ಸಂದೇಶ ಆಗಿರುತ್ತದಷ್ಟೆ; ಅದರ ಉಗಮಸ್ಥಾನವನ್ನು ಅಲ್ಲಗಳೆದು ಅದರ ಅಧಿಕಾರ ಹಾಗೂ ಬೋಧನೆಯನ್ನು ತಿರಸ್ಕರಿಸುವವನು ನಿತ್ಯನಾಶವನ್ನು ಎದುರಿಸುವನು.

2:3ರಲ್ಲಿ ಒಂದು ಪ್ರಶ್ನೆಯು ಕೇಳಲ್ಪಟ್ಟಿತು: "ನಾವು . . . ತಪ್ಪಿಸಿಕೊಳ್ಳುವದು ಹೇಗೆ?" ಉತ್ತರವು ಇಲ್ಲಿ ಕೊಡಲ್ಪಟ್ಟಿದೆ: "ಭೂಮಿಯ ಮೇಲೆ ದೈವೋಕ್ತಿಗಳನ್ನಾಡಿದವನಿಗೆ ಕಿವಿಗೊಡ ಮನಸ್ಸಿಲ್ಲದೆ ಇದ್ದ ಇಸ್ರಾಯೇಲ್ಯರು ದಂಡನೆಗೆ ತಪ್ಪಿಸಿಕೊಳ್ಳದಿದ್ದರೆ ಪರಲೋಕದಿಂದ ಮಾತಾಡುವವನಿಗೆ ನಾವು ಕಿವಿಗೊಡ ಮನಸ್ಸಿಲ್ಲದೆ ತೊಲಗಿದರೆ ಹೇಗೆ ತಪ್ಪಿಸಿಕೊಂಡೇವು?" (12:25). ದೇವರ ಅಧಿಕಾರವನ್ನು ತಿರಸ್ಕರಿಸುವವರಿಗೆ ತಪ್ಪಿಸಿಕೊಳ್ಳುವ ದಾರಿಯೇ ಇಲ್ಲ – ಅವರು ನಾಶಗೊಳ್ಳುವರು.

ಸಿನಾಯ್ ಪರ್ವತದ ಬಳಿಯಲ್ಲಿ ಮಾತಾಡಿದ ಘನಗಾಂಭೀರ್ಯವಾದ ಧ್ವನಿಯು ಎರಡನೆಯ ಬರೋಣದ ವೇಳೆ ಪೂರ್ಣ ಶಕ್ತಿಯೊಂದಿಗೆ “ಕಾಲವು ಇನ್ನು ಉಳಿದಿಲ್ಲ!” ಎಂದು ಘೋಷಿಸುವದು. ಕರ್ತನ ಧ್ವನಿಗೆ ಇಡೀ ಭೂಮಿಯನ್ನು ನಡುಗಿಸುವ ಶಕ್ತಿಯಿರುತ್ತದೆ (ವಚನಗಳು 26-28). ಭವಿಷ್ಯದಲ್ಲಾಗುವ ನ್ಯಾಯತೀರ್ಪುಗಳ ಕುರಿತು (9:27), ಸಂಪೂರ್ಣ ಮತಭ್ರಷ್ಟತೆಯ ಭಯಂಕರ ಫಲಿತಗಳ ಕುರಿತು (6:4-6; 10:26-29), ಮತ್ತು “ಕದಲಿಸಲ್ಪಡಲ್ಲ ಲೋಕದ” ಕುರಿತು ಎಚ್ಚರಿಕೆಗಳು ಕೊಡಲ್ಪಟ್ಟಿರುತ್ತವೆ. ಸಮಯವು ಬಂದಾಗ, ಕಣ್ಣಿಗೆ ಕಾಣಿಸುವ ಇಡೀ ಜಗತ್ತು ನಾಶಗೊಳ್ಳುವದು (2 ಪೇತ್ರ 3:5-7, 10-13). ನಾವು ದೇವರ ನಿತ್ಯವಾದ ರಾಜ್ಯದ ಭಾಗವಾಗಿದ್ದೇವೆ ಎಂಬುದಕ್ಕಾಗಿ ಆತನಿಗೆ ಸ್ತೋತ್ರವಾಗಲಿ, ಅದು ಕದಲಿಸಲ್ಪಡುವಿಕೆಯ ಮೂಲಕ ಎಂದಿಗೂ ತೆಗೆದು ಹಾಕಲ್ಪಡುವದಕ್ಕೆ ಸಾಧ್ಯವಿಲ್ಲದ್ದಾಗಿದೆ (12:28).

## ನಮ್ಮ ದೇವರು ಧಹಿಸುವ ಅಗ್ನಿಯಾಗಿದ್ದಾನೆ (12:28, 29)

ದೇವರಿಗೆ ಮಾಡಲಾಗುವ ಸಮರ್ಪಕವಾದ ಆರಾಧನೆಯು ಮೂರು ಅರ್ಹತೆಗಳನ್ನು ಸಂಧಿಸುವದಾಗಿದೆ: (1) ಅದು ದೇವರಿಗೆ ಒಂದು ಅಂಗೀಕಾರರ್ಹ ವಿಧದಲ್ಲಿ ಸಲ್ಲಿಸಲ್ಪಡುತ್ತದೆ, (2) ಅದು ಭಯಭಕ್ತಿಯಿಂದ ಸಲ್ಲಿಸಲ್ಪಡುತ್ತದೆ, (3) ಅದು “ಧಹಿಸುವ ಅಗ್ನಿ”ಯಾದ ದೇವರಿಗೆ ಗೌರವದಿಂದ, ಮತ್ತು ಭಯದಿಂದ ಅರ್ಪಿಸಲ್ಪಡುತ್ತದೆ. ನಾವು ಸಮರ್ಪಕವಾಗಿ ಆರಾಧಿಸಬೇಕಾದರೆ ದೇವರ ಶ್ರೇಷ್ಠತೆಯನ್ನು ಒಪ್ಪಿಕೊಳ್ಳತಕ್ಕದ್ದು. ಆತನನ್ನು ಸೂಕ್ತವಾಗಿ ಅರ್ಥಮಾಡಿಕೊಂಡು ಆರಾಧಿಸಬೇಕಾದರೆ, ನಾವು ಆತನ ಮಾರ್ಪಡಲಾಗದ ಗುಣಸ್ವಭಾವವನ್ನು ಗುರುತಿಸಿಕೊಳ್ಳಬೇಕು: ಆತನು ನೀತಿವಂತನು ಮತ್ತು ಪಾಪವನ್ನು ದಂಡಿಸುತ್ತಾನೆ.

ನಮಗೆ ನಿರಂತರವಾಗಿ ಗೋಚರಿಸುವ ದೇವರ ಕೃಪೆಯ ಬಗ್ಗೆ ಕೇಳಿಸಿಕೊಳ್ಳಲು ಸಂತೋಷಗೊಳ್ಳುತ್ತೇವೆ, ಆದರೆ ಬೋಧಕರು ನರಕದ ಧಹಿಸುವ ಅಗ್ನಿಯ ಕುರಿತು ಸಾರುವದನ್ನು ಅಸಹ್ಯಿಸುತ್ತೇವೆ. ಕೆಲವರು ಅಂಥ ಬೋಧನೆಯನ್ನು ಕ್ಷೋಭೆಯುಂಟು ಮಾಡುವಂಥದ್ದು, ಸಭ್ಯತೆಯಿಲ್ಲದ್ದು, ಮತ್ತು ಕಡಿಮೆ ಜ್ಞಾನೋದಯವಿದ್ದ ಯುಗಕ್ಕೆ ಸೇರಿದ, ಅನಾಗರಿಕವಾದ ಬೋಧನೆಯೆಂದು ಯೋಚಿಸುತ್ತಾರೆ. ಇಂದು ಕೆಲವರು ನಿತ್ಯನಾಶನದ ದಂಡನೆಯು ಶಾಶ್ವತವಾದದ್ದಲ್ಲ ಎಂದು ಸಹ ಹೇಳಿಕೊಳ್ಳುತ್ತಾರೆ.

ಇಬ್ರಿಯರಿಗೆ ಪತ್ರಿಕೆಯಲ್ಲಿರುವ ಈ ವಾಕ್ಯಭಾಗದ ರಚನೆಯು ನಾವು ಅಗ್ನಿ ಮತ್ತು ಗಂಧಕಗಳಿಂದ ಕೂಡಿದ ನಿತ್ಯತ್ವದಿಂದ ದೂರವಿರುವಂತ ಕಾರ್ಯಪ್ರವೃತ್ತರಾಗುವಂತೆ ನಮ್ಮನ್ನು ಪ್ರಚೋದಿಸುವದು. ನ್ಯಾಯತೀರ್ಪು ಮತ್ತು ನರಕದ ಅಗ್ನಿಯ ಕುರಿತು ಸಾರುವದು, ಸಾಧ್ಯವಿದ್ದರೆ ಪಾಪಿಯನ್ನು ಭಯಭೀತಗೊಳಿಸಿ ವಿಧೇಯನಾಗುವಂತೆ ಮಾಡುವದು ಅನ್ಯಾಯಕರವೋ? ಅದು ಅನ್ಯಾಕರವಾಗಿದ್ದೇ ಆಗಿರುವದಾರೆ, ಇಬ್ರಿಯರಿಗೆ ಪತ್ರಿಕೆಯ ಲೇಖಕನಿಗೆ ಅದು ತಿಳಿದಿರಲಿಲ್ಲ. “ನಾಶಗೊಳಿಸುವ ಅಗ್ನಿ” (TEV) ಎಂಬ ಪದಗುಚ್ಛವು “ಇಲ್ಲಿಯಾಗಲಿ ಅಥವಾ 10:27ರಲ್ಲಾಗಲಿ ‘ಪರಿಶೋಧಿಸುವ’ ಅಥವಾ ‘ಶುದ್ಧೀಕರಿಸುವ’ ಬೆಂಕಿಯೆಂಬ ಯಾವ ಅಭಿಪ್ರಾಯವನ್ನೂ ಸೂಚಿಸುವದಿಲ್ಲ.”[61] ಇದು ದುಷ್ಟ ಆತ್ಮದ ನಾಶನದ ತೀರ್ಪು ಹಾಗೂ ನಿರಂತರವಾದ ದಂಡನೆಯ ವಿಷಯವಾಗಿರುವ ಒಂದು ಹೇಳಿಕೆಯಾಗಿರುತ್ತದೆ (ನೋಡಿರಿ ಪ್ರಕಟನೆ 14:11; 20:10; 21:8).

## ಅಡಿಟಿಪ್ಪಣಿಗಳು

[1]ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡರಲ್ಲಿಯೂ ಓಟದ ಸಾದೃಶ್ಯವು ಬಳಸಲ್ಪಟ್ಟಿದೆ; ಆದರೆ ಇದು ಹೊಸ ಒಡಂಬಡಿಕೆಯಲ್ಲಿ ಹೆಚ್ಚು ಸಾರಿ ಕಾಣಿಸಿಕೊಳ್ಳುತ್ತದೆ, ವಿಶೇಷವಾಗಿ ಪೌಲನ ಬರಹಗಳಲ್ಲಿ ಕಾಣಿಸುತ್ತದೆ. (ನೋಡಿರಿ ಕೀರ್ತನೆ 119:32; 1 ಕೊರಿಂಥ 9:24; ಫಿಲಿಪ್ಪಿ 3:14; ಗಲಾತ್ಯ 5:7; 2 ತಿಮೊಥೆ 4:7.) [2]F. F. Bruce, *The Epistle to the Hebrews*, The New International Commentary on the New Testament (Grand Rapids, Mich.: Wm. B. Eerdmans Publishing Co., 1964), 347. [3]Brooke Foss Westcott, *The Epistle to the Hebrews: The Greek Text with Notes and Essays* (London: Macmillan & Co., 1889; reprint, Grand Rapids, Mich.: Wm. B. Eerdmans Publishing Co., 1973), 391. ಲೌಕಿಕ ಬರಹಗಾರರು ಕೆಲವು ಸಾರಿ *martus* ಎಂಬ ಪದವನ್ನು "ಪ್ರತ್ಯಕ್ಷ ಸಾಕ್ಷಿ" ಅಥವಾ "ಪ್ರೇಕ್ಷಕ" ಎಂಬ ಅರ್ಥದಲ್ಲಿ ಬಳಸಿದರು. (Josephus *Wars* 6.2.5ರಲ್ಲಿ ಒಂದು ಉದಾಹರಣೆಯು ಕಂಡು ಬರುತ್ತದೆ.) [4]Ibid., 391. [5]Philip Edgcumbe Hughes, *A Commentary on the Epistle to the Hebrews* (Grand Rapids, Mich.: Wm. B. Eerdmans Publishing Co., 1977), 519. [6]Neil R. Lightfoot, *Everyone's Guide to Hebrews* (Grand Rapids, Mich.: Baker Books, 2002), 160. ಪ್ರಾಚೀನ ಕಾಲಗಳಲ್ಲಿ ಮ್ಯಾರಾಥಾನ್ ಒಂದು ಸರ್ವಸಾಧಾರಣವಾದ ಓಟವಾಗಿದ್ದಿಲ್ಲ, ಆದಾಗ್ಯೂ ತಾಳ್ಮೆಯು ಒಂದು ಜೀವಾಳವಾಗಿರುವ ಕಾರಣಾಂಶವಾಗಿರುತ್ತಿತ್ತು ಯಾಕೆಂದರೆ ಕ್ರೀಡಾಂಗಣದಲ್ಲಿನ ಓಟವು ಮೂರು ಮೈಲುಗಳಷ್ಟು ದೀರ್ಘವಾಗಿರುತ್ತಿತ್ತು. (Craig R. Koester, *Hebrews: A New Translation with Introduction and Commentary*, The Anchor Bible, vol. 36 [New York: Doubleday, 2001], 522-23.) [7]James T. Draper, Jr., *Hebrews, the Life That Pleases God* (Wheaton, Ill.: Tyndale House Publishers, 1976), 342. [8]Bruce, 349. ಇದೇ ರೀತಿಯ ಚರ್ಚೆಯು Neil R. Lightfoot, *Jesus Christ Today: A Commentary on the Book of Hebrews* (Grand Rapids, Mich.: Baker Book House, 1976), 228ರಲ್ಲಿ ಕಾಣಿಸು.

[9]Ray C. Stedman, *Hebrews*, The IVP New Testament Commentary Series (Downers Grove, Ill.: InterVarsity Press, 1992), 135. [10]ರೋಮಾಪುರದಲ್ಲಿ ಒಬ್ಬ ಗಣ್ಯ ನಾಗರಿಕನು ದಾರಿಯ ಮಧ್ಯದಲ್ಲಿ ಓಟದ ದಾರಿಯ ಪಕ್ಕದಲ್ಲಿ ಕುಳಿತುಕೊಂಡಿರುತ್ತಿದ್ದನು, ಹೀಗೆ ಓಟಗಾರರು ಆತನನ್ನ ಕಣ್ಣೆತ್ತಿ ನೋಡಬಲ್ಲವರಾಗಿದ್ದರು.

[11]Kenneth Samuel Wuest, *Hebrews in the Greek New Testament for the English Reader* (Grand Rapids, Mich.: Wm. B. Eerdmans Publishing Co., 1947), 214. ಇದರ ಅರ್ಥವು ಹೀಗಿರಬಹುದು "ಅಧಿಕಾರದಲ್ಲಿರುವವರೊಬ್ಬರ ಮೇಲೆ ಅವಲಂಭಿತರಾಗುವದು" (Koester, 523). [12]Raymond Brown, *The Message of Hebrews: Christ Above All,* The Bible Speaks Today (Downers Grove, Ill.: Inter-Varsity Press, 1982), 230. [13]"ಪ್ರವರ್ತಕ" (RSV; NRSV; ISV) ಎಂಬುದು "ಹುಟ್ಟಿಸುವವನು" (NASB; KJV; NIV) ಎಂಬುದಕ್ಕಿಂತ ಒಂದು ಉತ್ತಮವಾದ ಅನುವಾದವಾಗಿರುತ್ತದೆ. [14]Bruce, 352, 355. [15]Ibid., 352. [16]Ciceroನು ಶಿಲುಬೆಗೇರಿಸುವಿಕೆಯನ್ನು "ಅವಮಾನದ ಮರ" ಎಂದು ಕರೆದನು (Cicero *Defense of Rabirius* 4.13; quoted in Koester, 524). [17]ಈ ಪದವು ಹೊಸ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಸಿಕ್ಕುವದಿಲ್ಲ. [18]Moses Stuart, *A Commentary on the Epistle to the Hebrews* (London: William Tegg & Co., 1856), 505. [19]Lightfoot, *Jesus Christ Today*, 230. [20]ನೋಡಿರಿ 2 ಕೊರಿಂಥ 11:25. ಯಾಕೋಬನಿಗೆ ಕಲ್ಲೆಸೆಯಲ್ಪಡುವ ಘಟಯನೆ ವಿವರಣೆಯೊಂದು Josephus *Antiquities* 20.9.1ದಲ್ಲಿ ಕೊಡಲ್ಪಟ್ಟಿರುತ್ತದೆ. ವಾಚಕರು ಯಾವದೋ ಒಂದು ವಿಧದಲ್ಲಿ ಇನ್ನೂ ಯೆಹೂದಿ ಮತದಲ್ಲಿ ಭಾಗಿಯಾಗಿರುವದಾದಲ್ಲಿ, ಅವರು ಈ ಮುಂಚೆ ಹಿಂಸಿಸಲ್ಪಟ್ಟಿರುವ ಸಾಧ್ಯತೆಯು ಇರಲಿಲ್ಲ.

[21]Wuest, 217. [22]Koesterನು παιδεύω (*paideuō*) ಎಂಬುದು ಉಪದೇಶಿಸುವ ಪ್ರಕ್ರಿಯೆಯು ಮಾತ್ರವೇ ಅಲ್ಲ ಆದರೆ ಶಿಕ್ಷಿತರಾಗುವ ಗುರಿಯು ಸಹ ಆಗಿರುತ್ತದೆ ಎಂದು ಹೇಳಿದನು. ಆತನು ಮುಂದುವರೆದು ಹೀಗೆ ಹೇಳುತ್ತಾನೆ, "ಖಂಡನೆ ಮಾಡುವದು ಮೌಖಿಕವಾಗಿ ತಿದ್ದುವಿಕೆಯಾಗಿತ್ತು ಹೊರತು ದೈಹಿಕವಾಗಿ ದಂಡಿಸುವದಾಗಿರಲಿಲ್ಲ" (ನೋಡಿರಿ ಮತ್ತಾಯ 18:15; 1 ಕೊರಿಂಥ 14:24; ತೀತನಿಗೆ 1:9), ಹಾಗಿದ್ದಾಗ್ಯೂ "ಹೊಡೆಯುತ್ತಾನೆ" ಎಂಬುದು (ವ. 6) "ವ್ಯಾಪಕವಾಗಿ ದೈಹಿಕವಾಗಿ ದಂಡಿಸಲ್ಪಡುವದನ್ನು ಸೂಚಿಸುತ್ತದೆ" (Koester, 527-28). [23]ಈ ಯೋಚನೆಯು 2 Maccabees 6:12, 14-16ರಲ್ಲಿ ವ್ಯಕ್ತಪಡಿಸಲ್ಪಟ್ಟಿದೆ. [24]Donald Guthrie, *The Letter to the Hebrews: An Introduction and Commentary*, The Tyndale New Testament Commentaries (Grand Rapids, Mich.: Wm. B. Eerdmans Publishing Co., 1983), 253. [25]Koester, 528. [26]C. S. Lewis, *The Problem of Pain* (Oxford: N.p., 1940; reprint, New York: Macmillan Publishing Co., 1962), 93. [27]Albert Barnes, *Notes on the New Testament: Hebrews to Jude* (London: Blackie & Son, 1884-85; reprint, Grand Rapids, Mich.: Baker Book House, 1985), 300. [28]Dionysius of Halicarnassus *Roman*

*Antiquities* 2.26.2. [29]Arthur W. Pink, *An Exposition of Hebrews* (Grand Rapids, Mich.: Baker Book House, 1954), 930; Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 749. [30]Guthrie, 253.

[31]G. H. Lang, *The Epistle to the Hebrews: A Practical Treatise for Plain and Serious Readers* (London: Paternoster Press, 1951), 239. [32]NIVಯು ಈ ಪದರಚನೆಯನ್ನು ಉದ್ಧರಣ ಚಿಹ್ನೆಗಳಲ್ಲಿ ಹೊಂದಿದ್ದರೆ, NASBಯು ಹಾಗೆ ಹೊಂದಿರುವದಿಲ್ಲ. [33]Lightfoot, *Jesus Christ Today*, 234. [34]Stedman, 141. [35]Guthrie, 257. [36]Barnes, 301. [37]Koester, 541. [38]Stuart, 510. [39]Bruce, 365. [40]Hughes, 539.

[41]Barnes, 303-4. [42]Bruce, 368. [43]James Thompson, *The Letter to the Hebrews*, The Living Word Commentary (Austin, Tex.: R. B. Sweet Co., 1971), 171. [44]ಈ ಪದದ (προσήλυτος, *prosēlutos*) ನಾಮಪದವು ಮತ್ತಾಯ 23:15ರಲ್ಲಿ ಬಳಸಲ್ಪಟ್ಟಿದೆ. ಈ ಪದವು *proserchomai* ಎಂಬುದರೊಂದಿಗೆ ಸಂಬಂಧ ಹೊಂದಿದ್ದು, "ಹತ್ತಿರಕ್ಕೆ ಹೋಗು, ಸಮ್ಮತಿಸು, ಅಥವಾ ಸಮೀಪಿಸು" ಎಂಬ ಅರ್ಥವನ್ನು ಹೊಂದಿದೆ. [45]Simon J. Kistemaker, *Exposition of the Epistle to the Hebrews*, New Testament Commentary (Grand Rapids, Mich.: Baker Book House, 1984), 392. [46]ಕೀರ್ತನೆ 20:2; 74:2, 3; 78:68, 69; 132:13, 14; 135:21. [47]ಈ ಪದವು ಬಹುವಚನದಲ್ಲಿರುತ್ತದೆ. "ಜ್ಯೇಷ್ಠಪುತ್ರ" ಎಂಬುದರ ಏಕವಚನ ರೂಪವು ರೋಮಾ 8:29ರಲ್ಲಿ ಕ್ರಿಸ್ತನನ್ನು ಸೂಚಿಸುತ್ತದೆ. [48]Bruce, 376. [49]Donald Guthrieನಬ ಪ್ರಕಾರವಾಗಿ, ಇದು ಸರಿಯಾಗಿ ಹೊಂದಿಕೆಯಾಗುತ್ತಾದರೂ, ಸನ್ನಿವೇಶದಲ್ಲಿರುವ ಯಾವದೂ ಈ ಅರ್ಥನಿರೂಪಣೆಗೆ ಬೇಡಿಕೆಯನ್ನಿಡುವದಿಲ್ಲ ಯಾಕೆಂದರೆ "ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ ಸಾರ್ವತ್ರಿಕ ಸಂಘವು" ರಕ್ಷಣೆ ಹೊಂದಿರುವ ಎಲ್ಲರನ್ನು ಸೂಚಿಸುತ್ತದೆ. (Guthrie, 263.) [50]*Enoch* 22:9; 41:8ರಲ್ಲಿ ಉದಾಹರಣೆಗಳು ಕಂಡು ಬರುತ್ತವೆ.

[51]ಉಲ್ಲೇಖಿಸಲ್ಪಟ್ಟಿರುವ ಈ ವಾಕ್ಯಭಾಗವು ಈ ಮುಂಚೆಯೇ ಯೆಹೂದ್ಯ ಬರಹಗಾರರಿಂದ ಮೆಸ್ಸೀಯನಿಗೆ ಸಂಬಂಧಿಸಿದದ್ದೆಂದು ಪರಿಗಣಿಸಲ್ಪಟ್ಟಿತ್ತು. (Gareth L. Reese, *A Critical and Exegetical Commentary on the Epistle to the Hebrews* [Moberly, Mo.: Scripture Exposition Books, 1992], 231, n. 61.) ರಬ್ಬಾನಿಕ ಮೂಲಗಳಿಂದ ಪುರಾವೆಗಳು Leon Morris, "Hebrews," in *The Expositor's Bible Commentary*, ed. Frank E. Gaebelein (Grand Rapids, Mich.: Zondervan Publishing House, 1981), 12:145. [52]ಯೆಶಾಯ 13 ಬಾಬಿಲೋನಿನ ಪತನವನ್ನು ಸೂಚಿಸುತ್ತದೆ ಆದರೆ ಯಾವದೇ ಮಹಾನ್ ಪ್ರಭುತ್ವದ ಅಂತ್ಯವನ್ನು ಸಹ ಸೂಚಿಸುತ್ತದೆ. [53]Reese, 231. [54]Robert Milligan, *A Commentary on the Epistle to the Hebrews*, New Testament Commentaries (Cincinnati: Chase and Hall, 1876; reprint, Nashville: Gospel Advocate Co., 1975), 472. [55]NIVಯಲ್ಲಿ ಈ ಪದಗುಚ್ಛವು ಉದ್ಧರಣ ಚಿಹ್ನೆಗಳಲ್ಲಿದ್ದರೆ, NASBಯಲ್ಲಿ ಹಾಗಿರುವದಿಲ್ಲ. [56]Bruce, 385. [57]Thomas G. Long, *Hebrews*, Interpretation (Louisville: John Knox Press, 1997), 131. [58]James Burton Coffman, *Commentary on Hebrews* (Austin, Tex.: Firm Foundation Publishing House, 1971), 293ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [59]1 ಪೇತ್ರ 1:14, 15ರಲ್ಲಿ, ಪೇತ್ರನು ಯಾಜಕಕಾಂಡ 11:44, 45; 19:2; 20:7ರಿಂದ ಉಲ್ಲೇಖಿಸುತ್ತಾನೆ. [60]Coffman, 300.

[61]Paul Ellingworth and Eugene Albert Nida, *A Translator's Handbook on the Epistle to the Hebrews*, Helps for Translators (New York: United Bible Societies, 1983), 318.